ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 9 ಸೋಮವಾರ 2023

ಸಂಪುಟ: 43 | ಸಂಚಿಕೆ: 263 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕ್ರೆಡಲ್ ಅಧಿಕಾರಿ ಡಿ.ಕೆ.ದಿನೇಶ್‌ಕುಮಾರ್ ಹೃದಯಾಘಾತದಿಂದ ಸಾವು

ಎಫ್‌ಎಸ್‌ಎಲ್ ವರದಿಯಿಂದ ಸ್ಪಷ್ಟ



ಮೈಸೂರು, ಜ.8(ಆರ್‌ಕೆ)–ತೀವ್ರ ಹೃದಯಾಘಾತದಿಂದ ಕ್ರೆಡಲ್ ಅಧಿಕಾರಿ ಡಿ.ಕೆ. ದಿನೇಶ್‌ಕುಮಾರ್ ಸಾವನ್ನಪ್ಪಿದ್ದಾರೆ ಎಂಬುದು ಎಫ್‌ಎಸ್‌ಎಲ್ ವರದಿಯಿಂದ ಸ್ಪಷ್ಟವಾಗಿದೆ ಎಂದು ಪ್ರಕರಣದ ತನಿಖಾಧಿಕಾರಿಯಾದ ಕೆ.ಆರ್.ಉಪವಿಭಾಗದ ಎಸಿಪಿ ಎಸ್.ಇ.ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಇತ್ತೀಚೆಗಷ್ಟೇ ವಿಧಿ ವಿಜ್ಞಾನ ಪ್ರಯೋಗಾಲಯ ಮತ್ತು ಮರಣೋತ್ತರ ಪರೀಕ್ಷಾ ವರದಿಗಳು ಬಂದಿದ್ದು, ದಿನೇಶ್ ಕುಮಾರ್ ಸಾವಿಗೆ ಕೊರೋನರಿ ಹೃದಯ ಬ್ಲಾಕೇಜ್ ಆಗಿರುವುದು ಕಾರಣ ಎಂದು ತಿಳಿದು ಬಂದಿದೆ. ಆ ಮೂಲಕ ▶ 8ನೇ ಪುಟಕ್ಕೆ

ಹಾವೇರಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅದ್ದೂರಿ ತೆರೆ

ಮಂಡ್ಯದಲ್ಲಿ ಮುಂದಿನ ಅಕ್ಷರ ಜಾತ್ರೆ

- ಕನ್ನಡ ನಾಡಿನ ಅಭಿವೃದ್ಧಿಗೆ ಪೂರಕವಾದ ಅಂಶಗಳ ಅನುಷ್ಠಾನಕ್ಕೆ ಸರ್ಕಾರ ಬದ್ಧ
- ಕನ್ನಡ ಹೋರಾಟಗಾರರ ಎಲ್ಲಾ ಕೇಸುಗಳು ವಾಪಸ್: ಮುಖ್ಯಮಂತ್ರಿ ಬೊಮ್ಮಾಯಿ




ಹಾವೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿಣಿ ಸಭೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಮಾತನಾಡಿದರು.

ಹಾವೇರಿ, ಜ.8– ಏಲಕ್ಕಿ ನಾಡು ಹಾವೇರಿಯಲ್ಲಿ ಮೂರು ದಿನಗಳ ಕಾಲ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಭಾನುವಾರ ಅದ್ದೂರಿ ತೆರೆ ಬಿದ್ದಿದ್ದು, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಕ್ಕರೆ ನಾಡು ಮಂಡ್ಯದಲ್ಲಿ ಏರ್ಪಡಿಸಲು ನಿರ್ಧರಿಸಲಾಗಿದೆ.

86ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭ ದಿನ ಹಾವೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿಣಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಸಭೆಯ ನಂತರ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಈ ವಿಷಯ ತಿಳಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರ ಜೊತೆ ಇಂದು ನಡೆದ ಸಭೆಯಲ್ಲಿ ಮಂಡ್ಯದಲ್ಲಿ ಹೆಚ್ಚಿನ ಸದಸ್ಯರು ಸಮ್ಮೇಳನ ನಡೆಸಲು ಒಲವು ತೋರಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು. ಹಾವೇರಿಯಲ್ಲಿ ಕಸಾಪ ಅಧ್ಯಕ್ಷರ ನೇತೃತ್ವದಲ್ಲಿ ಇಂದು ಕಾರ್ಯಕಾರಿಣಿ ಸಮಿತಿ ಸಭೆ ನಡೆದಿದ್ದು, 9 ಜಿಲ್ಲೆಯವರು ತಮ್ಮ ಜಿಲ್ಲೆಯಲ್ಲಿ ಸಮ್ಮೇಳನ ನಡೆಸುವಂತೆ ಮನವಿ ಮಾಡಿದರು. ಈ ಮನವಿಗೆ ಹೆಚ್ಚಿನ ಜನರು ಬೆಂಬಲ ಸೂಚಿಸಿದ ಹಿನ್ನೆಲೆ ಮಂಡ್ಯ ಜಿಲ್ಲೆಯಲ್ಲಿ 87ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ನಿರ್ಧರಿಸಲಾಯಿತು. ▶ 8ನೇ ಪುಟಕ್ಕೆ

ನಾಡಿನ ಅಭಿವೃದ್ಧಿಗೆ ಸರ್ಕಾರ ಬದ್ಧ




ಹಾವೇರಿ, ಜ.8– ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಸಮ್ಮೇಳನದಲ್ಲಿ ನಡೆದ ಗೋಷ್ಠಿಗಳ ವಿಚಾರಗಳನ್ನು ಸಮ್ಮೇಳನಾಧ್ಯಕ್ಷರ ಮೂಲಕ ಪಡೆದು ಕನ್ನಡ ಸಾಹಿತ್ಯ ಹಾಗೂ ಕನ್ನಡ ನಾಡಿನ ಅಭಿವೃದ್ಧಿಗೆ ಪೂರಕವಾಗಿರುವ ಎಲ್ಲಾ ಅಂಶಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಬದ್ಧವಾಗಿದೆ ಎಂದರು.

ಸಮ್ಮೇಳನದಲ್ಲಿ ಕೈಗೊಂಡಿರುವ ನಿರ್ಣಯದಂತೆ ಕನ್ನಡ ಹೋರಾಟಗಾರರ ಮೇಲಿನ ಎಲ್ಲಾ ಕೇಸ್‌ಗಳನ್ನು ವಾಪಸ್ ಪಡೆಯುತ್ತೇವೆ ಎಂದ ಅವರು, ಕನ್ನಡ ಹೋರಾಟಗಾರರ ಕೆಲ ಪ್ರಕರಣಗಳು ನ್ಯಾಯಾಲಯದಲ್ಲಿ ಇವೆ. ಅವುಗಳನ್ನು ಪರಿಶೀಲಿಸಿ ಎಲ್ಲಾ ಕೇಸ್‌ಗಳನ್ನು ವಾಪಸ್ ಪಡೆಯಲು ಪ್ರಯತ್ನಿಸುತ್ತೇವೆ ಎಂದರು. ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ 3 ಕೋಟಿ ಅನುದಾನ ಘೋಷಣೆ ಮಾಡಿದ ಅವರು, ಗಡಿನಾಡಿನ ಅಭಿವೃದ್ಧಿಗೆ ಈಗಾಗಲೇ 25 ಕೋಟಿ ರೂ. ನೀಡಲಾಗಿದೆ. ಪ್ರಸಕ್ತ ವರ್ಷದಲ್ಲಿ ಇನ್ನೂ 100 ಕೋಟಿ ರೂ. ಅನುದಾನ ನೀಡುವುದಾಗಿ ತಿಳಿಸಿದರು.

ಹಾವೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕಂಪು ಇಡೀ ರಾಜ್ಯಕ್ಕೆ ಪಸರಿಸಿದೆ. 2 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದು, ವಿವಿಧ ಗೋಷ್ಠಿಗಳು ನಡೆದಿವೆ. ಸಮ್ಮೇಳನದ ಯಶಸ್ಸಿಗಾಗಿ ▶ 8ನೇ ಪುಟಕ್ಕೆ

ಗಡಿ ಸಮಸ್ಯೆಗಳಿಗೆ ವಲ್ಲಭಬಾಯಿ ಪಟೇಲರು ಕಾರಣ

ದೊಡ್ಡರಂಗೇಗೌಡ ಅಸಮಾಧಾನ



ಹಾವೇರಿ (ಶ್ರೀ ಹಾನಗಲ್ ಕುಮಾರ ಶಿವಯೋಗಿಗಳ ವೇದಿಕೆ), ಜ.8– ಅಂದಿನ ಕೇಂದ್ರ ಗೃಹ ಸಚಿವ ಸರ್ದಾರ್ ವಲ್ಲಭಬಾಯಿ ಪಟೇಲರು ಭಾಷಾವಾರು ಪ್ರಾಂತ ವಿಂಗಡಣೆಯೆಂದು ಭೂಪಟವನ್ನು ಇಟ್ಟುಕೊಂಡು ಅವೈಜ್ಞಾನಿಕವಾಗಿ ಗೆರೆಗಳನ್ನು ಎಳೆದರು. ಗಡಿ ಸಮಸ್ಯೆಗಳಿಗೆ ಅವರೇ ಮೂಲ ಕಾರಣರಾಗಿದ್ದಾರೆ ಎಂದು 86ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ.ದೊಡ್ಡರಂಗೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಸಮ್ಮೇಳನದ ಮೂರನೇ ದಿನ ನಡೆದ ಗಡಿನಾಡು ಮತ್ತು ಹೊರನಾಡು ಕನ್ನಡಿಗರ ತಳಮಳಗಳು ಗೋಷ್ಠಿಯಲ್ಲಿ ಪಾಲ್ಗೊಂಡು ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು. ಭಾಷಾವಾರು ಪ್ರಾಂತ ವಿಂಗಡಣೆ ಇತ್ತೀಚೆಗೆ ಹೊಸ ಹೊಸ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿವೆ. ಗಡಿ ಪ್ರದೇಶದಲ್ಲಿರುವ ಕೆಲವು ಹಳ್ಳಿಗಳು ಮೂರು ರಾಜ್ಯ ಸರ್ಕಾರಗಳ ಆಡಳಿತಕ್ಕೆ ಒಳಪಟ್ಟಿವೆ. ಜನ ಜೀವನದ ಸಂಸ್ಕೃತಿಗೆ ▶ 8ನೇ ಪುಟಕ್ಕೆ

ಆರು ನಿರ್ಣಯಗಳ ಮಂಡನೆ

ಹಾವೇರಿ, ಜ.8–ಭಾನುವಾರ ನಡೆದ ಸಮ್ಮೇಳನದ 'ಬಹಿರಂಗ ಅಧಿವೇಶನ'ದ ಸಭೆಯಲ್ಲಿ ಸರ್ವಾನುಮತದೊಂದಿಗೆ 6 ನಿರ್ಣಯಗಳನ್ನು ಕೈಗೊಳ್ಳಲಾಯಿತು. ಕಸಾಪದ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು ನಿರ್ಣಯಗಳನ್ನು ಮಂಡಿಸಿದರು.

- ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕ ಕೂಡಲೇ ಸುಗ್ರೀವಾಜ್ಞೆ ಮೂಲಕ ಕಾನೂನಿನ ರೂಪ ಪಡೆದು ಶಿಕ್ಷಣ, ನ್ಯಾಯಾಂಗ, ಆಡಳಿತದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು ಎಂದು ರಾಜ್ಯ ಸರ್ಕಾರಕ್ಕೆ ಆಗ್ರಹ.
- ಭಾರತದ ಸಂವಿಧಾನದ 8ನೇ ಪರಿಚ್ಛೇದದ ಅನ್ವಯ ಎಲ್ಲಾ ಪ್ರಾಂತೀಯ ಭಾಷೆಗಳನ್ನು ಸಮಾನ ಎಂದು ಗುರುತಿಸಿದ್ದು, ಈ ಪಟ್ಟಿಯಲ್ಲಿರುವ 22 ಭಾಷೆಗಳಲ್ಲಿ 'ಕನ್ನಡ' ಕರ್ನಾಟಕದ ಸಾರ್ವಭೌಮ ಭಾಷೆ. ಇದರ ಮೇಲೆ ಹಿಂದಿ ಅಥವಾ ಇನ್ಯಾವುದೇ ಭಾಷೆಯ ಆಕ್ರಮಣ ಹಾಗೂ ಹೇರಿಕೆಯನ್ನು ಈ ಸಮ್ಮೇಳನ ತೀವ್ರವಾಗಿ ಖಂಡಿಸುತ್ತದೆ.
- ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದ ಸಂಬಂಧ ಇರುವ ಮಹಾಜನ ವರದಿಯು, ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿರುವುದರಿಂದ, ಕೋರ್ಟ್‌ನ ಅಂತಿಮ ತೀರ್ಪಿನ ಮಾರ್ಗದರ್ಶನದಂತೆ ಸೂಕ್ತ ಕ್ರಮವನ್ನು ವಿಳಂಬವಿಲ್ಲದೇ ಕೈಗೊಳ್ಳಬೇಕು.
- ಕನ್ನಡಕ್ಕಾಗಿ ಹೋರಾಡಿದ ಕನ್ನಡ ಚಳುವಳಿಗಾರರ ಮೇಲಿನ ಈ ಸಂಬಂಧಿತ ಮೊಕದ್ದಮೆಗಳನ್ನು ಸರ್ಕಾರ ಹಿಂಪಡೆಯಬೇಕು.
- 'ವಿಶ್ವ ಕನ್ನಡ ಸಮ್ಮೇಳನ'ವನ್ನು ದಾವಣಗೆರೆಯಲ್ಲಿ ನಡೆಸಬೇಕೆನ್ನುವ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದ್ದು ಅದನ್ನು ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಜರುಗಿಸಬೇಕು ಮತ್ತು ನಿಯೋಜಿತ ಸಮ್ಮೇಳನದ ಸಂಬಂಧ ಸರ್ಕಾರ ನಡೆಸುವ ಸಭೆಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂಬುದು ಒಕ್ಕೊರಲಿನ ಆಗ್ರಹ.
- 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟ ಸ್ವಾಗತ ಸಮಿತಿ ಹಾಗೂ ವಿವಿಧ ಸಮಿತಿಗಳ ಅಧ್ಯಕ್ಷರು, ಪದಾಧಿಕಾರಿಗಳು, ಜಿಲ್ಲಾಡಳಿತ, ಎಲ್ಲ ಕಾರ್ಯಕರ್ತರಿಗೂ ಮತ್ತು ಆತಿಥ್ಯ ನೀಡಿದ ಹಾವೇರಿಯ ಸಮಸ್ತರಿಗೂ ಮಹಾಸಭೆಯು ಕೃತಜ್ಞತೆ ಸಲ್ಲಿಸಿದೆ.

ಸಿಎಫ್‌ಟಿಆರ್‌ಐ ಆಯ್ತು ಈಗ 'ಆಕಾಶವಾಣಿ'ಯಲ್ಲಿ ಚಿರತೆ ಪ್ರತ್ಯಕ್ಷ

- ಜನರೇಟರ್ ಬಳಿ ಚಿರತೆ ಕಂಡದ್ದಾಗಿ ಸಿಬ್ಬಂದಿ ಹೇಳಿಕೆ
- ಕೂಂಬಿಂಗ್ ಕಾರ್ಯಾಚರಣೆ ನಡೆಸಿ ಸುಸ್ತಾದ ಅರಣ್ಯ ಸಿಬ್ಬಂದಿ





ಆಕಾಶವಾಣಿ ಆವರಣದಲ್ಲಿ ಚಿರತೆ ಪತ್ತೆಗೆ ಕೂಂಬಿಂಗ್. ಬಲಚಿತ್ರದಲ್ಲಿ ಚಿರತೆ ಚಲನ–ವಲನ ಪತ್ತೆಗೆ ಕ್ಯಾಮರಾ ಟ್ರ್ಯಾಪ್ ಅಳವಡಿಕೆ.

ಮೈಸೂರು,ಜ.8(ಎಂಟಿವೈ)– ಮೈಸೂರಿನ ಹಲವೆಡೆ ಈಗ ಚಿರತೆ ಸದ್ದು ಮಾಡುತ್ತಿದೆ. ತಿಂಗಳಲ್ಲಿ 5 ಗಂಡು ಚಿರತೆ ಸಿಕ್ಕಿದ್ದರೆ, ಎರಡು ದಿನದ ಹಿಂದಷ್ಟೇ ಅಪರಿಚಿತ ವಾಹನಕ್ಕೆ ಗಂಡು ಚಿರತೆಯೊಂದು ಸಿಕ್ಕಿ ಮೃತಪಟ್ಟಿತ್ತು. ಭಾನುವಾರ ಬೆಳಗ್ಗೆಯೇ ಮೈಸೂರಿನ ಆಕಾಶವಾಣಿ ಆವರಣದಲ್ಲಿ ಚಿರತೆ ಪ್ರತ್ಯಕ್ಷವಾಗಿರುವ ದೂರು ಕೇಳಿಬಂದ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿಗಳ ತಂಡ ಕೂಂಬಿಂಗ್ ಕಾರ್ಯಾಚರಣೆ ಮಾಡಿ ಹೈರಾಣಾದರು.

ಐದು ದಿನದ ಹಿಂದಷ್ಟೇ ಸಿಎಫ್‌ಟಿಆರ್‌ಐ ಆವರಣದಲ್ಲಿ ಜೋಡಿ ಚಿರತೆ ಕಾಣಿಸಿಕೊಂಡಿದೆ ಎಂದು ಭದ್ರತಾ ಸಿಬ್ಬಂದಿ ತಿಳಿಸಿದ್ದರಿಂದ ಸಿಎಫ್‌ಟಿಆರ್‌ಐ ಆವರಣದಲ್ಲಿ ಆತಂಕ ಮನೆ ಮಾಡಿತ್ತು. ಮುಂಜಾಗ್ರತಾ ಕ್ರಮವಾಗಿ ಈ ಎರಡು ದಿನಗಳ ಕಾಲ ಸಿಎಫ್‌ಟಿಆರ್‌ಐ ಶಾಲೆಗೆ ರಜೆ ಘೋಷಿಸಲಾಗಿತ್ತು. ಮೂರೂ ದಿನಗಳ ಸತತ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರೂ ಚಿರತೆ ಸುಳಿವು ದೊರೆತಿರಲಿಲ್ಲ. 20 ಕ್ಯಾಮರಾ ಟ್ರ್ಯಾಪ್, 1 ಬೋನ್ ಇಟ್ಟಿದ್ದರೂ ಚಿರತೆ ಮಾತ್ರ ಕಾಣಿಸಿಕೊಂಡಿರಲಿಲ್ಲ. ಆದರೆ ಇಂದು ಬೆಳಗ್ಗೆ ಮೈಸೂರಿನ ಆಕಾಶವಾಣಿ ಆವರಣದಲ್ಲಿ ಚಿರತೆ ಕಾಣಿಸಿಕೊಂಡಿದೆ ಎಂದು ಅಲ್ಲಿನ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದ್ದಾರೆ. ಇದರಿಂದ ಆಕಾಶವಾಣಿ ಆವರಣದಲ್ಲಿ ಆತಂಕ ಉಂಟಾಗಿತ್ತು. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಎಸಿಎಫ್ ಲಕ್ಷ್ಮೀಕಾಂತ್, ಆರ್‌ಎಫ್‌ಓ ಸುರೇಂದ್ರ ನೇತೃತ್ವದ ಅರಣ್ಯ ಸಿಬ್ಬಂದಿಗಳ ತಂಡ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರೂ, ಯಾವುದೇ ಸುಳಿವು ದೊರೆಯಲಿಲ್ಲ. ಸಿಎಫ್‌ಟಿಆರ್‌ಐ ಆವರಣದಲ್ಲಿ ದಟ್ಟ ಪೊದೆ ಇಲ್ಲದೇ ಇದ್ದರೂ, ಕುರುಚಲು ಕಾಡಿನಂತಹ ಗಿಡಗಳಿವೆ. ಈ ಹಿನ್ನೆಲೆಯಲ್ಲಿ ಚಿರತೆ ಸೇರಿದಂತೆ ಯಾವುದೇ ಪ್ರಾಣಿಗಳು ಓಡಾಡಿದರೂ, ಅದು ಕಾಣಸಿಗುತ್ತದೆ. ಆದರೆ ಬೆಳಗ್ಗೆ 5.15ರಿಂದ 6 ಗಂಟೆ ಸಮಯದಲ್ಲಿ ▶ 8ನೇ ಪುಟಕ್ಕೆ

ರೈತನ ಬಲಿ ಪಡೆದ ಎತ್ತಿನಗಾಡಿ ಓಟದ ಸ್ಪರ್ಧೆ

ಆಯೋಜಕರು ಪರಾರಿ; ಚಿಕ್ಕಮಂಡ್ಯ ಗ್ರಾಮದಲ್ಲಿ ದುರ್ಘಟನೆ



ನಾಗರಾಜು



ಮಂಡ್ಯ,ಜ.8–ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ಎತ್ತಿನಗಾಡಿ ಹರಿದು ರೈತ ಸಂಘದ ಕಾರ್ಯಕರ್ತನೊಬ್ಬ ಸ್ಥಳದಲ್ಲಿಯೇ ಮೃತಪಟ್ಟು ಮತ್ತೊಬ್ಬ ಬಾಲಕ ಗಂಭೀರವಾಗಿ ಗಾಯಗೊಂಡಿರುವ ಘಟನೆ ಭಾನುವಾರ ಸಂಜೆ 4 ಗಂಟೆ ಸುಮಾರಿಗೆ ಮಂಡ್ಯ ತಾಲೂಕಿನ ಚಿಕ್ಕಮಂಡ್ಯ ಗ್ರಾಮದಲ್ಲಿ ನಡೆದಿದೆ.

ರೈತ ಸಂಘದ ಕಾರ್ಯಕರ್ತ ಹಾಗೂ ಆರ್ಗ್ಯಾನಿಕ್ ಮಂಡ್ಯ ಸಂಸ್ಥೆಯ ಫೀಲ್ಡ್ ಎಕ್ಸಿಕ್ಯುಟಿವ್ ಆಗಿದ್ದ ಕೀಲಾರ ಗ್ರಾಮದ ನಾಗರಾಜು(55)ಎಂಬುವರು ಎತ್ತಿನಗಾಡಿ ಹರಿದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟರೆ, ಹುಲಿವಾನ ಗ್ರಾಮದ ಹೃತಿಕ್ (10) ಬಾಲಕ ಗಾಯಗೊಂಡು ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದು, ಈತನ ಸ್ಥಿತಿ ಗಂಭೀರವಾಗಿದ್ದು, ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾನೆ. ಚಿಕ್ಕಮಂಡ್ಯ ಗ್ರಾಮದ ಬಳಿ ಕೀಲಾರ ಮಧು, ಚಿಕ್ಕಮಂಡ್ಯದ ನರಸಿಂಹ, ರಾಜಪ್ಪ ಹಾಗೂ ಆನಂದ ಎಂಬುವರು ಸೇರಿ ರಾಜ್ಯಮಟ್ಟದ ಎತ್ತಿನಗಾಡಿ ಓಟದ ಸ್ಪರ್ಧೆ ಏರ್ಪಡಿಸಿದ್ದರು. ಈ ಸ್ಪರ್ಧೆಗೆ ಸ್ಥಳೀಯವಾಗಿ ಪಂಚಾಯಿತಿಯಿಂದ ಅಧಿಕೃತವಾಗಿ ಪರವಾನಗಿ ಪಡೆದಿರಲಿಲ್ಲ. ಕಂದಾಯ ಅಧಿಕಾರಿ ಕೂಡ ಪರವಾನಗಿ ನೀಡಿರಲಿಲ್ಲ. ಈ ಬಗ್ಗೆ ಅವರು ▶ 8ನೇ ಪುಟಕ್ಕೆ

ಮೈಸೂರು-ಬೆಂಗಳೂರು ದಶಪಥ ಹೆದ್ದಾರಿಗೆ

ಕಾವೇರಿ ಎಕ್ಸ್‌ಪ್ರೆಸ್ ವೇ ಅತೀ ಸೂಕ್ತವಾದ ಹೆಸರು



ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಪ್ರತಿಪಾದನೆ



> "ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮತ್ತು ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರುಗಳು ಮುತ್ಸದ್ದಿ ನಾಯಕರಾಗಿದ್ದು, ಅವರ ಮೇಲೆ ನನಗೆ ಅತೀವ ಗೌರವವಿದೆ. ಆದರೆ ಇತಿಹಾಸ, ಸಂಸ್ಕೃತಿ, ಸಂಪ್ರದಾಯಗಳೊಂದಿಗೆ ಭಾವನಾತ್ಮಕ ಸಂಬಂಧವಿರುವ ಹಾಗೂ ಪವಿತ್ರ ನದಿಗಳ ಬಗ್ಗೆ ನಂಬಿಕೆ ಇರುವುದರಿಂದ ಮೈಸೂರು, ಕೊಡಗು, ಮಂಡ್ಯ ಜಿಲ್ಲೆಗಳ ಜೀವನದಿಯಾಗಿರುವ ಕಾವೇರಿ ಕೊಡಗಿನಲ್ಲಿ ಉಗಮವಾಗಿ ಬೆಂಗಳೂರುವರೆಗೂ ಹರಿಯುವುದರಿಂದ ಮೈಸೂರು–ಬೆಂಗಳೂರು ಹೆದ್ದಾರಿಯನ್ನು 'ಕಾವೇರಿ ಎಕ್ಸ್‌ಪ್ರೆಸ್ ವೇ' ಎಂದು ಕರೆಯುವುದೇ ಸೂಕ್ತ
> –ಪ್ರತಾಪ ಸಿಂಹ, ಮೈಸೂರು–ಕೊಡಗು ಲೋಕಸಭಾ ಸದಸ್ಯ

ಮೈಸೂರು,ಜ.8(ಆರ್‌ಕೆ)–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಗೆ ಹೆಸರಿಡುವ ವಿಚಾರ ಈಗ ಮುನ್ನೆಲೆಗೆ ಬಂದಿದೆ. ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ ಮಾತ್ರವಲ್ಲದೆ ಹಲವಾರು ಪ್ರಜ್ಞಾವಂತ ನಾಗರಿಕರು 'ಕಾವೇರಿ ಎಕ್ಸ್‌ಪ್ರೆಸ್ ವೇ' ಎಂದು ನಾಮಕರಣ ಮಾಡಬೇಕೆಂಬ ನಿಲುವನ್ನು ಪ್ರತಿಪಾದಿಸುತ್ತಿದ್ದಾರೆ.

ಮೈಸೂರು–ಬೆಂಗಳೂರು ಹೆದ್ದಾರಿಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ಎಕ್ಸ್‌ಪ್ರೆಸ್ ವೇ' ಎಂಬುದಾಗಿ ನಾಮಕರಣ ಮಾಡಬೇಕೆಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್, ವಿಧಾನಪರಿಷತ್ ಸದಸ್ಯರಾದ ಮಧು ಮಾದೇಗೌಡ ಮತ್ತು ದಿನೇಶ್ ಗೂಳೀಗೌಡ ಅವರು ಕೇಂದ್ರ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದು ಮನವಿ ಮಾಡಿರುವ ಬಗ್ಗೆ 'ಮೈಸೂರು ಮಿತ್ರ' ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ಪ್ರತಾಪ ಸಿಂಹ, ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರನ್ನು ಹಲವು ವರ್ಷಗಳ ಹಿಂದೆಯೇ ನಾಮಕರಣ ಮಾಡಲಾಗಿದೆ. ತಾವು ಸಂಸದರಾದ ನಂತರ ಮೈಸೂರು ಮತ್ತು ಬೆಂಗಳೂರು ನಡುವೆ ಸಂಚರಿಸುವ ಒಂದು ರೈಲಿಗೆ ಒಡೆಯರ್ ಅವರ ಹೆಸರನ್ನು ನಾಮಕರಣ ಮಾಡಲಾಗಿದೆ. ಶೀಘ್ರದಲ್ಲೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಮಾರ್ಪಡಲಿರುವ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ನಾಮಕರಣ ಮಾಡಬೇಕೆಂಬ ತನ್ನ ಪ್ರಸ್ತಾವನೆಗೆ ಅಂಗೀಕಾರ ದೊರೆತಿದ್ದು, ಸದ್ಯದಲ್ಲೇ ಅಧಿಕೃತವಾಗಿ ಪ್ರಕಟಗೊಳ್ಳಲಿದೆ. ಅಲ್ಲದೆ, ದೇಶದ ವಿವಿಧೆಡೆ ನಿರ್ಮಿಸಿರುವ ಅಥವಾ ನಿರ್ಮಾಣ ಹಂತದಲ್ಲಿರುವ ಮಧ್ಯಪ್ರದೇಶ, ಉತ್ತರ ಪ್ರದೇಶದ ಎಕ್ಸ್‌ಪ್ರೆಸ್ ವೇಗಳಿಗೆ 'ಪವಿತ್ರ ಗಂಗಾ', 'ಯಮುನಾ' ಮತ್ತು 'ನರ್ಮದಾ' ನದಿಗಳ ಹೆಸರಿಟ್ಟಿರುವ ಉದಾಹರಣೆಗಳಿವೆ. ಹೀಗಾಗಿ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ 'ಕಾವೇರಿ ಎಕ್ಸ್‌ಪ್ರೆಸ್ ವೇ' ಎಂದು ಹೆಸರಿಡುವಂತೆ ನಾನು ಸಲಹೆ ನೀಡಿದ್ದೇನೆ ಎಂದರು.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ನಾಮಕರಣ ಕುರಿತು ತಾವು ಈಗಾಗಲೇ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದಿದ್ದು, ಈ ಎಕ್ಸ್‌ಪ್ರೆಸ್ ವೇಯಿಂದ ಆರ್ಥಿಕ ಅಭಿವೃದ್ಧಿ, ಸೋಷಿಯಲ್ ಇನ್‌ಕ್ಲೂಷನ್, ಸಬಲೀಕರಣ ಹಾಗೂ ಪರಿಸರ ಸಂರಕ್ಷಣೆಯಂತಹ ಬಹುಪಯೋಗವಾಗುತ್ತದೆ. ಅದೇ ರೀತಿ ಕರ್ನಾಟಕದ ಕೊಡಗಿನಲ್ಲಿ ಜನ್ಮ ತಾಳುವ ಕಾವೇರಿಯು ಈ ಭಾಗದ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿದ್ದು, ಮುಂದಿನ ತಲೆಮಾರಿನವರೂ ಈ ಜೀವನದಿಯ ಫಲಾನುಭವಿಗಳಾಗುವುದರಿಂದ ಮೈಸೂರು–ಬೆಂಗಳೂರು 'ಕಾವೇರಿ ಎಕ್ಸ್‌ಪ್ರೆಸ್ ವೇ' ಎಂದು ನಾಮಕರಣ ಮಾಡುವುದು ಸೂಕ್ತ ಎಂದು ಪ್ರತಿಪಾದಿಸಿದ್ದಾರೆ.

ಏನೇ ಆಗಲೀ ಕೆಆರ್‌ಎಸ್, ಮೈಸೂರು ವಿಮಾನ ನಿಲ್ದಾಣದ ನಂತರ ಮೈಸೂರು–ಬೆಂಗಳೂರು ನಗರಗಳಿಗೆ ಸಂಪರ್ಕ ಕಲ್ಪಿಸುವ ರೈಲಿಗೆ 'ಒಡೆಯರ್ ಎಕ್ಸ್‌ಪ್ರೆಸ್' ಎಂದು ಹೆಸರಿಟ್ಟಿರುವುದು ರಾಜಮನೆತನದವರು ಈ ಭಾಗದ ಆರ್ಥಿಕ ಅಭಿವೃದ್ಧಿಗೆ ನೀಡಿದ ಕೊಡುಗೆ ಗುರ್ತಿಸುವ ಸಲುವಾಗಿಯೇ ಎಂದ ಪ್ರತಾಪ ಸಿಂಹ, ನಂತರ ಮುಂದುವರೆದು ಮಾತನಾಡಿ, ಈ ಹೊಸ ಎಕ್ಸ್‌ಪ್ರೆಸ್ ವೇಗೆ ಕಾವೇರಿ ಎಕ್ಸ್‌ಪ್ರೆಸ್ ವೇ ಎಂದು ನಾಮಕರಣ ಮಾಡುವುದೇ ಸರಿಯಾದ ಆಯ್ಕೆ ಎಂದರು. ಫೆಬ್ರವರಿ ಕಡೇ ವಾರದಲ್ಲಿ ಈ ಹೆದ್ದಾರಿಯನ್ನು ಪ್ರಧಾನಿ ಮೋದಿ ಅವರಿಂದ ಉದ್ಘಾಟಿಸಲು ಉದ್ದೇಶಿಸಲಾಗಿದೆ.

ಮೈಸೂರು ಮಿತ್ರ ಸೋಮವಾರ 9 ಜನವರಿ 2023

ಇಂದು ಸಿದ್ದರಾಮಯ್ಯ ಕೋಲಾರ ಭೇಟಿ: ಸ್ಪರ್ಧೆ ಘೋಷಣೆ ಸಾಧ್ಯತೆ



ಕೋಲಾರ, ಜ.8– ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಜ.9ರಂದು ನಗರಕ್ಕೆ ಭೇಟಿ ನೀಡುತ್ತಿದ್ದು, ಕೋಲಾರ ಕ್ಷೇತ್ರದ ಕಾರ್ಯಕರ್ತರ ಸಭೆ ನಡೆಸಲಿದ್ದಾರೆ. ಸ್ಪರ್ಧೆ ವಿಚಾರವಾಗಿ ಅವರು ಮಹತ್ವದ ಘೋಷಣೆ ಮಾಡಲಿದ್ದಾರೆ ಎಂದು ಪಕ್ಷದ ಸ್ಥಳೀಯ ಶಾಸಕರು ಹೇಳಿಕೊಂಡು ಓಡಾಡುತ್ತಿದ್ದಾರೆ. ಆದರೆ, ಜಿಲ್ಲೆಯಲ್ಲಿ ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ (ಕೆಎಚ್‌ಎಂ) ಹಾಗೂ ಶಾಸಕ ಕೆ.ಆರ್.ರಮೇಶ್‌ಕುಮಾರ್ (ಕೆಆರ್‌ಆರ್) ಬಣಗಳ ನಡುವಿನ ಮುನಿಸು ಮುಂದುವರಿದಿದೆ.

ಎರಡೂ ಬಣಗಳು ಇನ್ನೂ ಒಂದಾಗಿಲ್ಲ. ಸಿದ್ದರಾಮಯ್ಯ ಕಾರ್ಯಕ್ರಮಕ್ಕೆ ಕಾರ್ಯಕರ್ತರನ್ನು ಸೇರಿಸಲು ರಮೇಶ್ ಕುಮಾರ್ ನೇತೃತ್ವದ ಘಟಬಂಧನ್ ಹಳ್ಳಿ ಹಳ್ಳಿ ತಿರುಗಾಡಿ ಸಭೆ ನಡೆಸುತ್ತಿದೆ. ಶಾಸಕರಾದ ಕೃಷ್ಣಬೈರೇಗೌಡ, ಕೆ.ಶ್ರೀನಿವಾಸಗೌಡ, ವಿಧಾನಪರಿಷತ್ ಸದಸ್ಯರಾದ ನಸೀರ್ ಅಹ್ಮದ್, ಎಂ.ಎಲ್.ಅನಿಲ್ ಕುಮಾರ್, ಮುಖಂಡ ವಿ.ಆರ್.ಸುದರ್ಶನ್ ಸೇರಿದಂತೆ ಹಲವರು ಪಾಲ್ಗೊಳ್ಳುತ್ತಿದ್ದಾರೆ. ಆದರೆ, ಈ ಸಭೆಯಲ್ಲಿ ಮುನಿಯಪ್ಪ ಬಣದ ಒಬ್ಬರೂ ಕಾಣಿಸಿಕೊಳ್ಳುತ್ತಿಲ್ಲ. ವಿಶೇಷವೆಂದರೆ ಮುನಿಯಪ್ಪ ಬಣದಲ್ಲಿ ಇರುವ ಹಲವರು ಜಿಲ್ಲೆಯ ವಿವಿಧ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳೇ ಆಗಿದ್ದಾರೆ.

ಮುನಿಯಪ್ಪ ಹಾಗೂ ಅವರ ಬೆಂಬಲಿಗರು ಬುಧವಾರವಷ್ಟೇ ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಬಂದಿದ್ದರು. ಈ ಸಂದರ್ಭದಲ್ಲಿ ಕೋಲಾರದ ರಾಜಕೀಯ ವಿದ್ಯಮಾನಗಳ ಬಗ್ಗೆ ಮುನಿಯಪ್ಪ ವಿವರಿಸಿದ್ದಾರೆ. ತಾವು ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸುವುದಾದರೆ ನಮ್ಮ ಯಾವುದೇ ಆಕ್ಷೇಪ ಇಲ್ಲ. ಆದರೆ, ಜಿಲ್ಲೆಯಲ್ಲಿ ಪಕ್ಷದೊಳಗಿರುವ ಆಂತರಿಕ ಸಮಸ್ಯೆ ಬಗೆಹರಿಸಿಕೊಂಡು ಬರಬೇಕು. ಆಗ ಮಾತ್ರ ತಮಗೆ ಒಳ್ಳೆಯದಾಗುತ್ತದೆ. ಇಲ್ಲದಿದ್ದಲ್ಲಿ ತಮ್ಮನ್ನು ಹರಕೆ ಕುರಿ ಮಾಡುವುದರಲ್ಲಿ ಯಾವುದೇ ಸಂಶಯ ಇಲ್ಲ. ಎಂಬ ಎಚ್ಚರಿಕೆಯನ್ನೂ ನೀಡಿದ್ದರು. ಸಮಸ್ಯೆ ಬಗೆಹರಿಸದೆ ಬಂದರೆ ವೇದಿಕೆ ಹಂಚಿಕೊಳ್ಳಲು ಆಗುವುದಿಲ್ಲ. ಕಳೆದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕಿಸಿ ನನ್ನನ್ನು ಸೋಲಿಸಿದವರ ಜೊತೆ ವೇದಿಕೆ ಹಂಚಿಕೊಳ್ಳುವಷ್ಟು ಆತ್ಮವಂಚಕ ನಾನಲ್ಲ ಎಂದಿದ್ದಾರೆ. ಈ ನಡುವೆ, ಭಾನುವಾರ ಚಿತ್ರದುರ್ಗದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕಾಂಗ್ರೆಸ್‌ನ ಐಕ್ಯತಾ ಸಮಾವೇಶ ಆಯೋಜಿಸಲಾಗಿದೆ. ಇದರಲ್ಲಿ ಮುನಿಯಪ್ಪ ಕೂಡ ಪಾಲ್ಗೊಳ್ಳಲಿದ್ದಾರೆ. ಹೀಗಾಗಿ, ಜ.9ರ ಕೋಲಾರ ಭೇಟಿಯನ್ನು ಮುಂದೂಡುವಂತೆ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿರುವುದು ತಿಳಿದುಬಂದಿದೆ.

ಕೋವಿಡ್ ನಿಯಮ ಉಲ್ಲಂಘನೆ: ಸಿದ್ದು, ಡಿಕೆಶಿ ಸೇರಿ 13 ಮಂದಿಗೆ ಸಮನ್ಸ್

ಬೆಂಗಳೂರು, ಜ.8– ಕೊರೊನಾ ನಿಯಮ ಉಲ್ಲಂಘಿಸಿ ಆದಾಯ ತೆರಿಗೆ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದ 13 ಮಂದಿ ಕಾಂಗ್ರೆಸ್ ನಾಯಕರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.

ಜನವರಿ 9ರಂದು ವಿಚಾರಣೆಗೆ ಹಾಜರಾಗುವಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್, ಯು.ಟಿ. ಖಾದರ್, ವೀರಪ್ಪ ಮೊಯ್ಲಿ, ಕೆ.ಜೆ.ಜಾರ್ಜ್, ರಿಜ್ವಾನ್ ಅರ್ಷದ್, ಟಿ.ಬಿ.ಜಯಚಂದ್ರ, ಎಂ.ನಾರಾಯಣಸ್ವಾಮಿ, ಪರಮೇಶ್ವರ್ ನಾಯ್ಕ್, ಸಲೀಂ ಅಹ್ಮದ್, ಶಾಸಕಿ ಸೌಮ್ಯಾ ರೆಡ್ಡಿ, ಕೆಪಿಸಿಸಿ ಯುವ ಘಟಕದ ಅಧ್ಯಕ್ಷ ನಲಪಾಡ್ ಅವರಿಗೆ ಸಮನ್ಸ್ ಜಾರಿ ಮಾಡಿದೆ. ಕಾಂಗ್ರೆಸ್ ನಾಯಕರ ನಿವಾಸದ ಮೇಲೆ ದಾಳಿ ಖಂಡಿಸಿ, ಕೋವಿಡ್ ಸಮಯದಲ್ಲಿ ಕಾಂಗ್ರೆಸ್ ನಾಯಕರು ಆದಾಯ ತೆರಿಗೆ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದರು. ಕೊರೊನಾ ಮಾರ್ಗಸೂಚಿ ಗಾಳಿಗೆ ತೂರಿ ಪ್ರತಿಭಟನೆ ನಡೆಸಿದ್ದ ಕಾಂಗ್ರೆಸ್ ನಾಯಕರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಈಗ ಸಮನ್ಸ್ ನೀಡಿದೆ.

ದೇಶದಲ್ಲೇ ಅತೀ ಹೆಚ್ಚು ಹುಲಿ ಹೊಂದಿರುವ ಕೀರ್ತಿ ಕರ್ನಾಟಕಕ್ಕೆ!

ಬೆಂಗಳೂರು,ಜ.8– ಕರ್ನಾಟಕ ಅತೀ ಹೆಚ್ಚು ಹುಲಿಗಳನ್ನು ಹೊಂದಿರುವ ರಾಜ್ಯ ಎಂಬ ಕೀರ್ತಿಗೆ ಪಾತ್ರವಾಗುವ ಸಾಧ್ಯತೆ ಇದೆ. 2018ರ ಗಣತಿ ಪ್ರಕಾರ 526 ಹುಲಿಗಳಿದ್ದ ಮಧ್ಯಪ್ರದೇಶ ಈ ಹೆಗ್ಗಳಿಕೆ ಹೊಂದಿತ್ತು. ಆ ವೇಳೆ ಕರ್ನಾಟಕದಲ್ಲಿ 524 ಹುಲಿಗಳನ್ನು ಗುರುತಿಸಲಾಗಿತ್ತು. ಆದರೆ ಕಳೆದ ವರ್ಷ ಮಧ್ಯಪ್ರದೇಶದಲ್ಲಿ 34 ಹಾಗೂ ಕರ್ನಾಟಕದಲ್ಲಿ 15 ಹುಲಿಗಳು ಸಾವನ್ನಪ್ಪಿವೆ. ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಹುಲಿ ಗಣತಿ 2022ರಲ್ಲಿ ಪ್ರಾರಂಭಗೊಂಡಿದ್ದು ಸದ್ಯದಲ್ಲೇ ವರದಿ ಪ್ರಕಟಿಸುವ ಸಾಧ್ಯತೆ ಇದೆ. ಅದರನ್ವಯ ಕರ್ನಾಟಕಕ್ಕೆ ಹುಲಿಗಳ ರಾಜ್ಯ ಪಟ್ಟ ಸಿಗಬಹುದೆಂದು ಅಂದಾಜಿಸಲಾಗಿದೆ.



ಹುಲಿಗಳ ಸಾವಿನ ಸಂಖ್ಯೆ ಗಣತಿ ವೇಳೆ ತಿಳಿದು ಬಂದಿದ್ದು, ಮಧ್ಯಪ್ರದೇಶದಲ್ಲಿ ನಿಗೂಢವಾಗಿ ಹುಲಿಗಳು ಸಾವನ್ನಪ್ಪಿರುವ ಸಂಬಂಧ ಅರಣ್ಯಾಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (NTCA)ದ ವೆಬ್‌ಸೈಟ್‌ನಲ್ಲಿ ಮಧ್ಯಪ್ರದೇಶವು 2022 ರಲ್ಲಿ 34 ಹುಲಿಗಳನ್ನು ಕಳೆದುಕೊಂಡಿದೆ. ಆದರೆ ಹುಲಿ ರಾಜ್ಯ ಸ್ಥಾನಮಾನದ ತೀರಾ ಹತ್ತಿರದ ಪ್ರತಿಸ್ಪರ್ಧಿ ಕರ್ನಾಟಕ 15 ಹುಲಿಗಳನ್ನು ಕಳೆದುಕೊಂಡಿದೆ. ಹಿಂದಿನ ವರ್ಷ ಇಡೀ ದೇಶದಲ್ಲಿ ಒಟ್ಟು 117 ಹುಲಿಗಳು ಸಾವನ್ನಪ್ಪಿರುವುದಾಗಿ ಪ್ರಕಟಿಸಲಾಗಿದೆ. ಹುಲಿಗಳ ಸರಾಸರಿ ವಯಸ್ಸು 12–18 ವರ್ಷಗಳಾಗಿದ್ದು, ಇದರ ಮಾನದಂಡದಲ್ಲಿ ವಾರ್ಷಿಕ ಸುಮಾರು 40 ಹುಲಿಗಳ ಸಾವನ್ನು ಸಹಜ ಪ್ರಕರಣವೆಂದು ಭಾವಿಸಬಹುದು. ಆದರೆ ಇಷ್ಟೊಂದು ಸಂಖ್ಯೆಯ ಹುಲಿ ಸಾವಿಗೆ ಕಾರಣ ತಿಳಿಯಬೇಕಿದೆ. ಗಣತಿ ಪ್ರಕಾರ ಭಾರತದಲ್ಲಿ ಹುಲಿಗಳ ಅಂದಾಜು ಸಂಖ್ಯೆ 2006ರಲ್ಲಿ 1,411 ಹಾಗೂ 2018ರಲ್ಲಿ 2,967 ಎಂದು ಪರಿಗಣಿಸಲಾಗಿದ್ದು, ಪ್ರಸಕ್ತ ಗಣತಿ ವರದಿ ಪ್ರಕಟವಾದ ಬಳಿಕ ಇಂದಿನ ಸಂಖ್ಯೆ ತಿಳಿಯಬೇಕಿದೆ.



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 250ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ತ್ರಿಚೂರ್ ಸಹೋದರರಾದ ಕೃಷ್ಣ ಮೋಹನ್ ಮತ್ತು ರಾಮಕುಮಾರ್ ಮೋಹನ್ ದ್ವಂದ್ವ ಗಾಯನ ಪ್ರಸ್ತುತಪಡಿಸಿದರು. ಪಕ್ಕವಾದ್ಯದಲ್ಲಿ ತ್ರಿಚೂರ್ ಮೋಹನ್, ಜಿ.ಸುರೇಶ್ ಹಾಗೂ ವಿಶ್ವೇಶ್ ಚಂದ್ರಶೇಖರ್ ಇದ್ದಾರೆ.

ಬಸ್ ಟೈರ್ ಪಂಕ್ಚರ್ ಆಗಿ ಮತ್ತೊಂದು ಬಸ್‌ಗೆ ಡಿಕ್ಕಿ: 40 ಸಾವು, 78 ಮಂದಿಗೆ ಗಾಯ

ಡಾಕರ್, ಜ.8– ಭೀಕರ ಬಸ್ ಅಪಘಾತದಲ್ಲಿ 40 ಮಂದಿ ದುರ್ಮರಣಕ್ಕೀಡಾಗಿದ್ದು, ಹಲವರು ಗಾಯಗೊಂಡಿರುವ ದಾರುಣ ಘಟನೆ ಕೇಂದ್ರ ಸೆನೆಗಲ್‌ನಲ್ಲಿ ಭಾನುವಾರ ನಡೆದಿದೆ. ಸಾರ್ವಜನಿಕ ಬಸ್‌ವೊಂದರ ಟೈರ್ ಪಂಕ್ಚರ್ ಆಗಿ ಎದುರಿನಿಂದ ಬರುತ್ತಿದ್ದ ಮತ್ತೊಂದು ಬಸ್‌ಗೆ ಡಿಕ್ಕಿ ಹೊಡೆದಿದೆ. ಭೀಕರ ಅಪಘಾತದಲ್ಲಿ ಕನಿಷ್ಠ 78 ಜನರು ಗಾಯಗೊಂಡಿದ್ದಾರೆ. ಅವರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಮಾಹಿತಿ ನೀಡಿದ್ದಾರೆ.



ಕಾಫ್ರಿನ್ ಪ್ರದೇಶದ ಗ್ನಿವಿ ಗ್ರಾಮದಲ್ಲಿ ಮುಂಜಾನೆ ವೇಳೆ ಅಪಘಾತ ಸಂಭವಿಸಿದೆ ಎಂದು ಅಧ್ಯಕ್ಷ ಮ್ಯಾಕಿ ಸಾಲ್ ಟ್ವೀಟ್‌ನಲ್ಲಿ ತಿಳಿಸಿದ್ದಾರೆ. ಗ್ನಿಬಿಯಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ 40 ಜನರು ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ. ಈ ದುರಂತ ಘಟನೆಯಿಂದ ತೀವ್ರ ದುಃಖಿತನಾಗಿದ್ದೇನೆ. ಸಂತ್ರಸ್ತರ ಕುಟುಂಬಗಳಿಗೆ ನನ್ನ ಸಂತಾಪ. ಗಾಯಾಳುಗಳು ಶೀಘ್ರ ಚೇತರಿಸಿಕೊಳ್ಳಲಿ. ಅವರಿಗೆ ಅಗತ್ಯ ವೈದ್ಯಕೀಯ ನೆರವು ಒದಗಿಸಲಾಗುವುದು ಎಂದು ತಿಳಿಸಿದ್ದಾರೆ. ಸೋಮವಾರದಿಂದ ಮೂರು ದಿನಗಳ ಶೋಕಾಚರಣೆ ಘೋಷಿಸಿದ ಅವರು, ರಸ್ತೆ ಸುರಕ್ಷತಾ ಕ್ರಮಗಳ ಕುರಿತು ಚರ್ಚಿಸಲು ಸಭೆ ನಡೆಸುವುದಾಗಿ ಮ್ಯಾಕಿ ಸಾಲ್ ಹೇಳಿದ್ದಾರೆ. ಕಳಪೆ ಗುಣಮಟ್ಟದ ರಸ್ತೆಗಳು, ಚಾಲಕರು ನಿಯಮಗಳನ್ನು ಪಾಲಿಸದ ಕಾರಣ ಪಶ್ಚಿಮ ಆಫ್ರಿಕಾದ ರಾಷ್ಟ್ರದಲ್ಲಿ ಮೋಟಾರ್ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿವೆ ಎಂದು ಸ್ಥಳೀಯರು ಗಂಭೀರ ಆರೋಪ ಮಾಡಿದ್ದಾರೆ.

ನವ ನವೀನ ಬ್ರಾಂಡ್, ವಿನ್ಯಾಸಗಳ ಉತ್ಪನ್ನ ಮಾಡುವುದೇ ರೀಡ್ ಅಂಡ್ ಟೇಲರ್ ಉದ್ದೇಶ

ಮೈಸೂರು,ಜ.8(ಆರ್‌ಕೆ)–2023ರಲ್ಲಿ ನವೀನ ಬ್ರಾಂಡ್ ಹಾಗೂ ವಿನ್ಯಾಸದ ಉತ್ಪನ್ನ ಮಾಡುವುದೇ ರೀಡ್ ಅಂಡ್ ಟೇಲರ್‌ನ ಪ್ರಮುಖ ಉದ್ದೇಶ ಎಂದು ಫಿಂಕ್ವೆಸ್ಟ್ ಗ್ರೂಪ್ ಅಧ್ಯಕ್ಷ ಹಾರ್ದಿಕ್ ಪಟೇಲ್ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಇಂದು ನಡೆದ ರೀಡ್ ಅಂಡ್ ಟೇಲರ್ ಕಂಪನಿಯ ಬೆಳ್ಳಿ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ 1998ರಲ್ಲಿ ಆರಂಭವಾದ ಉತ್ಪಾದನಾ ಘಟಕವು ಗುಣಮಟ್ಟದ ಫ್ಯಾಬ್ರಿ ಬ್ರಾಂಡೆಡ್ ಉತ್ಪನ್ನಗಳಿಗೆ ಖ್ಯಾತಿಯಾಗಿದ್ದು, ಗ್ರಾಹಕರನ್ನು ಆಕರ್ಷಿಸುತ್ತಿದೆ ಎಂದರು.

ನಿನ್ನೆ ಆರಂಭಗೊಂಡಿರುವ 7 ದಿನಗಳ 25ನೇ ವರ್ಷಾಚರಣೆ ಸಮಾರಂಭದಲ್ಲಿ ದೇಶದಾದ್ಯಂತ 500 ಡೀಲರ್‌ಗಳು ಭಾಗವಹಿಸುವ ನಿರೀಕ್ಷೆ ಇದ್ದು, 200 ಮಂದಿ ಈಗಾಗಲೇ ಉಪಸ್ಥಿತರಿದ್ದಾರೆ. 2500 ಮಂದಿ ನೌಕರರನ್ನು ಹೊಂದಿರುವ ರೀಡ್ ಅಂಡ್ ಟೇಲರ್ ಕಂಪನಿಗೆ 2000 ಬ್ಯುಸಿನೆಸ್ ಅಸೋಷಿಯೇಟ್‌ಗಳಿದ್ದಾರೆ ಎಂದ ಅವರು, ಗುಣಮಟ್ಟದ ಫ್ಯಾಬ್ರಿಕ್ ಉತ್ಪನ್ನ ಮಾಡಿ ಗ್ರಾಹಕರಿಗೆ ತಲುಪಿಸುವುದೇ 2023ರ ಹೊಸ ವರ್ಷದ ಗುರಿ ಎಂದರು.

ಬೆಳ್ಳಿ ಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು, ಬಟ್ಟೆಯ ಗುಣಮಟ್ಟ, ಉತ್ಕೃಷ್ಟತೆ ಹಾಗೂ ಅದರ ಸಾಫ್ಟ್‌ನೆಸ್‌ನಿಂದಾಗಿ ನಾನೂ ಸಹ ರೀಡ್ ಅಂಡ್ ಟೇಲರ್ ಬ್ರಾಂಡ್ ಫ್ಯಾಬ್ರಿಕ್ ಅನ್ನೇ ಬಳಸುತ್ತಿದ್ದೇವೆ ಎಂದರಲ್ಲದೆ, 25ನೇ ವರ್ಷಾಚರಣೆ ಸಂದರ್ಭದಲ್ಲಿ ಕಂಪನಿಗೆ ಶುಭ ಕೋರಿದರು. ನಂತರ ಅಲ್ಲಿ ಪ್ರದರ್ಶಿಸಿದ್ದ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಸೂಟಿಂಗ್ಸ್ ಮತ್ತು ರೆಡಿಮೇಡ್ ಗಾರ್ಮೆಂಟ್ಸ್‌ಗಳನ್ನು ಪ್ರಮೋದಾದೇವಿ ಒಡೆಯರ್ ವೀಕ್ಷಿಸಿದರು. ಹಾರ್ದಿಕ್ ಪಟೇಲ್ ಅವರ ಪತ್ನಿ ಶ್ವೇತಾ ಹೆಚ್.ಪಟೇಲ್ 2023ರ ಕ್ಯಾಟ್‌ಲಾಗ್ ಅನ್ನು ಇದೇ ಸಂದರ್ಭ ಬಿಡುಗಡೆ ಮಾಡಿದರು.

ಫಿಂಕ್ವೆಸ್ಟ್ ಕಂಪನಿ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಅಜಯ್ ಅಗರ್‌ವಾಲ್, ರೀಡ್ ಅಂಡ್ ಟೇಲರ್ ಹಿರಿಯ ಉಪಾಧ್ಯಕ್ಷ (ಸೇಲ್ಸ್ ಅಂಡ್ ಮಾರ್ಕೆಟಿಂಗ್) ಸಚಿನ್ ಹೋನ್ನೋಡೆ ಹಾಗೂ ಇತರರು ಈ ವೇಳೆ ಪಾಲ್ಗೊಂಡಿದ್ದರು. ಬೆಳ್ಳಿ ಮಹೋತ್ಸವದ ಅಂಗವಾಗಿ ಫ್ಯಾಬ್ರಿಕ್ ಕಾರ್ಖಾನೆಯಲ್ಲಿ ಇಂದು ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿತ್ತು ಇದೇ ವೇಳೆ 500 ಮಂದಿ ನೌಕರರಿಗೆ ಶರ್ಟ್–ಪ್ಯಾಂಟ್ ಉಡುಗೊರೆ ನೀಡಲಾಯಿತು.



ಮೈಸೂರಿನ ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ ಭಾನುವಾರ ಬೆಳಗ್ಗೆ ರೀಡ್ ಅಂಡ್ ಟೇಲರ್ ಬೆಳ್ಳಿಹಬ್ಬ ಕಾರ್ಯಕ್ರಮ ಉದ್ಘಾಟಿಸಿದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಕಂಪನಿಯ ಫ್ಯಾಬ್ರಿಕ್ಸ್ ಅನ್ನು ವೀಕ್ಷಿಸಿದರು. (ಬಲದಿಂದ) ರೀಡ್ ಅಂಡ್ ಟೇಲರ್ ಹಿರಿಯ ಉಪಾಧ್ಯಕ್ಷ (ಸೇಲ್ಸ್ ಅಂಡ್ ಮಾರ್ಕೆಟಿಂಗ್) ಸಚಿನ್ ಹೊನ್ನೋಡೆ, ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಅಜಯ್ ಅಗರ್‌ವಾಲ್, ಪಿಂಕ್ವೆಸ್ಟ್ ಗ್ರೂಪ್ ಅಧ್ಯಕ್ಷ ಹಾರ್ದಿಕ್ ಪಟೇಲ್ ಹಾಗೂ ಅವರ ಪತ್ನಿ ಶ್ವೇತಾ ಹೆಚ್.ಪಟೇಲ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ನ್ಯಾ.ಸದಾಶಿವ ಆಯೋಗದ ವರದಿ ತಿರಸ್ಕರಿಸಲು ಒತ್ತಾಯಿಸಿ ನಾಳೆ ಪ್ರತಿಭಟನೆ

ಮೈಸೂರು, ಜ.8(ಎಂಕೆ)– ಕೊರಮ, ಕೊರಚ ಸಮುದಾಯಕ್ಕೆ ಮರಣ ಶಾಸನವಾಗಿರುವ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಸರ್ಕಾರ ತಿರಸ್ಕರಿಸುವಂತೆ ಒತ್ತಾಯಿಸಿ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಜ.10ರಂದು ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೊರಮ ಸಮುದಾಯದ ಮುಖಂಡ ಮೋಹನ್‌ರಾಜ್ ಮನವಿ ಮಾಡಿದ್ದಾರೆ.

ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಸಂಪೂರ್ಣ ಅವೈಜ್ಞಾನಿಕ ಹಾಗೂ ಸಂವಿಧಾನ ವಿರೋಧಿಯಾಗಿದ್ದು, ರಾಜ್ಯ ಸರ್ಕಾರ ಈ ವರದಿಯನ್ನು ತಿರಸ್ಕರಿಸಿ ದಲಿತರ ಐಕ್ಯತೆಯನ್ನು ಕಾಪಾಡಬೇಕು. ಈ ವರದಿಯು ದಲಿತರಲ್ಲಿನ ಸಾಮರಸ್ಯ, ಒಗ್ಗಟ್ಟನ್ನು ಒಡೆದು ಪರಸ್ಪರ ದ್ವೇಷ, ಅಸೂಯೆ ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ. ಇದನ್ನು ಅರ್ಥಮಾಡಿಕೊಂಡು ಹೋರಾಟದಲ್ಲಿ ಭಾಗಿಯಾಗಬೇಕು ಎಂದು ಪತ್ರಿಕಾ ಪ್ರಕಟಣೆ ಮೂಲಕ ಕೋರಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು: ಡಾ.ಗಂಗಮ್ಮ ಅವರ ಮಾರ್ಗದರ್ಶನದಲ್ಲಿ ಎನ್.ಚೇತನ್‌ಕುಮಾರ್ ಇತಿಹಾಸ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವೈದ್ಯರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜ.8–ಕುವೈತ್ ದೇಶದಲ್ಲಿ ವೈದ್ಯರ ಬೇಡಿಕೆಯಿದ್ದು 468 ಹುದ್ದೆಗಳಿಗೆ ಅಂತಾರಾಷ್ಟ್ರೀಯ ವಲಸೆ ಕೇಂದ್ರದಿಂದ ನೇರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರವಳಿಕೆ ತಜ್ಞರು, ಸಾಮಾನ್ಯ ಶಸ್ತ್ರಚಿಕಿತ್ಸಕರು, ಆಂತರಿಕ ಔಷಧ ತಜ್ಞರು, ಪ್ರಸೂತಿ ತಜ್ಞರು, ಸ್ತ್ರೀರೋಗ ತಜ್ಞರು, ಹೃದ್ರೋಗ ತಜ್ಞರು, ಮೂಳೆ ಚಿಕಿತ್ಸಕರು, ಮಕ್ಕಳ ತಜ್ಞರು, ತುರ್ತು ವಿಭಾಗ ತಜ್ಞರು, ಕುಟುಂಬ ವೈದ್ಯರು, ತೀವ್ರ ನಿಗಾ ಘಟಕ ತಜ್ಞರು, ವಿಕಿರಣ ಶಾಸ್ತ್ರಜ್ಞರು ಮತ್ತು ಇಎನ್‌ಟಿ ತಜ್ಞರ ಹುದ್ದೆಗಳು ಖಾಲಿ ಇದ್ದು, ವಿದ್ಯಾರ್ಹತೆ ಮತ್ತು ಕನಿಷ್ಠ 7 ವರ್ಷ ಅನುಭವ ಮತ್ತು ಎಂ.ಡಿ ಆದ ನಂತರ 3 ವರ್ಷ ಅನುಭವ ಇರಬೇಕು. ತಿಂಗಳ ಕೊನೆಯ ವಾರದಲ್ಲಿ ಬೆಂಗಳೂರಿನ ಕುವೈತ್‌ನ ಉದ್ಯೋಗದಾತರಿಂದ ಸಂದರ್ಶನ ನಡೆಯಲಿದ್ದು, ಆಸಕ್ತರು ಜ.11ರೊಳಗಾಗಿ ಆನ್‌ಲೈನ್ ಮೂಲಕ https://www.kaushalkar.com/doctor-registration-kuwait ಅರ್ಜಿ ಸಲ್ಲಿಸಬಹುದು ಅಥವಾ ಅಂತಾರಾಷ್ಟ್ರೀಯ ವಲಸೆ ಕೇಂದ್ರ, 4ನೇ ಮಹಡಿ ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029 ಕಛೇರಿಗೆ ನೇರವಾಗಿ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ:080–29753007, 9110248485, 8310100754 ಸಂಪರ್ಕಿಸಬಹುದು.

ಕವಿ ಸುಬ್ರಾಯ ಚೊಕ್ಕಾಡಿಯವರ ಸಮಗ್ರ ಸಾಹಿತ್ಯದ ಮೂರು ಸಂಪುಟಗಳ ಬಿಡುಗಡೆ

ಲೇಖಕ ಬರೆದದ್ದೆಲ್ಲಾ ಆತನ ಆತ್ಮಕಥೆಯೇ: ನಾಗಭೂಷಣಸ್ವಾಮಿ ವಿಶ್ಲೇಷಣೆ



ಮೈಸೂರು, ಜ.8 (ಪಿಎಂ)– ಒಬ್ಬ ಲೇಖಕ ಬರೆಯಬಹುದಾದದ್ದು ಆತ್ಮಕಥೆ ಮಾತ್ರ. ಲೇಖಕನ ಬರೆವಣಿಗೆಯಲ್ಲಿ ಆತನೂ ಒಳಗೊಂಡಿರುವ ಕಾರಣ ಲೇಖಕನ ಕೃತಿಗಳೆಲ್ಲವೂ ಆತನ ಆತ್ಮಕಥೆಗಳೇ ಆಗಿವೆ ಎಂದು ವಿಮರ್ಶಕ ಓ.ಎಲ್. ನಾಗಭೂಷಣಸ್ವಾಮಿ ವಿಶ್ಲೇಷಿಸಿದರು.

ಮೈಸೂರಿನ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ರೂಪ ಪ್ರಕಾಶನದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕವಿ ಸುಬ್ರಾಯ ಚೊಕ್ಕಾಡಿಯವರ ಸಮಗ್ರ ಸಾಹಿತ್ಯ ಒಳಗೊಂಡ ಮೂರು ಸಂಪುಟಗಳನ್ನು ('ಬಂಟಮಲೆಯ ಧ್ಯಾನ'–ಕವನ ಸಂಕಲನ, 'ಕಥಾಲೋಕ'–ಕಥೆ–ಕಾದಂಬರಿ ಮತ್ತು 'ಅವಲೋಕನ'–ಸಾಹಿತ್ಯ ವಿಮರ್ಶೆ) ಬಿಡುಗಡೆಗೊಳಿಸಿ, ನಂತರ ಅವರು ಮಾತನಾಡಿದರು.

ಸುಬ್ರಾಯ ಚೊಕ್ಕಾಡಿಯವರ ಆತ್ಮಚರಿತ್ರೆ ಭಾಗಗಳನ್ನು ಓದಿದರೆ ಕನ್ನಡ ನಾಡಿನ ಸಂಸ್ಕೃತಿ ಅನಾವರಣಗೊಳ್ಳುತ್ತದೆ. ಬರವಣಿಗೆಯಲ್ಲಿ ಲೇಖಕನ ಒಳ–ಹೊರಗು ಇರುವ ಹಿನ್ನೆಲೆಯಲ್ಲಿ ಎಲ್ಲಾ ಕೃತಿಗಳಲ್ಲೂ ಆತ್ಮಕಥೆ ಅಡಕವಾಗಿರುತ್ತವೆ. ಸುಬ್ರಾಯ ಚೊಕ್ಕಾಡಿಯವರ ಸಮಗ್ರ ಸಾಹಿತ್ಯ ಕೃತಿಗಳು ಇಲ್ಲಿ 3 ಗ್ರಂಥಗಳಲ್ಲಿ ಬಿಡುಗಡೆಗೊಂಡಿದ್ದರೆ ಈ ಮೊದಲೇ ಒಂದು ಬಿಡುಗಡೆ ಆಗಿದೆ. ಈ ಎಲ್ಲವೂ ಅವರ ಆತ್ಮಕಥೆಗಳೇ ಎಂದು ಅವರು ಪ್ರತಿಪಾದಿಸಿದರು.

ನಮ್ಮ ತಲೆಗೆ ಬರುವ ಯಾವ ವಿಚಾರವೂ ಹೊಸದಲ್ಲ. ಹಾಗಾಗಿ ಬರಹಗಾರನಿಗೆ ಕೃತಿ ಹೊಸದಿದ್ದರೂ ವಿಚಾರ ಈ ಮೊದಲೇ ಪ್ರಸ್ತಾಪಿತವಾಗಿರುತ್ತದೆ. ಪ್ರಸ್ತುತ ಎಲ್ಲರೂ ಅಸಹಾಯಕರಾಗಿ ದುಗುಡದಲ್ಲಿದ್ದೇವೆ. ಇಂತಹ ಸಂದರ್ಭದಲ್ಲಿ ಬದುಕನ್ನು ಚಂದಗೊಳಿಸುವ ಪ್ರಯತ್ನ ಸುಬ್ರಾಯ ಚೊಕ್ಕಾಡಿ ಅವರಂತಹ ಕವಿಗಳ ಬರವಣಿಗೆಯಲ್ಲಿದೆ. ಸುಬ್ರಾಯ ಚೊಕ್ಕಾಡಿಯವರು ಪುಟ್ಟ ಗ್ರಾಮ ಚೊಕ್ಕಾಡಿಯಲ್ಲಿ (ಸುಳ್ಯ ತಾಲೂಕು) ಹುಟ್ಟಿ ಬೆಳೆದವರು. ತಮ್ಮ ಊರಿನ ಕುರಿತ ಅವರ ಬರವಣಿಗೆಯಲ್ಲಿ ಇಡೀ ಜಗತ್ತನ್ನೇ ಅನಾವರಣ ಮಾಡಿದ್ದಾರೆ. ನಾವು ಯಾವ ಊರಿನಲ್ಲಿ ಇದ್ದರೂ ಇಡೀ ಜಗತ್ತನ್ನು ನಮ್ಮೂರಿನಲ್ಲೇ ನೋಡಬಹುದು ಎಂದು ತಮ್ಮ ಬರವಣಿಗೆ ಮೂಲಕ ಸಾಬೀತುಪಡಿಸಿದ್ದಾರೆ ಎಂದರು.

ಲೇಖಕ ಅಬ್ದುಲ್ ರಶೀದ್ ಅಧ್ಯಕ್ಷತೆ ವಹಿಸಿದ್ದರು. ಕೃತಿ–ಕೃತಿಕಾರರ ಕುರಿತು ಲೇಖಕಿ ಸಿಂಧುರಾವ್, ವ್ಯಂಗ್ಯಚಿತ್ರ ಕಲಾವಿದ ದಿನೇಶ್ ಕುಕ್ಕುಜಡ್ಕ ಮಾತನಾಡಿದರು. ಕವಿ ಸುಬ್ರಾಯ ಚೊಕ್ಕಾಡಿ, ಸದರಿ 3 ಸಂಪುಟಗಳ ಸಂಪಾದಕ ಅರವಿಂದ ಚೊಕ್ಕಾಡಿ ಇದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಎ.ರಾಮದಾಸ್ ಚಾಲನೆ

ಮೃಗಾಲಯ ಎದುರಿನ ಪಾರ್ಕಿಂಗ್ ಸ್ಥಳದ ಅಭಿವೃದ್ಧಿಗೂ ಭೂಮಿ ಪೂಜೆ





ಮೈಸೂರು, ಜ.8(ಪಿಎಂ)– ಕೃಷ್ಣರಾಜ ವಿಧಾನಸಭಾ(ಕೆಆರ್) ಕ್ಷೇತ್ರದ 54ನೇ ವಾರ್ಡ್ ವ್ಯಾಪ್ತಿಯ ಗೌರಿಶಂಕರನಗರ, ದತ್ತನಗರ ಹಾಗೂ ರಾಮಯ್ಯ ಬ್ಲಾಕ್‌ನ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಎ.ರಾಮದಾಸ್ ಭಾನುವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಈ ವಾರ್ಡ್ ಕಂದಾಯ ಭೂಮಿಯಾಗಿರುವ ಹಿನ್ನೆಲೆಯಲ್ಲಿ ಇಲ್ಲಿನ ಅಭಿವೃದ್ಧಿಯೂ ಕುಂಠಿತಗೊಂಡಿದೆ. ಈ ಎಲ್ಲಾ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ಅವರು ಎಸ್‌ಎಫ್‌ಸಿ ಅನುದಾನ ಕಲ್ಪಿಸಿ, ಈ ಭಾಗದ ಅಭಿವೃದ್ಧಿಗೆ ಸಹಕಾರ ನೀಡಿದ್ದಾರೆ. ಈ ಅನುದಾನದಡಿ ಇಲ್ಲಿನ 6 ಕ್ರಾಸ್‌ಗಳು ಹಾಗೂ ಮುಖ್ಯರಸ್ತೆ ಅಭಿವೃದ್ಧಿಗೆ ಇಂದು ಭೂಮಿ ಪೂಜೆ ನೆರವೇರಿಸಿದ್ದು, ಇಲ್ಲಿನ ಒಳಚರಂಡಿ ವ್ಯವಸ್ಥೆ ಸರಿಪಡಿಸಲು ಶೀಘ್ರ ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು.

ಅಲ್ಲದೆ, ದತ್ತನಗರ, ರಾಮಯ್ಯ ಬ್ಲಾಕ್, ಗೌರಿಶಂಕರ ನಗರದಿಂದ ಊಟಿ ರಸ್ತೆಗೆ ಸಂಪರ್ಕ ಕಲ್ಪಿಸಲು 2ನೇ ಮುಖ್ಯ ರಸ್ತೆಯನ್ನು ಜೋಡಿಸುವ ಸಲುವಾಗಿ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು.

ಚಾಮರಾಜೇಂದ್ರ ಮೃಗಾಲಯದ ಎದುರಿನ ಪಾರ್ಕಿಂಗ್ ಸ್ಥಳದ ಅಭಿವೃದ್ಧಿ ಕಾಮಗಾರಿಗೂ ಭಾನುವಾರ ಶಾಸಕ ಎಸ್.ಎ.ರಾಮದಾಸ್ ಚಾಲನೆ ನೀಡಿದರು. ಇದೇ ವೇಳೆ ಮಾತನಾಡಿದ ಶಾಸಕರು, ಮೃಗಾಲಯಕ್ಕೆ ಪ್ರತಿನಿತ್ಯ ಪ್ರವಾಸಿಗಳು ಭೇಟಿ ನೀಡುತ್ತಾರೆ. ಅವರ ವಾಹನ ನಿಲುಗಡೆ ವೇಳೆ ವಾಹನದಿಂದ ಏಳುವ ಧೂಳು ನಾಗರಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸದರಿ ನಿಲುಗಡೆಯನ್ನು ಧೂಳು ಮುಕ್ತಗೊಳಿಸಿ ಅಭಿವೃದ್ಧಿಪಡಿಸಲು ಇಂದು ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಮೇಯರ್ ಶಿವಕುಮಾರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ನಿರ್ದೇಶಕ ಅಜಿತ್ ಕುಲಕರ್ಣಿ, ಸದಸ್ಯ ಗೋಕುಲ್ ಗೋವರ್ಧನ್, ನಗರಪಾಲಿಕೆ ಸದಸ್ಯರಾದ ಛಾಯಾದೇವಿ, ಪುಟ್ಟ ನಿಂಗಮ್ಮ, ಮುಖಂಡರಾದ ಪ್ರಸನ್ನ, ಶೇಖರ್, ಹರೀಶ್, ಸುಂದರ್, ಜನಾರ್ಧನ್, ಹೊಯ್ಸಳ, ರವಿ, ಶಿವು, ಮಹದೇವಪ್ಪ, ಸುಬ್ಬಣ್ಣ, ಅಶೋಕ್, ಉಡಿಗಾಲ ಮಹದೇವಪ್ಪ, ಬಸಪ್ಪ, ಸುರೇಶ್, ಉಮಾ, ಲೋಕೇಶ್, ಮೀನಾ, ರಾಣಿ ಸಿದ್ದಪ್ಪ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.1.2023 ಸೋಮವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜೆ, ಲಕ್ಷಾರ್ಚನೆ ಮತ್ತು ವಾರ್ಷಿಕ ಕುಂಭಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.
- **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು :** ಕಾಲೇಜು ವಾರ್ಷಿಕೋತ್ಸವ ಸಮಾರಂಭ, ಸ್ಥಳ: ಮೆಕ್ಯಾನಿಕಲ್ ಆಡಿಟೋರಿಯಂ, ಎಸ್‌ಜೆಸಿಇ ಆವರಣ, ಬೆಳಗ್ಗೆ 10.30ರಿಂದ.
- **ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್ :** ಆರೋಗ್ಯ ಸಿರಿ ಯೋಜನೆಯಡಿ ವಿಕಲಚೇತನರಿಗೆ ಉಚಿತವಾಗಿ ಕೃತಕ ಕಾಲು, ಹೊಲಿಗೆ ಯಂತ್ರ, ಬ್ರೈಲ್ ವಾಚಸ್ ಮತ್ತು ಮ್ಯೂಸಿಕ್ ಸಿಸ್ಟಂ ವಿತರಣೆ ಕಾರ್ಯಕ್ರಮ, ಸ್ಥಳ: ನಿತ್ಯಾನಂದ ಕಲ್ಯಾಣ ಮಂಟಪ, ವಿದ್ಯಾರಣ್ಯಪುರಂ, ಬೆಳಗ್ಗೆ 11 ಗಂಟೆಗೆ.
- **ಜನ ಚೈತನ್ಯ ಫೌಂಡೇಷನ್ :** ಸಾಂಸ್ಕೃತಿಕ ಸಂಭ್ರಮ–2023 (ಭಾವಗೀತೆ, ಜನಪದ ಗೀತೆ, ನಾಡಗೀತೆ, ಜಾಗೃತ ಗೀತೆ, ರಂಗ ಗೀತೆಗಳು), ಉದ್ಘಾಟನೆ: ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸ್ಥಳ: ನಾದಬ್ರಹ್ಮ ಸಭಾಂಗಣ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 4 ಗಂಟೆಗೆ.
- **ಸಂಚಲನ ಮೈಸೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ (ಬೆಂಗಳೂರು) :** ರಾಜ್ಯ ಮಟ್ಟದ ಸಂಚಲನ, ಮಕ್ಕಳ ನಾಟಕೋತ್ಸವ ಮತ್ತು ಜಾನಪದ ಉತ್ಸವ, ಸ್ಥಳ: ಕಿರುರಂಗ ಮಂದಿರ, ಸಂಜೆ 6ರಿಂದ.
- **ಶ್ರೀ ಅಂಡಾಳ್ ಮಂದಿರಂ :** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಅಂಡಾಳ್ ಮಂದಿರಂ ಆವರಣ, ವಿ.ವಿ.ಮೊಹಲ್ಲಾ, ಸಂಜೆ 6ರಿಂದ 7.30 ರವರೆಗೆ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6 ಗಂಟೆಗೆ.
- **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲಾ ರಾಮನ್ ಅವರ ಮಂದಿರ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.
- **ಶ್ರೀ ಮಹಾಜನ ಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ರಾಮ ಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ ನೃತ್ಯ ಶಿಲ್ಪ ಯಾತ್ರೆ, ಲೇಖನ ಮತ್ತು ಪ್ರಸ್ತುತಿ– ಡಾ.ಬಿ.ಎಸ್. ಮನೋರಮಾ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಸದಾಶಿವ ಪಾಟೀಲ್, ಮತ್ತೂರು ಕುಮಾರಸ್ವಾಮಿ, ಜಿ. ಪುಷ್ಪಲತಾ, ವ್ಯಾಖ್ಯಾನ– ಡಾ.ಜಿ.ಆರ್. ತಿಪ್ಪೇಸ್ವಾಮಿ, 9.05 ಹಾವೇರಿಯಲ್ಲಿ ನಡೆಯುತ್ತಿರುವ 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 2ನೇ ದಿನದ ಗೋಷ್ಠಿಗಳ ಬಾನುಲಿ ವರದಿ, 9.30 ಹಾವೇರಿಯಲ್ಲಿ ನಡೆಯುತ್ತಿರುವ 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದ ಬಾನುಲಿ ವರದಿ, 10.00 ಲಯ ಸಂಭ್ರಮ, ವಾದ್ಯ ವೈಭವದಲ್ಲಿ ತ್ಯಾಗರಾಜರ ಪಂಚರತ್ನ ಕೃತಿಗಳು, ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ.

ಮಧ್ಯಾಹ್ನ: 12.30 ದೇವರನಾಮ – ಕವಿತಾ ಕೃಷ್ಣಮೂರ್ತಿ, ಅರುಣಾ ಸಾಯಿರಾಂ, 12.45 ನಮ್ಮ ಆರೋಗ್ಯ: ಚಳಿಗಾಲದಲ್ಲಿ ಕಂಡುಬರುವ ಸಾಮಾನ್ಯ ಆರೋಗ್ಯ ಸಮಸ್ಯೆಗಳು ಕುರಿತು ಡಾ.ಎಂ.ಸಂದೀಪ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆ – ಅಂಬಿಕಾ ಕೆ. ರಾಮ್, 3.00, ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ– ಡಾ. ಸುಕನ್ಯಾ ಪ್ರಭಾಕರ್.

ಸಂಜೆ: 4.00 ಮಹಿಳಾರಂಗ: ಕಾಂಗರೂ ಕೇರ್ ಮಹಿಳೆ ಮತ್ತು ಮಕ್ಕಳ ಆಸ್ಪತ್ರೆ ಡಾಕ್ಟರ್ ಸಮಯ, ವಿಷಯ– ಸುಖ ಪ್ರಸವಕ್ಕೆ ಗಮನಿಸಬೇಕಾದ ಅಂಶಗಳು, ಭಾಗವಹಿಸುವವರು ಡಾ. ರಶ್ಮಿ ಕಿಶೋರ್, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ– ಶೂನ್ಯ ಬಂಡವಾಳ ಕೃಷಿ ಹಾಗೂ ದೇಸೀ ತಳಿ ಹಸುಗಳ ಸಂವರ್ಧನೆ ಕುರಿತು ಆಕಾಶ ದೀಪ್ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎಸ್.ಸಿ.ಹೇಮಕುಮಾರ್.

ರಾತ್ರಿ: 9.30 ಹಳ್ಳಿಹಾಡು: ಭಾಗವಹಿಸುವವರು ಟಿ. ನರಸೀಪುರ ತಾಲೂಕು ಮಾದಿಗಳ್ಳಿಯ ರಾಜಮ್ಮ ಮತ್ತು ಸಂಗಡಿಗರು, ಪ್ರಸ್ತುತಿ – ಅಬ್ದುಲ್ ರಶೀದ್.

ಜೆಡಿಎಸ್ ಮಹಿಳಾ ಘಟಕದಿಂದ ಸರ್ಕಾರದ ವಿರುದ್ಧ ಪ್ರತಿಭಟನೆ

ಸ್ಯಾಂಟ್ರೋ ರವಿ ಬಂಧನಕ್ಕೆ ಆಗ್ರಹ



ಮೈಸೂರು, ಜ.8(ಎಸ್‌ಬಿಡಿ)– ಬಿಜೆಪಿ ಸರ್ಕಾರದಲ್ಲಿ ಜನಸಾಮಾನ್ಯರಿಗೆ ರಕ್ಷಣೆ ಇಲ್ಲ ಎಂದು ಆರೋಪಿಸಿ ಜೆಡಿಎಸ್ ಮೈಸೂರು ನಗರ ಮಹಿಳಾ ಘಟಕದ ನೇತೃತ್ವದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ನಗರದ ಗಾಂಧೀ ವೃತ್ತದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಬಿಜೆಪಿ ಸರ್ಕಾರದಿಂದ ದಲಿತರಿಗೆ, ಶೋಷಿತರಿಗೆ, ಮಹಿಳೆಯರಿಗೆ, ಸಾಮಾನ್ಯರಿಗೆ ರಕ್ಷಣೆಯೇ ಇಲ್ಲದಂತಾಗಿದೆ. ಅನೈತಿಕ ಚಟುವಟಿಕೆ ನಡೆಸುವವರು, ರೌಡಿಗಳು, ಜೂಜು, ಬೆಟ್ಟಿಂಗ್ ದಂಧೆಕೋರರಿಗೆ ಮಾತ್ರ ಬಿಜೆಪಿ ಸರ್ಕಾರದಲ್ಲಿ ರಕ್ಷಣೆಯಿದೆ ಎನ್ನುವುದು ಪದೇ ಪದೆ ಸಾಬೀತಾಗುವ ಸಂಗತಿಗಳು ಬೆಳಕಿಗೆ ಬರುತ್ತಿವೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ಗೃಹ ಇಲಾಖೆಗೆ ಧಿಕ್ಕಾರ, ಮಹಿಳೆಯರಿಗೆ ರಕ್ಷಣೆ ಇಲ್ಲದ ಸರ್ಕಾರಕ್ಕೆ ಧಿಕ್ಕಾರ, ದಲಿತ, ಮಹಿಳಾ ವಿರೋಧಿ ಸರ್ಕಾರಕ್ಕೆ ಧಿಕ್ಕಾರ ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

ಸ್ಯಾಂಟ್ರೋ ರವಿ ಪರಿಶಿಷ್ಟ ಜಾತಿಯ ಓರ್ವ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿದ್ದು, ಈ ಬಗ್ಗೆ ಸಂತ್ರಸ್ತೆ ಮೈಸೂರಿನ ವಿಜಯನಗರ ಪೊಲೀಸ್ ಠಾಣೆಗೆ ದೂರು ನೀಡಿ ಮೂರ್ನಾಲ್ಕು ದಿನಗಳಾಗಿದ್ದರೂ ಈವರೆಗೂ ಆರೋಪಿಯನ್ನು ಬಂಧಿಸಿಲ್ಲ. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಾದ ಗೃಹ ಸಚಿವರ ಜೊತೆಯೇ ಆರೋಪಿ ಗುರುತಿಸಿಕೊಂಡಿದ್ದಾನೆ 'ಮುಖ್ಯಮಂತ್ರಿಗಳೇ ನನ್ನನ್ನು ಸರ್ ಅಂತಾರೆ' ಎಂದು ಪೊಲೀಸ್ ಅಧಿಕಾರಿಗೆ ಧಮ್ಕಿ ಹಾಕಿರುವ ಆಡಿಯೋ ವೈರಲ್ ಆಗಿದೆ. ಮುಖ್ಯಮಂತ್ರಿಗಳ ಪುತ್ರನೊಂದಿಗಿರುವ ಫೋಟೋವನ್ನು ಸ್ವೀಟ್ ಬ್ರದರ್ ಶೀರ್ಷಿಕೆ ಜೊತೆ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾನೆ. ಸರ್ಕಾರದ ಹಲವು ನಾಯಕರೊಂದಿಗಿರುವ ಫೋಟೋ, ವಿಡಿಯೋಗಳು ವೈರಲ್ ಆಗಿವೆ. ಹೀಗೆ ಹಲವು ಪ್ರಭಾವಿಗಳಿಗೆ ಆಪ್ತನಾಗಿರುವ ಸ್ಯಾಂಟ್ರೋ ರವಿ ಬಂಧಿಸಲು ಪೊಲೀಸರು ಹಿಂಜರಿಯುತ್ತಿದ್ದಾರೆ ಎಂದು ಆರೋಪಿಸಿದರು.

ಹಲವು ಸಚಿವರು ಸ್ಯಾಂಟ್ರೋ ರವಿ, ಫೈಟರ್ ರವಿ, ಸೈಲೆಂಟ್ ಸುನೀಲ ಇನ್ನಿತರ ಆರೋಪಿಗಳೊಂದಿಗೆ ಒಡನಾಟ ಹೊಂದಿದ್ದಾರೆ. ಈ ಮೂಲಕ ಸರ್ಕಾರದ ಆಡಳಿತ ರಹಸ್ಯವನ್ನು ತಿಳಿದಿರುವ ಕ್ರಿಮಿನಲ್‌ಗಳೇ ಸರ್ಕಾರವನ್ನು ನಿಯಂತ್ರಿಸುವ ದುಃಸ್ಥಿತಿ ನಿರ್ಮಾಣವಾಗಿದೆ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ತನಗಾದ ಅನ್ಯಾಯದ ಬಗ್ಗೆ ಸಂತ್ರಸ್ತೆಯೇ ಖುದ್ದು ದೂರು ನೀಡಿದ್ದರೂ ಸ್ಯಾಂಟ್ರೋ ರವಿ ಬಂಧಿಸದಿರಲು ಆತನ ಬಗ್ಗೆ ಭಯ ಕಾರಣವೇ ಅಥವಾ ಬಂಧಿಸಿದರೆ ಸರ್ಕಾರದ ಕರ್ಮಕಾಂಡಗಳು ಬಯಲಾಗುತ್ತವೆ ಎಂಬ ಆತಂಕವಿದೆಯೇ. ಈ ಬಗ್ಗೆ ಸರ್ಕಾರ ತಕ್ಷಣ ಸ್ಪಷ್ಟನೆ ನೀಡುವುದರ ಜೊತೆಗೆ ಸ್ಯಾಂಟ್ರೋ ರವಿಯನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿದರು.

ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಕೆ. ರಾಮು, ಆರ್. ಲಿಂಗಪ್ಪ, ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ನಗರ ಪಾಲಿಕೆ ಸದಸ್ಯರಾದ ಮಹಿಳಾ ಘಟಕದ ನಗರಾಧ್ಯಕ್ಷೆ ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು, ರಮಣಿ, ಭಾಗ್ಯ ಮಾದೇಶ್, ಸವಿತಾ ಸುರೇಶ್, ಅಶ್ವಿನಿ ಅನಂತು, ಶೋಭಾ, ಎಂ.ಡಿ.ನಾಗರಾಜು, ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಶಿವಣ್ಣ, ಯುವ ಘಟಕದ ಅಧ್ಯಕ್ಷ ಗಿರೀಶ್ ಗೌಡ, ಮಂಜುನಾಥ್, ತೇಜುಮಣಿ, ಫಾಲ್ಕನ್ ಬೋರೇಗೌಡ, ಪ್ರಕಾಶ್ ಪ್ರಿಯದರ್ಶಿನಿ, ಎಂ.ಎನ್. ರಾಮು ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗಾಣಿಗ ಸಮುದಾಯ ಒಗ್ಗಟ್ಟು ಕಾಪಾಡಿಕೊಳ್ಳಬೇಕು

ಗಾಣಿಗ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಶಾಸಕ ಸಾ.ರಾ.ಮಹೇಶ್



ಮೈಸೂರು, ಜ.8(ಎಸ್‌ಪಿಎನ್)–ಗಾಣಿಗ ಸಮುದಾಯ ರಾಜಕೀಯ ಕಾರಣಕ್ಕಾಗಿ ಚದುರಿ ಹೋಗದೆ, ಹಿರಿಯರ ಮಾರ್ಗದರ್ಶನದಲ್ಲಿ ಒಗ್ಗಟ್ಟು ಕಾಪಾಡಿಕೊಳ್ಳಬೇಕು ಎಂದು ಶಾಸಕ ಸಾ.ರಾ.ಮಹೇಶ್ ಕರೆ ನೀಡಿದ್ದಾರೆ. ಮೈಸೂರು ಟೌನ್‌ಹಾಲ್‌ನಲ್ಲಿ ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಗಾಣಿಗರು ಕಡಿಮೆ ಜನಸಂಖ್ಯೆ ಇರುವ ಸಮುದಾಯ. ರಾಜಕೀಯಕ್ಕಾಗಿ ಚದುರಿ ಹೋಗುವ ಬದಲು, ರಾಜಕೀಯ ಹೊರತುಪಡಿಸಿ, ಸಮುದಾಯದಲ್ಲಿ ಒಗ್ಗಟ್ಟು ಕಾಪಾಡಿಕೊಳ್ಳಬೇಕು ಎಂದರು. ಪ್ರಸ್ತುತ ರಾಜಕಾರಣ ಸೇರಿದಂತೆ ಎಲ್ಲಾ ರಂಗದಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದನ್ನು ಹೋಗಲಾಡಿಸಲು ಯುವಕರಿಂದ ಮಾತ್ರ ಸಾಧ್ಯ. ಇಂದಿನ ವೇದಿಕೆಯಲ್ಲಿ ಪ್ರಶಸ್ತಿ ಪಡೆದಿರುವ ವಿದ್ಯಾರ್ಥಿನಿಯರು ಮುಂದಿನ ದಿನದಲ್ಲಿ ಭ್ರಷ್ಟಾಚಾರದಲ್ಲಿ ತೊಡಗುವುದಿಲ್ಲ ಎಂದು ಸಂಕಲ್ಪ ಮಾಡಿ, ಇತರರಿಗೂ ಮಾದರಿಯಾಗಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಅರಗು ಮತ್ತು ಬಣ್ಣದ ಕಾರ್ಖಾನೆಯ ಅಧ್ಯಕ್ಷ ರಘು ಆರ್ ಕೌಟಿಲ್ಯ, ಬಿಜೆಪಿ ಮುಖಂಡ ಅಪ್ಪಣ್ಣ, ಜೆಡಿಎಸ್ ಮುಖಂಡ ಹೆಚ್.ಕೆ.ರಾಮು, ನಗರ ಪಾಲಿಕೆ ಮಾಜಿ ಸದಸ್ಯ ನಂದೀಶ್ ಪ್ರೀತಂ, ಅಖಿಲ ಕರ್ನಾಟಕ ಗಾಣಿಗರ ಸಂಘದ ಅಧ್ಯಕ್ಷ ರಾಜಶೇಖರ್, ಬೆಂಗಳೂರು ಸಹಕಾರ ಸಂಘಗಳ ಉಪ ನಿಬಂಧಕ ಎಂ.ಪಿ.ಮಂಜುನಾಥ್, ಗಾಣಿಗರ ಸಂಘದ ಜಿಲ್ಲಾಧ್ಯಕ್ಷ ಎನ್.ಸಿ.ಉಮೇಶ್, ಉಪಾಧ್ಯಕ್ಷ ನರಸಿಂಹಯ್ಯ, ಮುಖಂಡರಾದ ಚಂದ್ರಮೋಹನ್, ವೇಣುಗೋಪಾಲ್, ರೇಖಾ ವೇಣುಗೋಪಾಲ್, ರಾಮಮೋಹನ್, ಡಾ.ಎಂ.ಪಿ.ಚೇತನ್, ಪಿಎಸ್ಐ ರೂಪೇಶ್ ಸೇರಿದಂತೆ ಇತರರಿದ್ದರು.

ಲೋಕನಾಯಕನಗರದಲ್ಲಿ ಕನಕ ಜಯಂತಿ



ಮೈಸೂರು, ಜ.8(ಎಂಕೆ)– ಮೈಸೂರಿನ ಹೆಬ್ಬಾಳದ ಲೋಕನಾಯಕನಗರದ ಶ್ರೀ ಕನಕದಾಸ ಹಿತರಕ್ಷಣಾ ಸಮಿತಿ ಇವರ ವತಿಯಿಂದ ಸಂತ ಶ್ರೇಷ್ಠ ಶ್ರೀ ಭಕ್ತ ಕನಕದಾಸರ 535ನೇ ಜಯಂತಿ ಆಚರಿಸಲಾಯಿತು. ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಸಮಿತಿಯ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಮಾಜದ ಮುಖಂಡರನ್ನು ಸನ್ಮಾನಿಸಲಾಯಿತು. ಕೊಡಗು ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಶ್ರೀ ಕನಕದಾಸ ಹಿತರಕ್ಷಣಾ ಸಮಿತಿ ಅಧ್ಯಕ್ಷ ಡಾ. ಬಸವರಾಜು, ಮುಖಂಡರಾದ ಮಹದೇವಪ್ಪ, ಮಂಜೇಗೌಡ ಮತ್ತಿತರರು ಉಪಸ್ಥಿತರಿದ್ದರು.

ರೋಟರಿ ವೆಸ್ಟ್ ಶಾಲಾ ವಾರ್ಷಿಕೋತ್ಸವ



ಮೈಸೂರು, ಜ.8(ಎಂಕೆ)– ಮೈಸೂರಿನ ಸರಸ್ವತಿಪುರಂ ಹಾಗೂ ಕನಕದಾಸನಗರದಲ್ಲಿರುವ ರೋಟರಿ ವೆಸ್ಟ್ ಶಾಲೆಗಳ ವಾರ್ಷಿಕೋತ್ಸವ ಸಮಾರಂಭ ಅದ್ದೂರಿಯಾಗಿ ನೆರವೇರಿತು.

ನಗರದ ಕಲಾಮಂದಿರದಲ್ಲಿ ಹಾಗೂ ಕನಕದಾಸನಗರದಲ್ಲಿರುವ ರೋಟರಿ ವೆಸ್ಟ್ ಶಾಲಾ ಆವರಣದಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭದಲ್ಲಿ ಶಾಲಾ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಅನಾವರಣಗೊಳಿಸಿದರು. ಸರಸ್ವತಿಪುರಂನಲ್ಲಿರುವ ರೋಟರಿ ವೆಸ್ಟ್ ಶಾಲೆಯ 30ನೇ ವಾರ್ಷಿಕೋತ್ಸವದ 'ಅನಾವರಣ' ಸಮಾರಂಭವನ್ನು ಶಾಸಕ ಎಲ್.ನಾಗೇಂದ್ರ ಉದ್ಘಾಟಿಸಿದರೆ, ಕನಕದಾಸನಗರದಲ್ಲಿರುವ ರೋಟರಿ ವೆಸ್ಟ್ ಶಾಲೆಯ 14ನೇ ವರ್ಷದ ವಾರ್ಷಿಕೋತ್ಸವ 'ಕಲಾವೈಭವ' ಸಮಾ ರಂಭವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಕಲಾವೈಭವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವುದರ ಜೊತೆಗೆ ಶಾಲೆಗೆ ಭೇಟಿ ನೀಡಿ ತಮ್ಮ ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಯಾವ ಕ್ಷೇತ್ರದಲ್ಲಿ ಬಗ್ಗೆ ಹೆಚ್ಚು ಆಸಕ್ತಿಯಿದೆ ಎಂಬುದನ್ನು ಅರಿತು ಆ ಕ್ಷೇತ್ರದಲ್ಲಿ ಸಾಧನೆ ಮಾಡಲು ಪ್ರೋತ್ಸಾಹಿಸಬೇಕು. ಪೋಷಕರು ತಮ್ಮ ಮಕ್ಕಳನ್ನು ಬೇರೆ ಮಕ್ಕಳೊಂದಿಗೆ ಹೋಲಿಕೆ ಮಾಡಬಾರದು ಎಂದು ಸಲಹೆ ನೀಡಿದರು.

ಪ್ರತಿಭೆ ಅನಾವರಣ: ಸಾಂಸ್ಕೃತಿಕ ನೃತ್ಯ ಪ್ರದರ್ಶನ ನೀಡಿದ ಮನರಂಜನೆ ನೀಡಿದ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಅನಾವರಣಗೊಳಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಜಯಿಸಿ ಸಂಭ್ರಮಿಸಿದರು. ಡಿಡಿಪಿಐ ರಾಮಚಂದ್ರರಾಜೇ ಅರಸ್, ನಗರಪಾಲಿಕೆ ಸದಸ್ಯ ಎಸ್.ಬಿ.ಎಂ ಮಂಜು, ರೋಟರಿ ವೆಸ್ಟ್ ಅಸೋಸಿಯೇಷನ್ ಅಧ್ಯಕ್ಷ ಡಾ.ಬಿ.ಚಂದ್ರ, ಕಾರ್ಯದರ್ಶಿ ಎಸ್.ಎ. ಮೋಹನ್‌ಕೃಷ್ಣ, ಖಜಾಂಚಿ ಪಿ.ಗಂಗಾಧರಗೌಡ, ಪ್ರಾಂಶುಪಾಲರಾದ ಕೆ.ಎಸ್. ಪೂರ್ಣಿಮಾ, ಎಂ.ಎನ್.ಮಂಜುನಾಥ್ ಮತ್ತಿತರರು ಭಾಗವಹಿಸಿದ್ದರು.

ಸಂಗೀತ ಸಾಧಕರಿಗೆ 'ನಾದಬ್ರಹ್ಮ', 'ನಾದಕಿಶೋರಿ' ಪ್ರಶಸ್ತಿ ಪ್ರದಾನ



ಮೈಸೂರು, ಜ.8(ಎಸ್‌ಪಿಎನ್)– ಡಾ.ಎ.ಕೆ.ಗೋಪಾಲರಾಜನ್ ಸ್ಮರಣಾರ್ಥ ಸಂಗೀತ ವಿದ್ವಾನ್ ಎಸ್.ಶಂಕರ್ ಅವರಿಗೆ 'ನಾದಬ್ರಹ್ಮ' ಹಾಗೂ ವಿದುಷಿ ಅಶ್ವಿನಿ ಕೊಲಿಕಜ್ಜೆ ಅವರಿಗೆ 'ನಾದಕಿಶೋರಿ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಮೈಸೂರು ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಭಾಂಗಣದಲ್ಲಿ ಶ್ರೀ ನಾದಬ್ರಹ್ಮ ಸಂಗೀತಾ ಸಭಾದ 67ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿಯನ್ನು ಸಂಗೀತಾ ಸಭಾದ ಅಧ್ಯಕ್ಷ ಹರೀಶ್ ಪ್ರದಾನ ಮಾಡಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಎಸ್.ಶಂಕರ್, ನನಗೆ ಲಭಿಸಿರುವ 'ನಾದಬ್ರಹ್ಮ' ಪ್ರಶಸ್ತಿಯನ್ನು ಎಲ್ಲಾ ಸಂಗೀತ ಪ್ರಿಯರಿಗೆ ಅರ್ಪಿಸುತ್ತೇನೆ. ಮೈಸೂರಿನ ಸಾಂಸ್ಕೃತಿಕ ಚಟುವಟಿಕೆಗಳು ಜನರ ಪ್ರೋತ್ಸಾಹದಿಂದ ಇಂದಿನವರೆಗೂ ಉಳಿದುಕೊಂಡು ಬಂದಿದೆ ಎಂದು ತಿಳಿಸಿದರು.

ಈ ಹಿಂದೆ ರಾಜ ಮಹಾರಾಜರ ಕಾಲದಲ್ಲಿ ಕಲೆಗಳಿಗೆ ಪ್ರಾಶಸ್ತ್ಯ ದೊರಕುತ್ತಿತ್ತು. ಇದೀಗ ಜನರ ಆಶ್ರಯದಲ್ಲಿ ಸಂಗೀತ ಸೇರಿದಂತೆ ಇತರೆ ಕಲೆಗಳು ಪ್ರದರ್ಶನವಾಗುತ್ತಿವೆ. ಮೈಸೂರು ಕಲೆಗಳ ತವರೂರು ಎಂಬ ಬಿರುದು ಪಡೆದುಕೊಂಡಿದೆ. ಇಂದು ವಿಶ್ವಮಟ್ಟದಲ್ಲಿ ಮೈಸೂರಿನ ಕೀರ್ತಿ ಹೆಚ್ಚಿಸಿದೆ ಎಂದರು. ಈ ವೇಳೆ ಸಂಗೀತ ವಿದ್ವಾನ್ ಎಸ್.ಶಂಕರ್ ಸಂಗೀತ ಕಛೇರಿ ನಡೆಸಿಕೊಟ್ಟರು. ಇವರೊಂದಿಗೆ ಅಚ್ಯುತರಾವ್ ಮೃದಂಗ, ಎಂ.ಆರ್.ಮಂಜುನಾಥ್ ಘಟಂ, ಗಾಯಕ ಅವಿನಾಶ್ ಸಾಥ್ ನೀಡಿದರು.

ಉತ್ತರಾಖಂಡ ಭೂಕುಸಿತ: ಜ್ಯೋತಿರ್ಮಠ ಬೆನ್ನಲ್ಲೇ ಶಂಕರಾಚಾರ್ಯ ಮಠಕ್ಕೂ ಅಪಾಯ, ಬಿರುಕು ಬಿಟ್ಟ ಶಿವಲಿಂಗ, ಇಡೀ ಆಶ್ರಮವೇ ಕುಸಿಯುವ ಭೀತಿ!

ಚಮೋಲಿ, ಜ.8– ಈ ಹಿಂದೆ ಕಂಡುಕೇಳರಿಯದ ಭೀಕರ ಪ್ರವಾಹಕ್ಕೆ ತುತ್ತಾಗಿದ್ದ ಉತ್ತರಾಖಂಡದಲ್ಲಿ ಈಗ ಬೀಕರ ಭೂ ಕುಸಿತ ಸಮಸ್ಯೆ ತಲೆದೋರಿದ್ದು, ಬೆಟ್ಟ–ಗುಡ್ಡಗಳಲ್ಲ.. ಇಡೀ ಊರಿಗೆ ಊರೇ ಕುಸಿಯುವ ಭೀತಿ ಎದುರಾಗಿದೆ.

ಉತ್ತರಾಖಂಡದ ಹಿಂದೂ ಮಠಗಳಲ್ಲಿ ಒಂದಾದ ಜೋಶಿಮಠದ ಪರಿಸ್ಥಿತಿಯು ಘೋರವಾಗಿದ್ದು, ಜ್ಯೋತಿರ್ಮಠದ ಶಂಕರಾಚಾರ್ಯ ಮಠವು ಕಳೆದ 15 ದಿನಗಳಿಂದ ಹಲವೆಡೆ ಬಿರುಕು ಬಿಟ್ಟಿದ್ದು, ಇಡೀ ಮಠ ಕುಸಿಯ ಭೀತಿ ಎದುರಾಗಿದೆ. ಕಳೆದ 15 ದಿನಗಳಿಂದ ಈ ಬಿರುಕುಗಳು ಹೆಚ್ಚಾಗತೊಡಗಿದ್ದು, ಯಾವಾಗ ಬೇಕಾದರೂ ಮಠ ಕುಸಿಯುವ ಸಾಧ್ಯತೆ ಇದೆ ಎಂದು ಜ್ಯೋತಿರ್ಮಠದ ಆಡಳಿತ ಮಂಡಳಿ ತಿಳಿಸಿದೆ.

ಮನೆಗಳಲ್ಲಿ ಬಿರುಕು ಕಾಣಿಸಿಕೊಂಡ ನಂತರ, ಒಟ್ಟು 66 ಕುಟುಂಬಗಳು ಜೋಶಿಮಠದಿಂದ ವಲಸೆ ಹೋಗಿವೆ. ಪ್ರಕೃತಿ ವಿಕೋಪದಿಂದ ಸಂತ್ರಸ್ತರಾದ ಕುಟುಂಬಗಳಿಗೆ ಸುರಕ್ಷಿತ ಪರಿಹಾರ ಶಿಬಿರಗಳಲ್ಲಿ ಇರಲು ಜಿಲ್ಲಾಡಳಿತ ವ್ಯವಸ್ಥೆ ಮಾಡಿದೆ ಎಂದು ಆಡಳಿತ ಭಾನುವಾರ ತಿಳಿಸಿದೆ.

ಉತ್ತರಾಖಂಡದ ಪವಿತ್ರ ಪಟ್ಟಣ ಜೋಶಿಮಠದ ನಿವಾಸಿಗಳು ಪಟ್ಟಣದ ಮನೆಗಳು ಮತ್ತು ರಸ್ತೆಗಳಲ್ಲಿ ಬಿರುಕುಗಳನ್ನು ಗಮನಿಸಿದ ನಂತರ ಆತಂಕಕ್ಕೊಳಗಾಗಿದ್ದಾರೆ ಮತ್ತು ಆಡಳಿತದಿಂದ ಸ್ಥಳಾಂತರಿಸಿ ಪುರಸಭೆಯ ರಾತ್ರಿ ಆಶ್ರಯಕ್ಕೆ ಸ್ಥಳಾಂತರಿಸಲಾಗಿದೆ. ಜಿಲ್ಲಾ ವಿಪತ್ತು ನಿರ್ವಹಣಾ ಇಲಾಖೆಯ ಪ್ರಕಾರ, ಜೋಶಿಮಠದಲ್ಲಿ ನಿರಂತರ ಭೂಮಿ ಕುಸಿತದ ಪರಿಣಾಮವಾಗಿ 561 ಮನೆಗಳಲ್ಲಿ ಬಿರುಕುಗಳು ಉಂಟಾಗಿವೆ ಎಂದು ವರದಿಯಾಗಿದೆ.

ಸಂತ್ರಸ್ತ ಜನರು, ಅವರ ಕುಟುಂಬಗಳು ಮತ್ತು ಮಕ್ಕಳು ಪ್ರಸ್ತುತ ರಾತ್ರಿ ಆಶ್ರಯದಲ್ಲಿ ವಾಸಿಸುತ್ತಿದ್ದಾರೆ. ಪರಿಸ್ಥಿತಿಯನ್ನು ಅವಲೋಕಿಸಲು ರಾಜ್ಯ ಸರ್ಕಾರ ತಜ್ಞರ ತಂಡವನ್ನು ಪ್ರದೇಶಕ್ಕೆ ಕಳುಹಿಸಿದೆ. ಮುನ್ನೆಚ್ಚರಿಕೆ ಕ್ರಮವಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ತಂಡಗಳನ್ನು ಕೂಡ ಈ ಪ್ರದೇಶದಲ್ಲಿ ನಿಯೋಜಿಸಲಾಗಿದೆ ಎಂದು ಚಮೋಲಿ ಮುಖ್ಯ ಅಭಿವೃದ್ಧಿ ಅಧಿಕಾರಿ (ಸಿಡಿಒ) ಲಲಿತ್ ನಾರಾಯಣ ಮಿಶ್ರಾ ಶುಕ್ರವಾರ ತಿಳಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಮಠದ ಮುಖ್ಯಸ್ಥ ಸ್ವಾಮಿ ವಿಶ್ವಪ್ರಿಯಾನಂದ ಅವರು, ದೈವನಾಡಿನಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಅಭಿವೃದ್ಧಿಯೇ ದುರಂತಕ್ಕೆ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈಗ ಜಲವಿದ್ಯುತ್ ಯೋಜನೆಗಳಿಂದ ನಾಶಕ್ಕೆ ಕಾರಣವಾಗಿದೆ, ಮತ್ತು ಸುರಂಗಗಳು ನಮ್ಮ ಊರಿನ ಮೇಲೆ ಪರಿಣಾಮ ಬೀರಿವೆ. 15 ದಿನಗಳ ಹಿಂದೆ ಯಾವುದೇ ಬಿರುಕುಗಳು ಇರಲಿಲ್ಲ, ಆದರೆ ಇತ್ತೀಚಿನ ದಿನಗಳಲ್ಲಿ ಮಠದಲ್ಲಿ ಬಿರುಕುಗಳು ನಿರಂತರವಾಗಿ ಹೆಚ್ಚಾಗುತ್ತಿವೆ ಎಂದು ಹೇಳಿದ್ದಾರೆ. ಜೋಶಿಮಠ ಪಟ್ಟಣವನ್ನು ಜ್ಯೋತಿರ್ಮಠ ಎಂದೂ ಕರೆಯುತ್ತಾರೆ, ಇದು ಭಗವಾನ್ ಬದರಿನಾಥನ ಚಳಿಗಾಲದ ಆಸನವಾಗಿದೆ, ಅವರ ವಿಗ್ರಹವನ್ನು ಮುಖ್ಯ ಬದರಿನಾಥ ದೇವಾಲಯದಿಂದ ಜೋಶಿಮಠದ ವಾಸುದೇವ ದೇವಾಲಯಕ್ಕೆ ಪ್ರತಿ ಚಳಿಗಾಲದಲ್ಲಿ ತರಲಾಗುತ್ತದೆ. ಜೋಶಿಮಠದ ಪವಿತ್ರ ಪಟ್ಟಣವನ್ನು ಹಿಂದೂಗಳು ದೇಶದ ಪ್ರಮುಖ ಯಾತ್ರಾ ಕೇಂದ್ರವೆಂದು ಪೂಜಿಸುತ್ತಾರೆ.

ವಸ್ತುಪ್ರದರ್ಶನ ಆವರಣದಲ್ಲಿ ಮಕ್ಕಳ ಚಿತ್ರ ಕಲಾ ಸ್ಪರ್ಧೆ



ಮೈಸೂರು, ಜ.8–ಮಕ್ಕಳು ಸ್ಪರ್ಧೆಗಳಲ್ಲಿ ಭಾಗವಹಿಸುವುದು ಮುಖ್ಯ ಎಂದು ಮೇಯರ್ ಶಿವಕುಮಾರ್ ಅಭಿಪ್ರಾಯಪಟ್ಟರು.

ಸ್ವಾಮಿ ವಿವೇಕಾನಂದರ 160 ನೇ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆಯ ಪ್ರಯುಕ್ತ ನಗರದ ವಸ್ತುಪ್ರದರ್ಶನದ ಆವರಣದಲ್ಲಿ ಟೀಂ ಮೈಸೂರು ಹಾಗೂ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಶ್ವಕ್ಕೆ ಭಾರತೀಯತೆಯ ಬಗ್ಗೆ ಪರಿಚಯಿಸಿದ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆಯನ್ನು ಮಕ್ಕಳಿಗೆ ಅವರ ವಿಚಾರ ಕುರಿತು ಸ್ಥಳದಲ್ಲಿ ಚಿತ್ರ ಬಿಡಿಸುವ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ವಿಶೇಷ ರೀತಿಯಲ್ಲಿ ಅವರ ಜಯಂತಿಯನ್ನು ಆಚರಿಸುತ್ತಿರುವುದು ಸಂತಸದ ವಿಚಾರವಾಗಿದೆ. ಮಕ್ಕಳು ಈ ರೀತಿಯ ಸ್ಪರ್ಧೆಗಳಲ್ಲಿ ಭಾಗವಹಿಸುವುದು ಮುಖ್ಯ, ಎಲ್ಲಾ ಮಕ್ಕಳು ವಿಜೇತರಾಗಬೇಕೆಂದೇನಿಲ್ಲ. ಆದರೆ, ಭಾಗವಹಿಸುವಿಕೆ ಮೂಲಕ ಜೀವನದ ಏಳು ಬೀಳುಗಳನ್ನು ಎದುರಿಸಲು ಸನ್ನದ್ಧರಾಗಬೇಕು ಎಂದು ತಿಳಿಸಿದರು.

ನಂತರ ಟೀಂ ಮೈಸೂರು ಸಂಚಾಲಕ ಗೋಕುಲ್ ಗೋವರ್ಧನ್ ಮಾತನಾಡಿ, ಟೀಂ ಮೈಸೂರು ತಂಡದ ವತಿಯಿಂದ ಮೈಸೂರು ನಗರದಲ್ಲಿ ಸಾಮಾಜಿಕ ಚಟುವಟಿಕೆಗಳನ್ನು ಮಾಡುತ್ತಾ ಬಂದಿದ್ದೇವೆ, ಪ್ರತಿ ವರ್ಷವೂ ಸ್ವಾಮಿ ವಿವೇಕಾನಂದರ ಜಯಂತಿಯ ಪ್ರಯುಕ್ತ ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ, ಮತ್ತು ಇನ್ನಿತರ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂದಿದ್ದು ಅದು ಮುಂದುವರೆಯುತ್ತದೆ ಎಂದರು.

ಚಿತ್ರ ಕಲಾ ಸ್ಪರ್ಧೆಯಲ್ಲಿ 131 ಸ್ಪರ್ಧಾರ್ಥಿಗಳು ಭಾಗವಹಿಸಿದ್ದರು. ಪೆನ್ಸಿಲ್ ಲೆಡ್ಡಿನ ಮೂಲಕ ದೇವರ ಆಕೃತಿಗಳನ್ನು ನಿರ್ಮಿಸುವ ಕಲಾವಿದ ನಂಜುಂಡಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕಾವೇರಿ ಆಸ್ಪತ್ರೆಯ ಮುಖ್ಯಸ್ಥ ಡಾ. ಚಂದ್ರಶೇಖರ್, ಪೈ ವಿಸ್ಟಾ ಹೋಟೆಲ್ ವ್ಯವಸ್ಥಾಪಕ ಮಹೇಶ್ ಕಾಮತ್, ಪಾಲಿಕೆ ಸದಸ್ಯೆ ಛಾಯದೇವಿ, ಟೀ ಮೈಸೂರು ಸದಸ್ಯರಾದ ಕಿರಣ್ ಜೈ ರಾಮ್ ಗೌಡ, ಯಶವಂತ, ಲಿಂಗರಾಜು ಹಿರಿಯಣ್ಣ, ಅನಿಲ್ ಜೈನ್, ಮುರಳಿ, ಆನಂದ್, ಪ್ರಸನ್ನ ರಾಜ್ ಗುರು, ಯತೀಶ್, ಅಮರ್, ಮಂಜುನಾಥ್, ಹರೀಶ್ ಶೆಟ್ಟಿ, ಅಭಿಷೇಕ್, ಗಣೇಶ್, ಹರೀಶ್, ಸಹನ, ಕಾವೇರಿ, ಹಾಗೂ ಇನ್ನಿತರ ಉಪಸ್ಥಿತರಿದ್ದರು.

ಹಸಿರು ನಮ್ಮ ಉಸಿರು

ಗೋಕರ್ಣ ಕಡಲತೀರ, ಕೂಡಲಸಂಗಮದಲ್ಲಿ ಸಿದ್ದೇಶ್ವರ ಸ್ವಾಮೀಜಿ ಚಿತಾಭಸ್ಮ ವಿಸರ್ಜನೆ

ಬಾಗಲಕೋಟೆ, ಜ.8– ವಿಜಯಪುರದ ಜ್ಞಾನಯೋಗಿ ಆಶ್ರಮದ ಸಿದ್ದೇಶ್ವರ ಶ್ರೀಗಳ ಚಿತಾಭಸ್ಮ ತ್ರಿವೇಣಿ ಸಂಗಮ ಹಾಗೂ ಬಸವಣ್ಣನವರ ಐಕ್ಯ ಸ್ಥಳವಾಗಿರುವ ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮದಲ್ಲಿ ವಿಸರ್ಜಿಸಲಾಯಿತು. ಸಿದ್ದೇಶ್ವರ ಶ್ರೀಗಳ ಆಶಯದಂತೆ ಚಿತಾ ಭಸ್ಮವನ್ನು ಮೂರು ನದಿಗಳಸಂಗಮ ಕೂಡಲಸಂಗಮದಲ್ಲಿ ವಿಸರ್ಜಿಸಲಾಯಿತು. ಬೋಟ್‌ನಲ್ಲಿ ಶ್ರೀಗಳ ಭಾವಚಿತ್ರ, ಮಡಿಕೆಯಲ್ಲಿ ಚಿತಾಭಸ್ಮ ಇಟ್ಟುಕೊಂಡು ಬಸವಲಿಂಗ ಸ್ವಾಮೀಜಿ, ಪಂಚಮಸಾಲಿ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಜ್ಞಾನಯೋಗಾಶ್ರಮದ ಸ್ವಾಮೀಜಿಗಳು ತೆರಳಿ ನದಿಯ ನಡುವೆ ಚಿತಾಭಸ್ಮವನ್ನು ಸಮರ್ಪಣೆ ಮಾಡಿದರು. ಸಿದ್ದೇಶ್ವರ ಶ್ರೀಗಳ ಚಿತಾಭಸ್ಮ ವಿಸರ್ಜನೆ ನೋಡುವುದಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು.

ಕಾಡುಪ್ರಾಣಿಗಳ ಮಾಂಸ ಮಾರಾಟ ಜಾಲ ಪತ್ತೆ

● ಮೂವರು ಬೇಟೆಗಾರರ ಬಂಧನ ● ರೆಸಾರ್ಟ್, ಹೋಂಸ್ಟೇಗೆ ಕಾಡು ಪ್ರಾಣಿಗಳ ಮಾಂಸ ಸರಬರಾಜು ಮಾಡುತ್ತಿದ್ದರು



ಮೈಸೂರು, ಜ.8(ಎಂಟಿವೈ,ಎಸ್‌ಬಿಡಿ)– ಕಾಡು ಪ್ರಾಣಿಗಳನ್ನು ಬೇಟೆಯಾಡಿ, ಮಾಂಸವನ್ನು ರೆಸಾರ್ಟ್ ಹಾಗೂ ಹೋಂಸ್ಟೇಗಳಿಗೆ ಮಾರಾಟ ಮಾಡುತ್ತಿದ್ದ ಜಾಲವನ್ನು ಪತ್ತೆ ಮಾಡಿರುವ ಅರಣ್ಯ ಇಲಾಖೆ ಅಧಿಕಾರಿಗಳು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಆನೆಚೌಕೂರು ವನ್ಯಜೀವಿ ವಲಯದ ಮೈಸೂರು–ವಿರಾಜಪೇಟೆ ರಾಜ್ಯ ಹೆದ್ದಾರಿಯಲ್ಲಿ ಶನಿವಾರ ಮಧ್ಯರಾತ್ರಿ ಗಸ್ತಿನಲ್ಲಿದ್ದ ಅರಣ್ಯ ಇಲಾಖೆ ಸಿಬ್ಬಂದಿ, ಅತ್ತೂರಿನ ಅಪ್ಪಯ್ಯ, ಸಿದ್ದಾಪುರ ಗುಹ್ಯದ ಅರುಣ್ ಹಾಗೂ ಗದ್ದೆ ಮನೆಯ(ಅತ್ತೂರು) ಮಂಜು ಎಂಬುವವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಾಡು ಪ್ರಾಣಿಗಳ ಮಾಂಸ ಮಾರಾಟ ದಂಧೆ ಬಯಲಾಗಿದೆ.

ಮೈಸೂರು–ವಿರಾಜಪೇಟೆ ಹೆದ್ದಾರಿಯಲ್ಲಿ ಶನಿವಾರ ತಡರಾತ್ರಿ 1 ಗಂಟೆ ಸಮಯದಲ್ಲಿ ಬಿಳಿ ಬಣ್ಣದ ಓಮಿನಿ ವ್ಯಾನ್ ನಿಂತಿತ್ತು. ಅದೇ ವೇಳೆ ಗಸ್ತಿನಲ್ಲಿದ್ದ ಅರಣ್ಯ ಇಲಾಖೆ ಸಿಬ್ಬಂದಿ ವ್ಯಾನ್ ಬಳಿ ತೆರಳುತ್ತಿದ್ದಂತೆ ಅದರಲ್ಲಿದ್ದ ವ್ಯಕ್ತಿ ಗಾಬರಿಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದ. ಆತನನ್ನು ಹಿಡಿದು ವಿಚಾರಣೆ ನಡೆಸಿದಾಗ ಮೂವರು ಬೇಟೆಗೆ ಬಂದಿದ್ದು, ಇನ್ನಿಬ್ಬರು ಕಾಡಿನೊಳಗೆ ಹೋಗಿದ್ದಾರೆಂದು ತಿಳಿಸಿದ. ಕೂಡಲೇ ಕಾರ್ಯಾಚರಣೆ ಮುಂದುವರೆಸಿ ಕಾಡಿನಲ್ಲಿ ಅಡಗಿದ್ದ ಮತ್ತಿಬ್ಬರನ್ನು ಹಿಡಿದ ಅರಣ್ಯ ಸಿಬ್ಬಂದಿ, ಅವರ ಬಳಿ ಇದ್ದ ಕಾಡತೂಸುಗಳು ತುಂಬಿದ್ದ ಬಂದೂಕು, ಟಾರ್ಚ್‌ಗಳನ್ನು ವಶಕ್ಕೆ ಪಡೆದರು.

ಓಮಿನಿ ಕಾರು ಸಹಿತ ಮೂವರನ್ನೂ ವಲಯ ಕಚೇರಿಗೆ ಕರೆತಂದು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಬೇಟೆಗಾಗಿ ಕಾಡಿಗೆ ಹೋಗಿದ್ದಾಗಿ ತಿಳಿಸಿದರು. ಅಲ್ಲದೆ ಕಳೆದ ಕ್ರಿಸ್‌ಮಸ್ ಸಂದರ್ಭದಲ್ಲಿ ಕಾಡುಕೋಣವೊಂದನ್ನು ಬೇಟೆಯಾಡಿದ್ದು, ಆದರೆ ಅದರ ಕಳೇಬರವನ್ನು ಸಾಗಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಈಗ ಮತ್ತೆ ಬೇಟೆಗೆ ಬಂದಿದ್ದೆವು. ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ಹತ್ತಿರದ ಕೆಲವು ರೆಸಾರ್ಟ್ ಹಾಗೂ ಹೋಂಸ್ಟೇಗಳಿಗೆ ಮಾರಾಟ ಮಾಡುತ್ತಿದ್ದೆವು ಎಂದು ಒಪ್ಪಿಕೊಂಡರು. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ನ್ಯಾಯಾಧೀಶರ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಹರ್ಷಕುಮಾರ ಚಿಕ್ಕನರಗುಂದ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ದಯಾನಂದ ಅವರ ಮಾರ್ಗದರ್ಶನದಲ್ಲಿ ಹಾಗೂ ವಲಯ ಅರಣ್ಯಾಧಿಕಾರಿ ಪಿ.ಸಿ.ದಿಲೀಪ್ ಕುಮಾರ್, ಉಪ ವಲಯ ಅರಣ್ಯಾಧಿಕಾರಿಗಳಾದ ಡಿ.ವಿನೋದ್ ಕುಮಾರ, ಎಂ.ಹೆಚ್.ನಂದನ್‌ಕುಮಾರ ಹಾಗೂ ಅರಣ್ಯ ರಕ್ಷಕರಾದ ಶಿವಪ್ಪ ಸಿದ್ದಪ್ಪಾಜಿ ಸೇರಿದಂತೆ ಎಸ್‌ಟಿಪಿಎಫ್ ಸಿಬ್ಬಂದಿ ಹಾಗೂ ಆನೆಚೌಕೂರು ವನ್ಯಜೀವಿ ವಲಯದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ವಿಚಾರಣೆ ವೇಳೆ ಆರೋಪಿಗಳು ನೀಡಿದ ಮಾಹಿತಿ ಆಧರಿಸಿ, ಸಮೀಪದ ರೆಸಾರ್ಟ್‌ಗಳು ಹಾಗೂ ಹೋಂಸ್ಟೇಗಳ ಮೇಲೆ ಅರಣ್ಯ ಇಲಾಖೆ ಅಧಿಕಾರಿಗಳು ಕಣ್ಣಿಟ್ಟಿದ್ದಾರೆ ಎಂದು ತಿಳಿದು ಬಂದಿದೆ

ನಕ್ಕರೆ ಅದೇ ಸ್ವರ್ಗ

ಗುಂಡ : ಸರ್ ನನಗೆ ಡೈವರ್ಸ್ ಬೇಕು.
ಜಡ್ಜ್ : ಯಾಕೆ?
ಗುಂಡ : 6 ತಿಂಗಳಿಂದ ನನ್ನ ಹೆಂಡತಿ ನನ್ನತ್ರ ಮಾತಾಡುತ್ತಿಲ್ಲ.
ಜಡ್ಜ್ : ಸುಮ್ಮನೇ ಮನೆಗೆ ಹೋಗು, ಇಂತಹ ಹೆಂಡತಿ ಯಾರಿಗೂ ಸಿಗಲ್ಲ...!

ಮೈಸೂರು ಮಿತ್ರ
ಸೋಮವಾರ, 9 ಜನವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕಷ್ಟಗಳನ್ನು ಮೌನವಾಗಿ ದಾಟಬೇಕು.
ಪರಿಶ್ರಮ ಸದ್ದಿಲ್ಲದೆ ಸಾಗಬೇಕು.
ಸಿಗುವ ಯಶಸ್ಸಿನ ಶಬ್ದ ಜಗತ್ತಿಗೆ ಕೇಳಿಸುವಷ್ಟು ಜೋರಾಗಿರಬೇಕು.


– ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎತ್ತು ಈಯಿತು ಅಂದರೆ ಕೊಟ್ಟಿಗೆಗೆ ಕಟ್ಟು ಎಂದರಂತೆ.

ನಿಮ್ಮ ಪತ್ರಗಳು

ಸಿದ್ದೇಶ್ವರ ಸ್ವಾಮೀಜಿ ಸಂತರಲ್ಲಿ ಮಹಾ ಸಂತ

ಮಾನ್ಯರೆ,



ಜ್ಞಾನ ಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿಗಳನ್ನು ಸುಜ್ಞಾನಮೂರ್ತಿ, ಜೋಬಿಲ್ಲದ ಜೋಗಿ, 2ನೇ ವಿವೇಕಾನಂದ, 2ನೇ ಬಸವಣ್ಣ, ಬುದ್ಧ, ರಾಮಕೃಷ್ಣ ಪರಮಂಸರ ಪ್ರತೀಕ... ಹೀಗೆ ಹಲವಾರು ಗಣ್ಯರು ಅವರನ್ನು ಹಲವಾರು ರೀತಿಯಲ್ಲಿ ವರ್ಣಿಸಿದ್ದಾರೆ. ಈ ಎಲ್ಲಾ ಮಹಾ ಸಂತರ ಗುಣಗಳನ್ನು ಒಬ್ಬರೇ ಹೊಂದಿದ್ದರೆಂದರೆ," "ಅವರೊಬ್ಬ ಸಂತರಲ್ಲಿ ಮಹಾ ಸಂತ". ಸುಮಾರು 20 ರಿಂದ 25 ಲಕ್ಷ ಜನರು ಅಂತ್ಯ ಸಂಸ್ಕಾರದಲ್ಲಿ ಭಾಗಿಯಾಗಿರುವುದು "ಗಿನ್ನಿಸ್ ದಾಖಲೆ" ಸೇರುವಂತದ್ದು. ಎಲ್ಲಕ್ಕಿಂತ ಹೆಚ್ಚಾಗಿ ಯಾವುದೇ ರೀತಿಯ ಗೋಜು–ಗದ್ದಲವಿಲ್ಲದೇ ಶಾಂತಿಯಿಂದ ಜನರು ನಡೆದುಕೊಂಡಿದ್ದು ಮಹಾಸಂತರಿಗೆ ನೀಡಿದ "ಮಹಾನ್ ಗೌರವ" ಇಂಥ ಸಂತರು ಮತ್ತೆ– ಮತ್ತೆ ಹುಟ್ಟಿಬರಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು

ರಾಜಕೀಯಕ್ಕೆ ಪ್ರಾಣಿ ಹೆಸರು ಬಳಕೆ ತಪ್ಪು

ಮಾನ್ಯರೆ,

ಮಾಜಿ ಮುಖ್ಯಮಂತ್ರಿ ಹಾಗೂ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಬಗ್ಗೆ "ನಾಯಿ ಮರಿ" ಎಂಬ ಪದ ಬಳಸಿರುವುದನ್ನು ಅನೇಕ ಬಿಜೆಪಿ ನಾಯಕರು ಖಂಡಿಸಿದ್ದಾರೆ. ತಮ್ಮ ನಾಲಿಗೆಯ ಚಪಲಕ್ಕೆ ಮುಗ್ಧ ಪ್ರಾಣಿಗಳನ್ನು ಬಳಸಿಕೊಳ್ಳುವ ಪ್ರವೃತ್ತಿ ತೀವ್ರ ಖಂಡನೀಯ. ಅದರಲ್ಲೂ ನಾಯಿ ಅತ್ಯಂತ ನಿಷ್ಠಾವಂತ ಪ್ರಾಣಿ ಎಂದು ಹೆಸರಾಗಿದೆ. ಬಿಜೆಪಿ ನಾಯಕರು ಸಹ ಈ ಹಿಂದೆ ಇಂತಹ ಕೀಳು ಅಭಿರುಚಿಯ ಭಾಷೆಯನ್ನು ಬಳಸಿರುವುದರಿಂದ ಈಗ ಮಾಡಿದ್ದುಣ್ಣೋ ಮಹರಾಯ ಎಂಬ ಪರಿಸ್ಥಿತಿ ತಲೆದೋರಿದೆ. ಮನುಷ್ಯರ ಹಾಗೆ ಪ್ರಾಣಿಗಳಲ್ಲಿ ಅಸೂಯೆ, ಮದ, ಮಾತ್ಸರ್ಯ, ದುರಾಸೆ, ದ್ವೇಷ ಮುಂತಾದ ಕೆಟ್ಟ ಗುಣಗಳು ತುಂಬಿರುವುದಿಲ್ಲ. ಅವುಗಳದ್ದು ಏನಿದ್ದರೂ ಆಹಾರಕ್ಕಾಗಿ ಹೋರಾಟ. ಹಸು, ಎತ್ತು, ಎಮ್ಮೆ, ನಾಯಿ, ಕತ್ತೆ, ಕುರಿ, ಕೋಳಿ ಮುಂತಾದ ಹಲವಾರು ಪ್ರಾಣಿ ಪಕ್ಷಿಗಳು ಜೀವ ಸಂಕುಲದ ಅವಿಭಾಜ್ಯ ಅಂಗವಾಗಿದ್ದು, ಜನಸ್ನೇಹಿಯಾಗಿರುವುದಷ್ಟೇ ಅಲ್ಲದೇ ಜನೋಪಕಾರಿಗಳಾಗಿವೆ. ಸಿದ್ದರಾಮಯ್ಯನವರೇ ಆಗಲಿ ಬೇರೆ ಯಾವ ರಾಜಕಾರಣಿಗಳೇ ಆಗಲಿ, ಪ್ರಾಣಿಗಳನ್ನು ರಾಜಕೀಯದಲ್ಲಿ ಬೆರೆಸುವುದು ಶುದ್ಧ ತಪ್ಪು.

– ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಕ್ಯೂಆರ್ ಕೋಡ್ ಬಳಸಿ ವಿದ್ಯುತ್ ಬಿಲ್ ಪಾವತಿಸಿ

ಮಾನ್ಯರೆ,

ವಿದ್ಯುತ್ ಬಿಲ್ ಪಾವತಿಗೆ ಇನ್ನು ಮುಂದೆ ಗಂಟೆ ಗಟ್ಟಲೆ ಕಾಯುವ ಪ್ರಮೇಯವಿಲ್ಲ. ಸೆಸ್ಕ್ ಈಗಾಗಲೇ ಹಲವಾರು ಗ್ರಾಹಕ ಸ್ನೇಹಿ ವ್ಯವಸ್ಥೆಗಳನ್ನು ಜಾರಿಗೊಳಿಸಿದೆ. ಯುಪಿಐ ಪಾವತಿ ಅಪ್ಲಿಕೇಶನ್ ಅನ್ನು ಬಳಸಿಕೊಂಡು ವಿದ್ಯುತ್ ಬಿಲ್‌ನಲ್ಲಿ ಮುದ್ರಿಸಲಾದ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಹಣ ಪಾವತಿಸಬಹುದು ಮತ್ತು ತಕ್ಷಣವೇ ತಮ್ಮ ಮೊಬೈಲ್‌ನಲ್ಲಿ ಪಾವತಿ ಸಂದೇಶವನ್ನು ಪಡೆಯಬಹುದು. ಇದರಿಂದ ಕೆಲಸದಲ್ಲಿ ಬ್ಯುಸಿ ಇರುವ ಜನರಿಗೆ ತುಂಬಾ ಉಪಯೋಗವಾಗುತ್ತದೆ. ಸಮಯ ವ್ಯರ್ಥವಾಗುವುದಿಲ್ಲ ಮತ್ತು ಆ ಸಮಯದಲ್ಲಿ ಬೇರೆ ಕೆಲಸ ಮಾಡಿಕೊಳ್ಳಬಹುದು. ಇದು ದುರುಪಯೋಗವಾಗದಂತೆ ಕಟ್ಟೆಚ್ಚರ ವಹಿಸಬೇಕು. ಗ್ರಾಮೀಣ ಪ್ರದೇಶದಲ್ಲೂ ಈ ವ್ಯವಸ್ಥೆ ಜಾರಿಗೆ ತರಬೇಕು.

–ರಚನಾ ಎಂ.ಎಸ್., ಮಹಾರಾಜ ಕಾಲೇಜು, ಮೈಸೂರು.

ಪಂಡಿತ ಸಮುದಾಯಕ್ಕೆ ಬದುಕುವ ಹಕ್ಕಿಲ್ಲವೆ?

ಮಾನ್ಯರೆ,

ಮೊನ್ನೆ ಕಾಶ್ಮೀರದ ಶ್ರೀನಗರದ ಬಳಿಯ ಹಳ್ಳಿಯೊಂದರಲ್ಲಿ ಸುಮಾರು 8 ಜನ ಅಮಾಯಕ ಹಿಂದೂಗಳ ನರಮೇಧ ನಡೆದಿದೆ. ಪಾಕಿಸ್ತಾನದಿಂದ ಬಂದ ಜಿಹಾದಿಗಳು ಪುಟ್ಟ ಮಕ್ಕಳನ್ನೂ ಸಹ ಬಿಡದೆ ಹತ್ಯೆಗೈದಿದ್ದಾರೆ. ಈ ಮಕ್ಕಳ ದೇಹ ಚೂರು–ಚೂರಾಗಿ ಬಿದ್ದಿರುವ ದೃಶ್ಯಗಳು ದೂರದರ್ಶನದಲ್ಲಿ ಪ್ರಸಾರಗೊಂಡಿವೆ. ಹಿಂದೂಗಳ ನರಮೇಧವನ್ನು ನಿಲ್ಲಿಸಲು ಸಾಧ್ಯವಿಲ್ಲವೇ? ಅಲ್ಪಸಂಖ್ಯಾತರಾದ ಪಂಡಿತ ಜನಾಂಗ ತಮ್ಮ ಹುಟ್ಟೂರಲ್ಲಿ ಜೀವಿಸುವ ಹಕ್ಕಿಲ್ಲವೇ? ಇದಕ್ಕೆ ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು.

ವಿರೋಧ ಪಕ್ಷವಾಗಲೀ, ಬುದ್ಧಿಜೀವಿಗಳಾಗಲೀ ಇದನ್ನು ವಿರೋಧಿಸಲಿಲ್ಲ. ಹಿಂದೂಗಳು ಭಾರತದಲ್ಲಿ ಅಲ್ಪಸಂಖ್ಯಾತರಾಗುತ್ತಿದ್ದಾರೆ. ಕಾಶ್ಮೀರದ ಪಂಡಿತರಿಗೆ ತಮ್ಮ ರಕ್ಷಣೆಗೆ ಬಂದೂಕುಗಳನ್ನು ಕೇಂದ್ರ ಸರ್ಕಾರ ನೀಡಬೇಕು. ಇಂದಿನ ದಿನಗಳಲ್ಲಿ ಅಲ್ಲಿನ ಮೂಲನಿವಾಸಿಗಳಾದ ಪಂಡಿತ ಜನಾಂಗ ಹಿಂಸೆಯಿಂದ ಪರಿತಪಿಸುತ್ತಿದೆ. ಭಾರತದ ಬುದ್ಧಿಜೀವಿಗಳು ಇಂತಹ ಘಟನೆಗಳು ನಡೆದಾಗ ಖಂಡಿಸಬೇಕು. ವಿರೋಧ ಪಕ್ಷಗಳೂ ಸಹ ಮುಖಪ್ರೇಕ್ಷಕರಾಗಬಾರದು. ಹಿಂಸೆ ಎಲ್ಲಿಯೂ, ಯಾರ ವಿರುದ್ಧವೂ ನಡೆಯಬಾರದು. ಹುತಾತ್ಮರಾದ ಆ ಜೀವಗಳಿಗೆ ಸಂತಾಪ ಸೂಚಿಸಬೇಕು. ಇನ್ನು ಮುಂದೆ ಇಂತಹ ಕೃತ್ಯಗಳಾಗದಂತೆ ನಮ್ಮ ಸೈನಿಕರಿಗೆ ಧೈರ್ಯ ತುಂಬುವಂತಾಗಲಿ.

– ಮಜೂರು ರಘುವೀರ ಪುರಾಣಿಕ, ಸಿದ್ಧಾರ್ಥನಗರ, ಮೈಸೂರು,

ಮೀಸಲಾತಿಯಿಂದ ಸಮಸಮಾಜ ಸ್ಥಾಪನೆ ಸಾಧ್ಯವೇ?

ಮಾನ್ಯರೆ,

ರಾಜ್ಯ ಸರ್ಕಾರ ಕೆಲವು ಸಮುದಾಯಗಳಿಗೆ ಮೀಸಲಾತಿ ನೀಡಿದ ನಂತರದಲ್ಲಿ, ಈಗ ಪ್ರತಿದಿನ ಇತರೆ ಸಮುದಾಯಗಳು, ತಮ್ಮ ಸಮುದಾಯಕ್ಕೂ ಮೀಸಲಾತಿ ಕೊಡಬೇಕೆಂದೋ ಅಥವಾ ಹಾಲಿ ಇರುವ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕೆಂದೋ ಆಗ್ರಹಿಸುತ್ತಿರುವುದು ಮತ್ತು ತಮ್ಮ ಬೇಡಿಕೆಯನ್ನು ಈಡೇರಿಸದಿದ್ದಲ್ಲಿ ಉಗ್ರ ಹೋರಾಟ ಮಾಡುತ್ತೇವೆಂಬುದನ್ನು ಪ್ರತಿದಿನ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ.

ಒಂದು ಕಡೆ ಸುಪ್ರೀಂಕೋರ್ಟ್, ಮೀಸಲಾತಿ ಶೇಖಡ ಐವತ್ತನ್ನು ಮೀರುವಂತಿರಬಾರದು ಎಂದು ಈಗಾಗಲೇ ಆದೇಶ ನೀಡಿದೆ. ಆದರೂ ಸರ್ಕಾರಗಳು ಸದರಿ ಆದೇಶದಿಂದ ತಪ್ಪಿಸಿಕೊಳ್ಳಲು, ಶಾಸನರೂಪದಲ್ಲಿ ಮೀಸಲಾತಿಯನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿದೆ. ಆದರೆ ರಾಜಕೀಯ ಪಕ್ಷಗಳು ಅಧಿಕಾರ ಹಿಡಿಯಲು, ಸಮಾಜದಲ್ಲಿ ಈ ರೀತಿಯಲ್ಲಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿಕೊಂಡೋ ಅಥವಾ ಹೊಸದಾಗಿ ನೀಡುತ್ತಾ ಹೋದರೆ ಸಮ ಸಮಾಜದ ಸ್ಥಾಪನೆ ಸಾಧ್ಯವೇ? ಮತ್ತು ಶಾಸನ ರೂಪದಲ್ಲಿ ನೀಡುವ ಮೀಸಲಾತಿಯ ಅನುಷ್ಠಾನ ಎಷ್ಟರಮಟ್ಟಿಗೆ ಅನುಕೂಲವಾಗಬಹುದು ಎಂಬುದನ್ನು ಮುಂದಿನ ದಿನಗಳಲ್ಲಿ ಕಾದು ನೋಡಬೇಕು?

–ಬ್ಯಾಂಕ್ ಶಿವಕುಮಾರ್, ಜೆ.ಪಿ. ನಗರ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು

ಚಿಂತನೆ

ಅಳಿಕಾಗುತ್ತಿದೆಯೇ ಪ್ರಜಾಪ್ರಭುತ್ವ?

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಇಡೀ ವಿಶ್ವದಲ್ಲಿಯೇ ಶ್ರೇಷ್ಠವಾದುದು ಎಂದು ನಾವು ಹೆಗ್ಗಳಿಕೆಯಿಂದ ಹೇಳಿಕೊಳ್ಳುತ್ತೇವೆ. ಇದು ನಿಜವೂ ಸಹಾ. ಭಾರತಕ್ಕೆ ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ನಮಗೆ ಗೊತ್ತಿದ್ದುದು ಕೇವಲ ಬ್ರಿಟಿಷ್ ಆಡಳಿತ ಮಾತ್ರ. ಅದನ್ನು ಹೊರತುಪಡಿಸಿದರೆ ಒಂದಷ್ಟು ಕಡೆ ರಾಜರ ಆಡಳಿತ. ಇದನ್ನು ಬಿಟ್ಟರೆ ನಮಗೆ ಬೇರೆ ಆಡಳಿತದ ಪರಿಕಲ್ಪನೆ ಇರಲಿಲ್ಲ. ದೇಶದಲ್ಲಿದ್ದ ಏಳೆಂಟು ನೂರು ರಾಜರು ತಮ್ಮದೇ ಆದ ರೀತಿಯ ರಾಜ್ಯಪಾಲನೆ ಮಾಡುತ್ತಿದ್ದರು. ಅಲ್ಲದೆ ಸುಮಾರು ಏಳೆಂಟು ಶತಮಾನಗಳ ಕಾಲ ನಮಗೆ ನಮ್ಮದೇ ಆಡಳಿತ ಬೇರೆ ಇರಲಿಲ್ಲ. ಅತ್ಯಂತ ಸಮೃದ್ಧವಾದ ದೇಶವಾಗಿದ್ದರಿಂದ ಅನೇಕ ಪರಕೀಯರಿಗೆ ಈ ದೇಶದ ಮೇಲೆ ದಂಡೆತ್ತಿ ಬರುವ ಮನಸ್ಸಾದುದೂ ಸಹಜವೇ ಆಗಿತ್ತು. ಆದರೆ ದೇಶದ ಬಗ್ಗೆ ಸಮಗ್ರ ಕಲ್ಪನೆ ಇಲ್ಲದ ಸಂದರ್ಭದಲ್ಲಿ, ಅವರು ಬಂದು ದರೋಡೆ ಮಾಡಿಹೋದರೂ ಇಡೀ ದೇಶ ಅದಕ್ಕೆ ವಿರೋಧಿ ಸ್ಪಂದನೆ ನೀಡಲಿಲ್ಲ. ಹೀಗಾಗಿ ಪದೇಪದೇ ಆಕ್ರಮಣಗಳು ಈ ದೇಶದ ಮೇಲೆ ಆಯಿತು. ಕೊನೆಗೆ ವ್ಯಾಪಾರಕ್ಕೆ ಬಂದ ಬ್ರಿಟಿಷರು ಈ ದೇಶದ ಆಡಳಿತದ ಚುಕ್ಕಾಣಿ ಹಿಡಿದರು. ನಮ್ಮ ದೌರ್ಬಲ್ಯವನ್ನು ಅವರು ಉಪಯೋಗಿಸಿಕೊಂಡು ಶತಮಾನಗಳ ಕಾಲ ನಮ್ಮನ್ನು ಆಳಿದರು. ಕೊನೆಗೆ ಎಚ್ಚೆತ್ತ ಜನತೆ ಹೋರಾಟ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಾವು ನಮ್ಮನ್ನು ಹೇಗೆ ಆಡಳಿತಕ್ಕೆ ಒಳಪಡಿಸಿಕೊಳ್ಳಬೇಕು? ಎಂಬ ಪ್ರಶ್ನೆ ಬೃಹದಾಕಾರವಾಗಿ ಎದ್ದು ನಿಂತಿತು. ಕೊನೆಗೆ ಆಯ್ಕೆಯಾದುದು ಪ್ರಜಾಪ್ರಭುತ್ವ.

ಅಲ್ಲಿಯವರೆಗೆ ರಾಜರ ಆಡಳಿತ ಕಂಡ ದೇಶಕ್ಕೆ ಇದು ಹೊಸದು. ಆದರೆ ಪ್ರಜಾಪ್ರಭುತ್ವದ ವಿಶೇಷತೆ ಎಲ್ಲರಲ್ಲೂ ಉತ್ಸಾಹ ಮೂಡಿಸಿತು. ಇದು ನಮ್ಮನ್ನು ನಾವೇ ಆಳ್ವಿಕೆ ಮಾಡಿಕೊಳ್ಳುವ ವ್ಯವಸ್ಥೆ ಎಂಬುದು ಇದರ ವಿಶೇಷತೆ ಎಂಬುದರಿಂದ ಇದನ್ನು ದೇಶವು ಒಪ್ಪಿಕೊಂಡಿತು. ನಾವು ಆರಿಸುವ ಜನಪ್ರತಿನಿಧಿಗಳು ದೇಶದ ಆಡಳಿತ ನೋಡಿಕೊಳ್ಳುತ್ತಾರೆ, ಅವರು ನಮ್ಮವರಾಗಿರುವುದರಿಂದ ನಮಗೆ ಬೇಕಾದ, ದೇಶಕ್ಕೆ ಹಿತವಾದ ಆಡಳಿತ ನಡೆಸುತ್ತಾರೆ ಎಂಬ ಆಶಾಭಾವನೆಯಿಂದ ಜನರು ಜನಪ್ರತಿನಿಧಿಗಳನ್ನು ಆರಿಸುವುದಷ್ಟೇ ನಮ್ಮ ಕೆಲಸ. ಉಳಿದಂತೆ ಅವರು ಆಡಳಿತ ನೋಡಿಕೊಳ್ಳುತ್ತಾರೆ ಎಂದು ಭಾವಿಸಿದರು. ಆದರೆ ಒಂದು ನಾಲ್ಕೈದು ದಶಕಗಳ ನಂತರ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಶಿಥಿಲತೆ ಕಾಣತೊಡಗಿತು. ಜನರು ಆಗಲೂ ಎಚ್ಚೆತ್ತುಕೊಳ್ಳಲಿಲ್ಲ. ಹಾಗಾಗಿ ಪ್ರಜಾಪ್ರಭುತ್ವ ಮತ್ತಷ್ಟು ಪ್ರಶ್ನಾರ್ಥಕವಾಗತೊಡಗಿತು. ನಾವು ಆರಿಸಿ ಕಳುಹಿಸುವ ಜನಪ್ರತಿನಿಧಿಗಳು ತಮ್ಮಿಷ್ಟದಂತೆ ವರ್ತಿಸತೊಡಗಿದರು. ಅವರನ್ನು ಯಾರೂ ಪ್ರಶ್ನಿಸುವಂತಿಲ್ಲ ಎಂಬಂತೆ ಅವರ ನಡವಳಿಕೆಗಳು ಕಂಡುಬರತೊಡಗಿತು. ಇದು ಇತ್ತೀಚೆಗೆ ಮತ್ತಷ್ಟು ಜಾಸ್ತಿಯಾಗತೊಡಗಿದೆ.

ಹಿಂದೆ ಒಬ್ಬರು ಜನಪ್ರತಿನಿಧಿಯಾದಾಗ ಆರಂಭದಲ್ಲಿ ಅತ್ಯಂತ ವಿಶ್ವಾಸದಿಂದ 'ನಾನು ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ' ಎಂದೆಲ್ಲಾ ಹೇಳುವಾಗ ಪಕ್ಕದಲ್ಲಿದ್ದ ಅನುಭವಿಗಳು (?) ಅವರಿಗೆ ಹೀಗೆ ಉಪದೇಶಿಸಿದರಂತೆ. ನೀನು ಭಾವಿಸಿರುವ ಹಾಗೆ ಐದು ವರ್ಷವೂ ಕೆಲಸ ಮಾಡುವುದು ಸರಿಯಲ್ಲ. ಮೊದಲ ಒಂದೆರಡು ವರ್ಷ ಗೆದ್ದ ಬಗ್ಗೆ ಸಿಗುವ ಸನ್ಮಾನಗಳನ್ನು ಸ್ವೀಕರಿಸಬೇಕು. ನೀನು ಹೊಸದಾಗಿ ಆಯ್ಕೆಯಾಗಿರುವುದರಿಂದ ನೀವು ಏಕೆ ಕೆಲಸ ಮಾಡಿಲ್ಲ ಎಂದು ಜನರು ಕೇಳುವುದಿಲ್ಲ. ನಂತರದ ಒಂದು ವರ್ಷ ಹೆಚ್ಚಾಗಿ ಜನರಿಗೆ ದೊರಕಬಾರದು. ನಂತರ ಒಂದಷ್ಟು ಕೆಲಸ ಮಾಡಿ ಮತ್ತೆ ಆಯ್ಕೆಯಾಗುವಂತೆ ನೋಡಿಕೊಳ್ಳಬೇಕು ಎಂದು ಅವರು ಹೇಳಿದರಂತೆ. ಇದನ್ನು ನಂತರದ ಜನಪ್ರತಿನಿಧಿಗಳು ಸೂತ್ರವಾಗಿ ಮಾಡಿಕೊಂಡಂತೆ ಕಂಡುಬರುತ್ತದೆ. ಹೀಗಾಗಿ ಚುನಾವಣೆ ಸಮಯದಲ್ಲಿ ತಾವು ಎಷ್ಟೊಂದು ಕೆಲಸ ಮಾಡುತ್ತಿದ್ದೇವೆ ಎಂದು ಜನರಿಗೆ ತೋರಿಸಲು ಪ್ರಯತ್ನಿಸುತ್ತಾರೆ, ಅದಕ್ಕೆ ಸೂಕ್ತ ಪ್ರಚಾರ ಸಿಗುವಂತೆ ನೋಡಿಕೊಳ್ಳುತ್ತಾರೆ. ಅದನ್ನು ಜನರು ನಂಬುತ್ತಾರೆ ಎಂದು ಅವರು ಭಾವಿಸುತ್ತಾರೆ.

ನಮ್ಮ ಪ್ರಜಾಪ್ರಭುತ್ವದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷ ಎಂಬ ಎರಡು ಪಕ್ಷಗಳಿಗೆ ಅವಕಾಶವಿದೆ. ಇದು ಪ್ರಜಾಪ್ರಭುತ್ವದ ಸೌಂದರ್ಯ ಎನ್ನಬಹುದು. ಆಡಳಿತ ಮಾಡುವವರು ಸರಿಯಾಗಿ ಕೆಲಸ ಮಾಡದಿದ್ದಾಗ ಅದನ್ನು ವಿರೋಧ ಪಕ್ಷ ಪ್ರಶ್ನಿಸಬೇಕು. ತಪ್ಪನ್ನು ಎತ್ತಿಹಿಡಿದು, ಸರಕಾರದ ಕಿವಿ ಹಿಂಡಿ ಆಡಳಿತದಲ್ಲಿ ಲೋಪವಾಗದಂತೆ ನೋಡಿಕೊಳ್ಳಬೇಕು. ಇದರ ಉದ್ದೇಶ ಜನಪರವಾದ ಆಡಳಿತ ಇರಬೇಕು



> ನಮ್ಮಲ್ಲಿನ ಮತ್ತೊಂದು ವಿಶೇಷ ಆಡಳಿತ ಪಕ್ಷ ಒಂದಾದರೆ ವಿರೋಧಪಕ್ಷವು ನಾಲ್ಕಾರು ಆಗಿರುವುದು. (ಹಾಗೆ ನೋಡಿದರೆ ಕೆಲವು ವರ್ಷಗಳು ಆಡಳಿತ ಪಕ್ಷವೂ ನಾಲ್ಕಾರು ಪಕ್ಷಗಳ ಸಂಗಮವೇ ಆಗಿತ್ತು). ಈ ರೀತಿ ಒಂದಕ್ಕಿಂತ ಹೆಚ್ಚಾದ ವಿರೋಧ ಪಕ್ಷಗಳು ತಾವೇ ಪರಸ್ಪರ ತೆಗೆಳಿಕೊಳ್ಳುತ್ತಾ, ಆಡಳಿತ ಪಕ್ಷ ಏನು ಬೇಕಾದರೂ ಮಾಡಿಕೊಳ್ಳಬಹುದು ಎಂಬ ವಾತಾವರಣ ಸೃಷ್ಟಿಸುತ್ತಿದೆ. ಇದು ಆಡಳಿತ ಪಕ್ಷಕ್ಕೆ ವರದಾನವಾಗುತ್ತಿದೆ. ಇದನ್ನು ಪ್ರಜಾಪ್ರಭುತ್ವದ ಅಣಕ ಎಂದು ಭಾವಿಸುವಂತಾಗುತ್ತಿದೆ.

ಎಂಬುದೇ ಆಗಿದೆ. ಆಳುವ ಸರ್ಕಾರಕ್ಕೆ ವಿರೋಧ ಪಕ್ಷ ಒಂದು ರೀತಿಯ ಅಂಕುಶ ಇದ್ದಹಾಗೆ. ಆಳುವ ಪಕ್ಷ ತಪ್ಪು ಮಾಡುವುದನ್ನು ವಿರೋಧ ಪಕ್ಷ ಎತ್ತಿ ತೋರಿಸುತ್ತದೆ. ಹೆಚ್ಚು ಹೆಚ್ಚು ತಪ್ಪುಗಳಾದಂತೆ ಹಾಗೂ ಅವು ಬೆಳಕಿಗೆ ಬಂದ ಹಾಗೆ ಆಡಳಿತ ಪಕ್ಷದ ವರ್ಚಸ್ಸು ಕಡಿಮೆಯಾಗುತ್ತಾ ಹೋಗುತ್ತದೆ. ಜನರು ಆ ಪಕ್ಷದ ಬಗ್ಗೆ ಅಸಮಾಧಾನ ಹೊಂದುತ್ತಾರೆ. ಇದು ಮುಂದಿನ ಚುನಾವಣೆಯಲ್ಲಿ ತನ್ನ ಪ್ರಭಾವ ಬೀರುತ್ತದೆ. ಆಗ ಆಡಳಿತ ಪಕ್ಷಕ್ಕೆ ಬಹುಮತ ಬರದೇ ಅದು ವಿರೋಧ ಪಕ್ಷವಾಗುತ್ತದೆ. ಹಾಗೆಯೇ ವಿರೋಧ ಪಕ್ಷ ಆಡಳಿತ ಪಕ್ಷವಾಗುತ್ತದೆ. ಜವಾಬ್ದಾರಿ ಬದಲಾಗುತ್ತದೆ. ಜನರು ವಿರೋಧ ಪಕ್ಷವಾಗಿದ್ದುದು ಆಡಳಿತ ಪಕ್ಷದ ತಪ್ಪುಗಳನ್ನು ಎತ್ತಿ ತೋರಿಸಿದ್ದರಿಂದ ಅದಕ್ಕೆ ಅಧಿಕಾರ ನೀಡಿದರೆ ಉತ್ತಮವಾಗಿ ಕೆಲಸ ಮಾಡುತ್ತದೆ ಎಂದು ಭಾವಿಸಿ ಅದನ್ನು ಅಧಿಕಾರಕ್ಕೆ ತರುತ್ತಾರೆ. ಈ ಸಂಪ್ರದಾಯ ಇಂದಿಗೂ ಅನೇಕ ರಾಜ್ಯಗಳಲ್ಲಿ ಕಂಡುಬರುತ್ತದೆ. ಅಲ್ಲಿ ಒಮ್ಮೆ ಒಂದು ಪಕ್ಷ ಅಧಿಕಾರಕ್ಕೆ ಬಂದರೆ ಮುಂದಿನ ಸಲ ಅದು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಬೇಕಾಗುತ್ತದೆ. ಇದನ್ನೂ ಪ್ರಜಾಪ್ರಭುತ್ವದ ವಿಶೇಷ ಎಂದೇ ಕರೆಯಲಾಗುತ್ತದೆ. ಹೀಗೆ ಜವಾಬ್ದಾರಿ ಬದಲಾವಣೆಯಾದ ನಂತರ ಜನರು ಮತ್ತೆ ಆ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಆಗ ವಿರೋಧ ಪಕ್ಷವಾಗುವುದು ಅಧಿಕಾರವಿಲ್ಲದೆ ಚಡಪಡಿಸುತ್ತದೆ. ಏಕೆಂದರೆ ಅಧಿಕಾರವಿಲ್ಲದೆ ಇರಲು ಸಾಧ್ಯವಿಲ್ಲ ಎಂಬ ಭಾವನೆ ಬೆಳೆದಿರುತ್ತದೆ. ನೀರಿನಿಂದ ಹೊರತೆಗೆದ ಮೀನಿನಂತೆ ಅದು ಚಡಪಡಿಸುತ್ತದೆ. ಆದರೆ ವಿರೋಧ ಪಕ್ಷಕ್ಕೂ ಒಂದು ನಿರ್ದಿಷ್ಟವಾದ ಜವಾಬ್ದಾರಿ ಇದೆ ಎಂಬುದನ್ನೇ ಮರೆತುಬಿಡುತ್ತದೆ. ಆಗ ಶುರುವಾಗುವುದೇ ನೀನು ಸರಿಯಿಲ್ಲ, ನಿನ್ನ ಪಕ್ಷ ಸರಿಯಿಲ್ಲ ಎಂಬ ವಾಗ್ವಾದ. ಇದು ಜನರಿಗೆ ಒಂದು ರೀತಿಯ ಮನರಂಜನೆ. ವಿರೋಧ ಪಕ್ಷ ಆಡಳಿತಪಕ್ಷವನ್ನು ನಿಂದಿಸಿದರೆ, ಅದು ಸರಿಯೇ ತಪ್ಪೇ ಎಂಬ ವಿಮರ್ಶೆಗೂ ಹೋಗದೆ ನೀವು ಅಧಿಕಾರದಲ್ಲಿದ್ದಾಗ ಹೀಗೆ ಮಾಡಿರಲಿಲ್ಲವೇ? ಹಾಗೆ ಮಾಡಿರಲಿಲ್ಲವೇ? ನಿಮಗೆ ನಮ್ಮನ್ನು ಟೀಕಿಸುವ ಹಕ್ಕಿಲ್ಲ ಎಂದು ಪರಸ್ಪರ ನಿಂದಿಸಿ ಕಾಲಕಳೆಯುತ್ತವೆ. ಇದನ್ನು ಯಾವ ರೀತಿಯ ಪ್ರಜಾಪ್ರಭುತ್ವ ಎಂದು ಕರೆಯಬೇಕು? ಎಂದು ಹಲವರು ಬೇಸರ ವ್ಯಕ್ತಪಡಿಸುತ್ತಾರೆ.

ಆಡಳಿತ ಹಾಗೂ ವಿರೋಧ ಪಕ್ಷಗಳಿಗೆ ತಮ್ಮದೇ ಆದ ಜವಾಬ್ದಾರಿಗಳಿವೆ. ಎರಡೂ ಸರಿಯಿದ್ದಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ಅರ್ಥವಿರುತ್ತದೆ. ನಮಗೆ ಅಧಿಕಾರವಿಲ್ಲ ಎಂಬುದು ಜನರ ತೀರ್ಪು. ಹಾಗಾಗಿ ನಾವು ವಿರೋಧಪಕ್ಷದಲ್ಲಿದ್ದುಕೊಂಡೇ ಆಡಳಿತ ಪಕ್ಷದ ಕಿವಿಹಿಂಡಿ ಜನರಿಗೆ ಉತ್ತಮ ಆಡಳಿತ ಸಿಗುವಂತೆ ಮಾಡುತ್ತೇವೆ. ಇದು ನಮ್ಮ ಕರ್ತವ್ಯ ಎಂದು ಎಲ್ಲಿಯವರೆಗೆ ವಿರೋಧ ಪಕ್ಷವು ಭಾವಿಸುವುದಿಲ್ಲವೋ ಅಲ್ಲಿಯವರೆಗೆ ಪ್ರಜಾಪ್ರಭುತ್ವ ಒಂದು ರೀತಿ ಅಣಕು ಪ್ರಜಾಪ್ರಭುತ್ವದಂತೆ ಕಂಡುಬರುತ್ತದೆ. ನಮ್ಮಲ್ಲಿನ ಮತ್ತೊಂದು ವಿಶೇಷ ಆಡಳಿತ ಪಕ್ಷ ಒಂದಾದರೆ ವಿರೋಧಪಕ್ಷವು ನಾಲ್ಕಾರು ಆಗಿರುವುದು. (ಹಾಗೆ ನೋಡಿದರೆ ಕೆಲವು ವರ್ಷಗಳು ಆಡಳಿತ ಪಕ್ಷವೂ ನಾಲ್ಕಾರು ಪಕ್ಷಗಳ ಸಂಗಮವೇ ಆಗಿತ್ತು). ಈ ರೀತಿ ಒಂದಕ್ಕಿಂತ ಹೆಚ್ಚಾದ ವಿರೋಧ ಪಕ್ಷಗಳು ತಾವೇ ಪರಸ್ಪರ ತೆಗೆಳಿಕೊಳ್ಳುತ್ತಾ, ಆಡಳಿತ ಪಕ್ಷ ಏನು ಬೇಕಾದರೂ ಮಾಡಿಕೊಳ್ಳಬಹುದು ಎಂಬ ವಾತಾವರಣ ಸೃಷ್ಟಿಸುತ್ತಿದೆ. ಇದು ಆಡಳಿತ ಪಕ್ಷಕ್ಕೆ ವರದಾನವಾಗುತ್ತಿದೆ. ಇದನ್ನು ಪ್ರಜಾಪ್ರಭುತ್ವದ ಅಣಕ ಎಂದು ಭಾವಿಸುವಂತಾಗುತ್ತಿದೆ.

ಜನರು ಇದನ್ನು ಗಮನಿಸುತ್ತಿಲ್ಲ ಎಂದೇನೂ ಅಲ್ಲ. ಆದರೆ ಆಳುವ ಪಕ್ಷ ಹಾಗೂ ನಮ್ಮ ಜನಪ್ರತಿನಿಧಿ ಸರಿಯಾಗಿ ಆಡಳಿತ ಮಾಡದಿದ್ದಾಗ ಅವರನ್ನು ಕೆಳಗಿಳಿಸುವುದು ಹೇಗೆ? ಎಂದು ಜನರಿಗೆ ಗೊತ್ತಾಗುತ್ತಿಲ್ಲ. ಅವರು ತಮ್ಮ ಅಭಿಪ್ರಾಯವನ್ನು ತಿಳಿಸಲು ಮತ್ತೆ ಮುಂದಿನ ಚುನಾವಣೆಯವರೆಗೆ ಕಾಯಬೇಕಾಗುತ್ತದೆ. ಆಗಲೂ ನಿಲ್ಲುವ ಅಭ್ಯರ್ಥಿಗಳಲ್ಲಿ ತನಗೆ ಸಮರ್ಥರು ಎಂದು ಯಾರೂ ಕಾಣಿಸದಿರುವುದರಿಂದ ನಾನು ಮತ ಚಲಾವಣೆಗೇ ಹೋಗುವುದಿಲ್ಲ ಎಂದು ವಿದ್ಯಾವಂತ ಜನ ಭಾವಿಸುವಂತಾಗಿದೆ. ಹಾಗಾಗಿ ಅನೇಕ ಕ್ಷೇತ್ರಗಳಲ್ಲಿ ಮತದಾನದ ಪ್ರಮಾಣ ಶೇಕಡಾ ಐವತ್ತರ ಆಜುಬಾಜಿನಲ್ಲಿ ನಿಲ್ಲುತ್ತಿದೆ. ನಮ್ಮ ಸಾಮಾನ್ಯ ಕಲ್ಪನೆ ಎಂದರೆ ಗೆಲ್ಲುವ ಅಭ್ಯರ್ಥಿಯನ್ನು ಕನಿಷ್ಠ ಶೇಕಡಾ ಐವತ್ತರಷ್ಟಾದರೂ ಜನ ಬೆಂಬಲಿಸಬೇಕು ಎಂಬುದು. ಆದರೆ ಮತದಾನದ ಪ್ರಮಾಣ ಐವತ್ತರ ಆಸುಪಾಸಿನಲ್ಲಿ ನಿಂತಾಗ, ಅದರಲ್ಲಿ ಅರ್ಧದಷ್ಟು ಮತ ಪಡೆದವರು (ಇದೂ ಸಾಧ್ಯವಿಲ್ಲ ಎಂಬಂತಾಗಿದೆ!) ಗೆಲುವು ಸಾಧಿಸಿಬಿಡುತ್ತಾರೆ. ಅಂದರೆ ಕ್ಷೇತ್ರದ ಮತದಾರರಲ್ಲಿ ಕೇವಲ ಶೇಕಡಾ ಇಪ್ಪತ್ತೈದರಷ್ಟು ಜನರ ಬೆಂಬಲ ಪಡೆದವರು ಆಯ್ಕೆಯಾಗಿ ಅವರು ಆ ಶೇಕಡಾ ನೂರು ಜನರ ಪ್ರತಿನಿಧಿ ಎನ್ನಿಸಿಕೊಳ್ಳುತ್ತಾರೆ. ವಿದ್ಯಾವಂತರು ಹೀಗೆ ಯೋಚಿಸಿ ಮತಗಟ್ಟೆಗೆ ಬರದಂತಾಗುತ್ತಿರುವುದನ್ನು ಚುನಾವಣಾ ಆಯೋಗ ಗಮನಿಸಿ, ಹೀಗಾದರೆ ಪ್ರಜಾಪ್ರಭುತ್ವಕ್ಕೆ ಅಪಮಾನವಾದಂತಾಗುತ್ತದೆ. ಎಲ್ಲರೂ ಮತಗಟ್ಟೆಗೆ ಬರಬೇಕು. ನಿಂತಿರುವ ಅಭ್ಯರ್ಥಿಗಳಲ್ಲಿ ನಿಮಗೆ ಯಾರೂ ಇಷ್ಟವಾಗದಿದ್ದರೂ ನೀವು ಮತಗಟ್ಟೆಗೆ ಬಂದು ನನಗೆ ಇವರ್ಯಾರೂ ಇಷ್ಟವಿಲ್ಲ ಎಂಬ ಅಭಿಪ್ರಾಯವನ್ನಾದರೂ ನೀಡಲಿ ಎಂದು ಚುನಾವಣಾ ಆಯೋಗ 2013 ರಲ್ಲಿ ನೋಟಾ (NOTA-None Of The Above) ಎಂಬ ಹೊಸವ್ಯವಸ್ಥೆಯನ್ನು ಜಾರಿಗೆ ತಂದಿತು. ಇದನ್ನು ಬಳಸಿಕೊಂಡು ಅನೇಕ ವಿದ್ಯಾವಂತರು ಮತಗಟ್ಟೆಗೆ ಹೋಗಿ ನೋಟಾ ಗುಂಡಿ ಒತ್ತಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಕೆಲವು ಕಡೆ ಇದು ಗೆದ್ದ ಅಭ್ಯರ್ಥಿ ಪಡೆದ ಮತದಷ್ಟೇ ಆಗಿದೆ ಎಂಬುದನ್ನು ಕಂಡಾಗ ಜನರು ಈ ವ್ಯವಸ್ಥೆಯ ಬಗ್ಗೆ ಎಷ್ಟು ಬೇಸರ ಹೊಂದಿದ್ದಾರೆ ಎಂಬುದು ಗೊತ್ತಾಗುತ್ತದೆ. ಅಲ್ಲದೇ ಇದನ್ನು ಜಾರಿಗೆ ತಂದರೂ ಮತದಾನದ ಶೇಕಡಾ ಪ್ರಮಾಣ ಹೆಚ್ಚಾಗದಿರುವುದೂ ಆತಂಕಕ್ಕೆ ಕಾರಣವಾಗಿದೆ. ಈಗಲೂ ಶೇಕಡಾ ಐವತ್ತರ ಆಜುಬಾಜಿನಲ್ಲಿ ಮತದಾನವಾಗಿ, ಅದರಲ್ಲಿ ಶೇಕಡಾ ಐದರಷ್ಟು ನೋಟಾ ಪರವಾಗಿ ಮತ ಚಲಾವಣೆಯಾಗಿದೆ ಎಂದರೆ ಶೇಕಡಾ ನಲವತ್ತೈದು ಜನರ ಮತದಲ್ಲಿ ಅರ್ಧದಷ್ಟು ಮತಪಡೆದವರು ಜಯಶಾಲಿಯಾಗುತ್ತಿದ್ದಾರೆ, ಎಂದರೆ ಅವರ ಕುರಿತು ಶೇಕಡಾ 20–25 ರಷ್ಟು ಜನ ಮಾತ್ರ ಒಲವು ತೋರಿಸುತ್ತಿದ್ದಾರೆ ಎಂಬಂತೆ ಕಂಡುಬರುತ್ತದೆ. ಇದೂ ಪ್ರಜಾಪ್ರಭುತ್ವದಲ್ಲಿ ಜನರು ನಂಬಿಕೆ ಕಳೆದುಕೊಳ್ಳುತ್ತಿದ್ದಾರೇನೋ? ಎಂಬಂತೆ ಕಂಡುಬರುತ್ತದೆ.

ಪ್ರಜಾಪ್ರಭುತ್ವ ಮತ್ತಷ್ಟು ಸಮರ್ಥವಾಗಿ ಜಾರಿಯಾಗುವಂತೆ ಕ್ರಮವಾಗಬೇಕಾಗಿದೆ. ಜನರು ಮತ್ತಷ್ಟು ಈ ಬಗ್ಗೆ ನಂಬಿಕೆ ಕಳೆದುಕೊಳ್ಳುವ ಮುಂಚೆಯೇ ಜನರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಉಳಿಸುವಂತಹ, ಬೆಳೆಸುವಂತಹ ಕೆಲಸವಾಗಬೇಕು. ಏಕೆಂದರೆ ಪ್ರಜಾಪ್ರಭುತ್ವ ಇಡೀ ವಿಶ್ವದಲ್ಲೇ ಉತ್ತಮ ಆಡಳಿತ ವ್ಯವಸ್ಥೆ ಎಂದು ಬಿಂಬಿತವಾಗಿದೆ. ಆದ್ದರಿಂದ ಆ ನಂಬಿಕೆ ಉಳಿಯುವಂತಹ ವ್ಯವಸ್ಥೆಯಾಗಬೇಕು. ಜನರೂ ತಮ್ಮ ಜವಾಬ್ದಾರಿ ಅರಿಯಬೇಕು. ರಾಜಕಾರಿಣಿಗಳನ್ನು ಕಂಡರೆ ಜನರೂ ಬೇಸರಪಟ್ಟುಕೊಳ್ಳದಂತೆ ರಾಜಕಾರಿಣಿಗಳೂ ಎಚ್ಚೆತ್ತುಕೊಳ್ಳಬೇಕು.

ಪಕ್ಷಿಗಳಿಗೆ ಆಹಾರ ಕಲ್ಪಿಸಿ ಯಶ್ ಹುಟ್ಟುಹಬ್ಬ ಆಚರಣೆ



ಮೈಸೂರು, ಜ.8(ಎಸ್‌ಬಿಡಿ)– ನಟ ಯಶ್ ಹುಟ್ಟುಹಬ್ಬವನ್ನು ಮೈಸೂರಿನ ಅಭಿಮಾನಿಗಳು ವಿಶಿಷ್ಟ ಹಾಗೂ ಅರ್ಥಪೂರ್ಣವಾಗಿ ಆಚರಿಸಿದರು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಎದುರು ಧಾನ್ಯಗಳಿಂದ ಯಶ್ ಭಾವಚಿತ್ರವನ್ನು ರಚಿಸುವ ಮೂಲಕ ಪಕ್ಷಿಗಳಿಗೆ ಆಹಾರ ಕಲ್ಪಿಸಿ ವಿಶಿಷ್ಟ ರೀತಿಯಲ್ಲಿ ನೆಚ್ಚಿನ ನಟನ ಹುಟ್ಟುಹಬ್ಬ ಸಂಭ್ರಮಿಸಿದರು.

ಹೆಲ್ಪಿಂಗ್ ಹ್ಯಾಂಡ್ಸ್ ಸೇರಿದಂತೆ ಕೆಲ ಸಂಸ್ಥೆಗಳ ವತಿಯಿಂದ ಇಲ್ಲಿ ನಿತ್ಯ ಪಕ್ಷಿಗಳಿಗೆ ಧಾನ್ಯ ಒದಗಿಸಲಾಗುತ್ತದೆ. ಅಲ್ಲದೆ ಹುಟ್ಟುಹಬ್ಬ ಇನ್ನಿತರ ಕಾರ್ಯಕ್ರಮ ನೆಪದಲ್ಲಿ ಹಲವರು ಕೈಲಾದಷ್ಟು ಧಾನ್ಯವನ್ನು ನೀಡುವ ಪರಿಪಾಠವಿದೆ. ಆದರೆ ಮೈಸೂರಿನವರೇ ಆದ ಪ್ಯಾನ್ ಇಂಡಿಯಾ ಸ್ಟಾರ್ ಯಶ್ ಅವರ 37ನೇ ಹುಟ್ಟುಹಬ್ಬದಂದು ಅವರ ಭಾವಚಿತ್ರವನ್ನು ಧಾನ್ಯಗಳಲ್ಲೇ ಪಡಿಮೂಡಿಸಿದ್ದು ಆಕರ್ಷಕವಾಗಿತ್ತು.

ಅಖಿಲ ಕರ್ನಾಟಕ ರಾಕಿಂಗ್ ಸ್ಟಾರ್ ಯಶ್ ಅಭಿಮಾನಿ ಬಳಗದ ಮೈಸೂರು ಜಿಲ್ಲಾಧ್ಯಕ್ಷ ಮನು ಶೈವ್ ನೇತೃತ್ವದಲ್ಲಿ ನಡೆದ ಈ ಕಾರ್ಯದಲ್ಲಿ ಬಿಜೆಪಿ ಕೆ.ಆರ್.ಉಪಾಧ್ಯಕ್ಷ ಸಂತೋಷ್ ಶಂಭು, ಸಾಗರ್, ಸಂಜುಬಾಬಾ, ಚಿನ್ಮಯ್ ವಿಶ್ವಸೇನ, ರವಿಚಂದ್ರನ್, ಶಶಾಂಕ್, ಆಕಾಶ್ ಸೇರಿದಂತೆ ಯಶ್ ಅಭಿಮಾನಿಗಳು ಭಾಗಿಯಾಗಿದ್ದರು.

ಅಪರಿಚಿತ ಮಹಿಳೆ ಶವ ಪತ್ತೆ

ಮೈಸೂರು, ಜ.8– ಮದ್ದೂರು – ಹನಕೆರೆ ರೈಲು ನಿಲ್ದಾಣಗಳ ನಡುವೆ ರೈಲ್ವೆ ಸುಮಾರು 40 ವರ್ಷದ ಮಹಿಳೆ ಮೃತಪಟ್ಟಿರುತ್ತಾರೆ ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಮೃತ ಮಹಿಳೆಯ ಚಹರೆ: 40 ವರ್ಷದವರಾಗಿದ್ದು, 5.3 ಅಡಿ ಎತ್ತರ ಕಪ್ಪು ಮೈ ಬಣ್ಣ, ದೃಢಕಾಯ ಶರೀರ ದುಂಡು ಮುಖ, ಕಪ್ಪು ಕೂದಲು ಬಿಟ್ಟಿರುತ್ತಾರೆ. ಸಿಮೆಂಟ್ ಬಣ್ಣದ ಜಿಪ್ ಮಾದರಿಯ ಶರ್ಟ್ ಹಾಗೂ ಕೆಂಪು ಬಣ್ಣದ ಚೂಡಿದಾರ್ ಪ್ಯಾಂಟ್ ಧರಿಸಿರುತ್ತಾರೆ.

ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0821–2516579 ಅನ್ನು ಸಂಪರ್ಕಿಸಿ ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಜ.23, ಸರ್ವೋದಯ ಕರ್ನಾಟಕ ಪಕ್ಷಕ್ಕೆ ಮರು ಚಾಲನೆ

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷವಾಗಿ ಆಯ್ದ ಕ್ಷೇತ್ರಗಳಲ್ಲಿ ಸ್ಪರ್ಧೆ

ಮೈಸೂರು, ಜ.8(ಪಿಎಂ)– ಸ್ವರಾಜ್ ಇಂಡಿಯಾ ಪಕ್ಷದೊಂದಿಗೆ ವಿಲೀನಗೊಂಡಿದ್ದ ಸರ್ವೋದಯ ಕರ್ನಾಟಕ ಪಕ್ಷ ಇದೀಗ ಸ್ವಾತಂತ್ರ್ಯವಾಗಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿಯಲು ಸಜ್ಜಾಗಿದೆ. ವಿಲೀನ ರದ್ದುಗೊಳಿಸಿದ್ದು, ಸ್ವತಂತ್ರ ಪ್ರಾದೇಶಿಕ ಪಕ್ಷವಾಗಿ ಜ.23ರಂದು ಮರು ಚಾಲನೆ ಪಡೆಯಲಿದೆ.

2017ರಲ್ಲಿ ಎರಡೂ ಪಕ್ಷಗಳನ್ನು ವಿಲೀನಗೊಳಿಸಲಾಗಿತ್ತು ಇದೀಗ ಸ್ವರಾಜ್ ಇಂಡಿಯಾ ಪಕ್ಷವು 2024ರವರೆಗೆ ಚುನಾವಣಾ ರಾಜಕಾರಣದಿಂದ ದೂರವಿರಲು ನಿರ್ಧರಿಸಿರುವ ಕಾರಣ, ಪ್ರಾದೇಶಿಕ ಪಕ್ಷವಾಗಿ ಚುನಾವಣಾ ರಾಜಕಾರಣದಲ್ಲಿ ಸಕ್ರಿಯವಾಗಿರಲು ಸರ್ವೋದಯ ಕರ್ನಾಟಕ ಪಕ್ಷಕ್ಕೆ ಮರು ಚಾಲನೆ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ 2022ರ ಡಿ.29ರಂದು ಮಂಡ್ಯದ ಕರ್ನಾಟಕ ಭವನದಲ್ಲಿ ನಡೆದ ಪಕ್ಷದ ಸಭೆಯಲ್ಲಿ ರಾಜ್ಯ ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಅದರಂತೆ ಅಧ್ಯಕ್ಷರಾಗಿ ಚಮರಸ ಮಾಲಿ ಪಾಟೀಲ್, ಪ್ರಧಾನ ಕಾರ್ಯದರ್ಶಿಯಾಗಿ ಪ್ರಸನ್ನ ಎನ್.ಗೌಡ, ಕಾರ್ಯಾಧ್ಯಕ್ಷರಾಗಿ ಅಮಜದ್ ಪಾಷ, ಖಜಾಂಚಿಯಾಗಿ ಶಿವರಾಜ್ ರೇವಣ್ಣ ಸಿದ್ದಯ್ಯ, ಉಪಾಧ್ಯಕ್ಷರಾಗಿ ಯಾದವರೆಡ್ಡಿ, ವಕ್ತಾರರಾಗಿ ಜೆ.ಎಂ.ವೀರಸಂಗಯ್ಯ ಮತ್ತು ಎನ್.ಪುನೀತ್ ಅವರನ್ನು ಆಯ್ಕೆ ಮಾಡಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸರ್ವೋದಯ ಕರ್ನಾಟಕ ಪಕ್ಷದ ನೂತನ ಅಧ್ಯಕ್ಷ ಚಾಮರಸ ಮಾಲಿ ಪಾಟೀಲ್, ಪ್ರಾದೇಶಿಕ ಪಕ್ಷವಾಗಿ ಉಳಿಯಲು ತೀರ್ಮಾನಿಸಿ ಪುನರ್ ಸಂಘಟಿಸಲಾಗುತ್ತಿದೆ. ಇದೇ 23ರಂದು ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಮರು ಚಾಲನೆ ಸಮಾರಂಭ ಆಯೋಜಿಸಲಾಗಿದೆ ಎಂದು ತಿಳಿಸಿದರು.



ಚಾಲನಾ ಸಮಾರಂಭ ಪಕ್ಷದ ರಾಜಕೀಯ ಸಮಾವೇಶವೂ ಆಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಪಕ್ಷದ ಆಯ್ದ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಸಂಘ–ಸಂಸ್ಥೆಗಳ ಗಣ್ಯರು, ಸಮಾಜಮುಖಿ ವ್ಯಕ್ತಿಗಳನ್ನು ಆಹ್ವಾನಿಸಲಾಗುತ್ತಿದೆ. ಈಗಾಗಲೇ 15 ಜಿಲ್ಲೆಗಳಲ್ಲಿ ಪಕ್ಷದ ಜಿಲ್ಲಾ ಘಟಕಗಳಿದ್ದು, ಎಲ್ಲಾ ಜಿಲ್ಲೆ ಮತ್ತು ತಾಲೂಕುಗಳಲ್ಲಿ ಪಕ್ಷದ ಘಟಕಗಳನ್ನು ಜ.20ರೊಳಗೆ ರಚಿಸಿ, ಪದಾಧಿಕಾರಿಗಳನ್ನು ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಆಯ್ದ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಸಲಾಗುವುದು. ಮರು ಚಾಲನೆ ದಿನದಂದು ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಲಾಗುವುದು. ಜೊತೆಗೆ ಮುಂಬರುವ ಜಿಪಂ ಮತ್ತು ತಾಪಂ ಸೇರಿದಂತೆ ಇನ್ನಿತರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಾಜ್ಯಾದ್ಯಂತ ಸ್ಪರ್ಧಿಸುವ ಉದ್ದೇಶ ಹೊಂದಲಾಗಿದೆ. ಪಕ್ಷದ ಕೋರ್ ಕಮಿಟಿಯಲ್ಲಿ ಹಿರಿಯ ಸಾಹಿತಿ ದೇವನೂರ ಮಹಾದೇವ ಹಾಗೂ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಇದ್ದಾರೆ ಎಂದರು.

> ಸ್ವರಾಜ್ ಇಂಡಿಯಾ ಮತ್ತು ಸರ್ವೋದಯ ಕರ್ನಾಟಕ ಪಕ್ಷಗಳು ಯಾವುದೇ ಮನಸ್ತಾಪದಿಂದ ಬೇರಾಗುತ್ತಿಲ್ಲ. ಎರಡೂ ಪಕ್ಷಗಳ ಉತ್ತಮ ಬಾಂಧವ್ಯ ಮುಂದುವರೆಯಲಿದೆ. 2024ರವರೆಗೆ ಚುನಾವಣಾ ರಾಜಕಾರಣದಿಂದ ದೂರು ಉಳಿಯಲು ಸ್ವರಾಜ್ ಇಂಡಿಯಾ ನಿರ್ಧರಿಸಿದೆ. ಎರಡೂ ಪಕ್ಷಗಳ ವರಿಷ್ಠರು ಸಮಾಲೋಚಿಸಿ ಉತ್ತಮ ಬಾಂಧವ್ಯ ಉಳಿಸಿಕೊಂಡೇ ವಿಲೀನ ರದ್ದುಗೊಳಿಸಿಕೊಳ್ಳಲಾಗಿದೆ. ಕೋಮುವಾದದ ಶಕ್ತಿಗಳನ್ನು ಹಿಮ್ಮೆಟ್ಟಿಸುವ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಕಾರಣಕ್ಕೆ ಸ್ವರಾಜ್ ಇಂಡಿಯಾ ಸದ್ಯ ಚುನಾವಣಾ ರಾಜಕಾರಣದಿಂದ ದೂರು ಉಳಿಯಲಿದೆ.
>
> – ಬಡಗಲಪುರ ನಾಗೇಂದ್ರ, ರೈತ ಸಂಘದ ರಾಜ್ಯಾಧ್ಯಕ್ಷ

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ, ಕಾರ್ಯಾಧ್ಯಕ್ಷ ಅಮಜದ್ ಪಾಷ, ಖಜಾಂಚಿ ಶಿವರಾಜ್ ರೇವಣ್ಣ ಸಿದ್ದಯ್ಯ, ವಕ್ತಾರ ಎನ್.ಪುನೀತ್, ಮುಖಂಡರಾದ ಮಧುಚಂದನ್, ಪಿ.ಗೋಪಾಲ್, ರವಿ ಗೋಷ್ಠಿಯಲ್ಲಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸ್ಯಾಂಟ್ರೋ ರವಿ ಪತ್ತೆಗೆ ಶೋಧ

ಪ್ರಕರಣ ಸಂಬಂಧ ಆತನ ಓರ್ವ ಸಹಚರ ವಶಕ್ಕೆ



ಸ್ಯಾಂಟ್ರೋ ರವಿ

ಮೈಸೂರು, ಜ.8(ಆರ್‌ಕೆ)–ಅತ್ಯಾಚಾರ ಮತ್ತು ಪರಿಶಿಷ್ಟ ಜಾತಿ ಮಹಿಳೆ ಮೇಲೆ ದೌರ್ಜನ್ಯ ಆರೋಪದಡಿ ಪ್ರಕರಣ ದಾಖಲಾಗುತ್ತಿದ್ದಂತೆಯೇ ತಲೆ ಮರೆಸಿಕೊಂಡಿರುವ ವೇಶ್ಯಾವಾಟಿಕೆ ದಂಧೆ ಕಿಂಗ್‌ಪಿನ್ ಸ್ಯಾಂಟ್ರೋ ರವಿ ಪತ್ತೆಗಾಗಿ ವಿಜಯನಗರ ಠಾಣೆ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ. ಸ್ಯಾಂಟ್ರೋ ರವಿಯ ಈ ದಂಧೆ ಸಂಬಂಧ ರಾಜ್ಯದಲ್ಲಿ ತೀವ್ರ ಚರ್ಚೆ, ಆರೋಪ–ಪ್ರತ್ಯಾರೋಪಗಳು ಬಿರುಸುಗೊಳ್ಳುತ್ತಿದ್ದಂತೆಯೇ ಆತನ ಪತ್ತೆಗಾಗಿ ಬೆನ್ನತ್ತಿರುವ ಪೊಲೀಸರು ಸುಳಿವಿನ ಜಾಡು ಹಿಡಿದು ತೀವ್ರ ಶೋಧ ನಡೆಸುತ್ತಿದ್ದಾರೆ. ಆತನ ಮನೆ, ಸಂಪರ್ಕ ಹೊಂದಿದ್ದನೆನ್ನಲಾದ ಗೆಳೆಯರು, ಸಹಚರರ ಮನೆಗಳ ಮೇಲೂ ಪೊಲೀಸರು ದಾಳಿ ನಡೆಸುತ್ತಿದ್ದಾರೆ.

ಶನಿವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಯಾಂಟ್ರೋ ರವಿ ಬಂಧನ ಮಾಡುವಂತೆ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಸೂಚಿಸಿದ್ದೇನೆ ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಹೇಳಿಕೆ ನೀಡುತ್ತಿದ್ದಂತೆಯೇ ವಿಜಯನಗರ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಪ್ರಕರಣ ಸಂಬಂಧ ಇಂದು ಸ್ಯಾಂಟ್ರೋ ರವಿಯ ಸಹಚರನೋರ್ವನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಲಾಗಿದೆ. ಆತನಿಂದ ಅಗತ್ಯ ಮಾಹಿತಿ ಕಲೆ ಹಾಕುತ್ತಿರುವ ಪೊಲೀಸರು, ಪ್ರಮುಖ ಸುಳಿವು ಪತ್ತೆಗೆ ಪ್ರಯತ್ನಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿಜಯನಗರ 4ನೇ ಹಂತದ ಬೂತ್(ಸಂಖ್ಯೆ 116)ಅಧ್ಯಕ್ಷ ಸೇರಿದಂತೆ ಹಲವು ಬಿಜೆಪಿ ಕಾರ್ಯಕರ್ತರ ಮನೆ ಮೇಲೆ ಪಕ್ಷದ ಬಾವುಟ ಹಾರಿಸುವ ಮೂಲಕ ಬೂತ್ ವಿಜಯ ಅಭಿಯಾನ ನಡೆಸಲಾಯಿತು. ಬಿಜೆಪಿ ಚಾಮುಂಡೇಶ್ವರಿ ಮಹಾಶಕ್ತಿ ಕ್ಷೇತ್ರದ ಉಸ್ತುವಾರಿ ಜಗದೀಶ್‌ಗೌಡ, ಅಧ್ಯಕ್ಷ ವೆಂಕಟೇಶ್‌ರಾವ್, ಪ್ರಮುಖ್ ಹಿನಕಲ್ ಶಿವು, ಅಭಿಯಾನದ ಸಹ ಪ್ರಮುಖ್ ಹಿನಕಲ್ ಶ್ರೀನಿವಾಸ್, ಬೂತ್ ಅಧ್ಯಕ್ಷೆ ಗೀತಾ ವೇಲುಮಣಿ, ಕಾರ್ಯದರ್ಶಿ ಮಣಿ, ಮೀನಾ ಚೇತನ್ ಮತ್ತಿತರರಿದ್ದರು.

ನವೋದಯ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನ

ಮೈಸೂರು,ಜ8–ಜವಾಹರ ನವೋದಯ ವಿದ್ಯಾಲಯದಿಂದ 2023–24ನೇ ಶೈಕ್ಷಣಿಕ ವರ್ಷಕ್ಕಾಗಿ 6ನೇ ತರಗತಿ ಪ್ರವೇಶ ಪರೀಕ್ಷೆಗೆ ಅರ್ಜಿಗಳನ್ನು ಅಹ್ವಾನಿಸಲಾಗಿದೆ. 2022–23ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ಸರ್ಕಾರಿ/ಸರ್ಕಾರಿ ಮಾನ್ಯತೆ/ಸರ್ಕಾರದ ಅನುಮತಿ ಪಡೆದಿರುವ ಶಾಲೆಯಲ್ಲಿ ಮತ್ತು ಮೈಸೂರು ಜಿಲ್ಲೆಯಲ್ಲಿ ಓದುತ್ತಿರಬೇಕು. 2011ರ ಮೇ 1ರಿಂದ 2013ರ ಏಪ್ರಿಲ್ 30ರೊಳಗೆ ಜನಿಸಿರಬೇಕು. ಅರ್ಜಿಯನ್ನು ಆನ್‌ಲೈನ್ ಮೂಲಕ www.navodaya.gov.in ಅಥವಾ https://navodaya.gov.in) ಸಲ್ಲಿಸಬಹುದಾಗಿದೆ. nvs/nvs-school/MYSURU/en/contact-us/JNV ನಲ್ಲಿ ಅರ್ಜಿಗಳನ್ನು ನೀಡಲಾಗಿದೆ. ಅರ್ಜಿ ಸಲ್ಲಿಸಲು ಜ.31 ಕೊನೆಯ ದಿನಾಂಕ. ಮಾಹಿತಿಗಾಗಿ ದೂ.ಸಂ: 0821–2970040 ಸಂಪರ್ಕಿಸಬಹುದು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
Cashier, Helper (Boy/Girl) & Air Boy Required for Jayaram Fuel Station (Near Columbia Asia Hospital, Ring Road, Mysore)
9916213103
9742938142

ಬೇಕಾಗಿದ್ದಾರೆ
* ವೈಟರ್ಸ್ * ಕ್ಲೀನರ್ಸ್ * ನಾರ್ತ್ ಇಂಡಿಯನ್ ಕುಕ್ * ಸೂಪರ್‌ವೈಸರ್
ಮೈಸೂರಿನ ಪ್ರತಿಷ್ಠಿತ ರೆಸ್ಟೋರೆಂಟ್‌ಗೆ ಬೇಕಾಗಿದ್ದಾರೆ
Mob: 7019883387

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ರೈಲಿನಲ್ಲಿ ಕಾಶಿ ಯಾತ್ರೆ
10/04/2023. ರಿಂದ ರೈಲಿನಲ್ಲಿ 13 ದಿನಗಳ ಪ್ರವಾಸ. ಸ್ಥಳಗಳು ; ದೆಹಲಿ, ಆಗ್ರಾ, ಮಥುರಾ ಬೃಂದಾವನ, ಕಾಶಿ, ಸಾರನಾಥ್, ಅಯೋಧ್ಯಾ, ಅಲಹಾಬಾದ್, ಸೀತಮಡಿ, ಗಯಾ, ಬುದ್ಧಗಯಾ, ಇತ್ಯಾದಿ. ಊಟ, ಕೊಠಡಿ, ರೈಲು ಟಿಕೆಟ್, ಬಸ್ ಎಲ್ಲಾ ಸೇರಿರುತ್ತದೆ. ಒಂದು ಸೀಟ್‌ಗೆ 17000/–, ಕರ್ನಾಟಕ ಸರ್ಕಾರದಿಂದ ಕಾಶಿ ಯಾತ್ರೆಗೆ 5000 ರೂ ಅನುದಾನ ದೊರೆಯುತ್ತದೆ. ಸಂಪರ್ಕಿಸಿ: ಮಾರ್ವೆಲ್ ಟೂರ್ಸ್ ಅಂಡ್ ಟ್ರಾವೆಲ್ಸ್, ನಜರ್‌ಬಾದ್, ಮೈಸೂರು.
9342118682 / 9449128682

ಉಚಿತ ಟ್ಯೂಷನ್
5 ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಟ್ಯೂಷನ್ ಹೇಳಿಕೊಡಲಾಗುವುದು. ಸಮಯ: ಸಂಜೆ 5.30 ರಿಂದ 8.00. ಎಕ್ಸಲೆಂಟ್ ಕೋಚಿಂಗ್ ಸೆಂಟರ್ ಗೊಬ್ಬಳಿ ಮರ ಸರ್ಕಲ್, ಜೆ.ಪಿ. ನಗರ
Mob: 9741290326



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

TNI TECHNOLOGIES
871, 1ST FLOOR, 4TH CROSS, BANK COLONY ROAD, BOGADI, MYSORE-570026.
TRAINING + JOB
- OFFICE ESSENTIALS
- EXCEL FOR WORKING PROFESSIONALS
- GST SKILLS
- ACCOUNTING WITH TALLY

TRAINING + JOB
8951208347

SITES FOR SALE
30x40 Sites, Bank Loan upto 80%, Near Gurur Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road
8660105902

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

JOB VACANCY
(Company appointment) Not Security Agency Security Guards, Supervisors, Security Officers, Place : Mysore, Nanjangud, Gundalpet, HD Kote, Hunsur, K R Nagar, Periyapatna, Madikari, Salary : 16k to 25 k, 26 days, PF ESI, Date: 5th & 6th Jan, 2023. Place of Interview- Siddappa Square, Vani Vilas, Double Road, N R Mohalla, Lakshmipuram, Mysuru, Karnataka - 570004.
9986483251 / 8618291971
9880934349

INVITATION
JOB OPPORTUNITY MEET
Exclusive for any Sales & Financial Experience Retired, Govt./Pvt./VRS/Ex-Bankers / Teachers / Housewives Invites you to start your job and make the most out your skills also gives you & opportunity to earn salary, PF, ESI & Incentives. For Regestration & Venue details Call us.
8792182784 / 9845799898

ಸುವರ್ಣ ಯಾತ್ರ
ಗುಜರಾತ್ ಪ್ರವಾಸ 8 ದಿನಗಳು 30–01–2023. ಪುರಿ ಜಗನ್ನಾಥ ಪ್ರವಾಸ 4 ದಿನಗಳು 18–01–2023. ಕಾಶಿ ಪ್ರವಾಸ: 7 ದಿನಗಳು 24–2–2023. ರಾಜಸ್ಥಾನ ಪ್ರವಾಸ 9 ದಿನಗಳು 20–02–2023. ನೇಪಾಳ, ಮುಕ್ತಿನಾಥ ಪ್ರವಾಸ 7–3–2023, 9 ದಿನಗಳು.
9008381022, 9019462508

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಬೇಕಾಗಿದ್ದಾರೆ
ಶ್ರೀ ಶ್ರೀ ಶ್ರೀ ವೀರಾಂಜನೇಯ ಗೋಲ್ಡ್ ಕಂಪನಿ ನಮ್ಮ ಗೋಲ್ಡ್ ಕಂಪನಿಗೆ (ಟೆಲಿಕಾಲರ್ಸ್) ಹುಡುಗಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಇನ್ಸೆಂಟೀವ್. ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟವರಿಗೆ ಆದ್ಯತೆ. ಕುವೆಂಪುನಗರ ಡಿಪೋ ಹತ್ತಿರ, ಮೈಸೂರು, ಹಳೇ ಪೋಸ್ಟ್ ಆಫೀಸ್.
8861732326, 8277512141

LAYOUT MARKETING
We are one of pioneer in marketing, having experience of selling morethan 1 k plots in mysore & Bang. Feel free 2 Call us if ur in need
9606697999

ಬೋಳು ತಲೆಯ ಸಮಸ್ಯೆಯೇ?

ಕಿಮೋಥೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
ಶ್ರೀ ರಾಯಲ್ ವಾರಿಯರ್ ಬೇಕರಿಗೆ ಅನುಭವವುಳ್ಳ ಸ್ಟೋರ್ ಕೀಪರ್ ಹಾಗೂ ಅಕೌಂಟೆಂಟ್ ಮತ್ತು ಮ್ಯಾನೇಜರ್ ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ. ವಯಸ್ಸು 45 ರ ಒಳಗಿರಬೇಕು. ಉತ್ತಮವಾದ ಸಂಬಳ ದೊರಕುತ್ತದೆ. ವಿಳಾಸ: ಶ್ರೀ ರಾಯಲ್ ವಾರಿಯರ್ ಬೇಕರಿ ಮತ್ತು ಫುಡ್ಸ್, #668, ಜೆಎಫ್, ಜೆ ಸಿ ಎಸ್ ಟಿ 2ನೇ ಸ್ಟೇಜ್, ಎಂ ಬ್ಲಾಕ್, ಕುವೆಂಪುನಗರ, ನೃಪತುಂಗ ರಸ್ತೆ, ಮೈಸೂರು – 570023. ದೂರವಾಣಿ ಸಂಖ್ಯೆ.
9019876412 / 8431458760

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura & Gokulam
Call: 7829937469, 9901803394
ONLINE TRAINING AVAILABLE

Wanted Full / Part Time
COMPUTER FACULTY & COUNSELLER
Basic computer, Tally ERP 9 & DTP, C, C++, JAVA, Python & Spoken English.
0821-4243373, 09036676728
Email: vctcmysuru@gmail.com

ಕೆಲಸಕ್ಕೆ ಬೇಕಾಗಿದ್ದಾರೆ
ಮೇಟಗಳ್ಳಿ CIPET ಕಾಲೇಜ್ ಹತ್ತಿರವಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 45 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 14,000/– ಕೂಡಲೇ ಸಂಪರ್ಕಿಸಿ:
ಚಾಮುಂಡೇಶ್ವರಿ ಎಂಟರ್‌ಪ್ರೈಸಸ್
ಲೋಕೇಶ್:
8722844236

ಪಾರ್ಟ್ ಟೈಮ್ / ಫುಲ್ ಟೈಮ್ ಕೆಲಸ
ಪ್ರತಿದಿನ 200 ರಿಂದ 600 ವರೆಗೆ ಪಾರ್ಟ್ / ಫುಲ್ ಟೈಮ್ ಕೆಲಸ ಮಾಡಿ ಸಂಪಾದಿಸುವ ಅವಕಾಶ. ಆನ್‌ಲೈನ್ A/c ಓಪನ್ Airtel QR ಕೋಡ್, ಆಕ್ಟಿವೇಷನ್ ಹಾಗೂ Flip kart / Uber ಡೆಲಿವರಿ ಜಾಬ್‌ಗಳು. ಹೆಚ್ಚಿನ ಮಾಹಿತಿಗೆ ಕಚೇರಿಗೆ ಭೇಟಿ ನೀಡಿ.
8861147981

ಚಾರ್ಧಾಮ್ ಯಾತ್ರೆ
28/04/2023. ರಿಂದ ವಿಮಾನದಲ್ಲಿ 12 ದಿನಗಳ ಪ್ರವಾಸ ಸ್ಥಳಗಳು ; ದೆಹಲಿ, ಹರಿದ್ವಾರ, ಋಷಿಕೇಶ ಯಮುನೋತ್ರಿ ಗಂಗೋತ್ರಿ, ಉತ್ತರಕಾಶಿ, ರುದ್ರಪ್ರಯಾಗ, ಗೌರಿಕುಂಡ, ಕೇದಾರನಾಥ ಬದರಿನಾಥ, ಇತ್ಯಾದಿ, ಊಟ, ಕೊಠಡಿ, ವಿಮಾನ ಟಿಕೆಟ್, ಬಸ್ ಎಲ್ಲಾ ಸೇರಿರುತ್ತದೆ. ಒಂದು ಸೀಟ್‌ಗೆ 44,000/–, ಕರ್ನಾಟಕ ಸರ್ಕಾರದಿಂದ ಚಾರ್ಧಾಮ್ ಯಾತ್ರೆಗೆ 20000 ರೂ ಅನುದಾನ ದೊರೆಯುತ್ತದೆ. ಸಂಪರ್ಕಿಸಿ: ಮಾರ್ವೆಲ್ ಟೂರ್ಸ್ ಅಂಡ್ ಟ್ರಾವೆಲ್, ನಜರ್ ಬಾದ್, ಮೈಸೂರು
9342118682 / 9449128682

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಟಿಎ, 15,200–86000.
9740733021 / 9535028750

CHANGE OF NAME
I, Sujatha, W/o B.S. Arun Kumar, residing at No. #2906/1, Apt. No. A2, Potamac Hill, Gokulam Main Road, Vani Vilasa Mohalla, Mysuru-570 002, have changed my name from Sujatha to Sujatha Arun Bellur on my own free will in front of Notary S. Kamala on 4-01-2023.
Sd/- Sujatha Arun Bellur

ATTENTION
ಕುವೆಂಪುನಗರದಲ್ಲಿ ಬೋಟಿಕ್ ಒಂದು takeover ಗೆ ಇದೆ. Goodwill ಇದೆ. ಆಸಕ್ತಿ ಇರುವವರು ಕೆಳಕಂಡ ನಂಬರ್‌ಗೆ ಸಂಪರ್ಕಿಸಿ:
Mob: 8217395793

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಜಮೀನು ಮಾರಾಟಕ್ಕಿದೆ
2 ಎಕರೆ ಖುಷ್ಕಿ ಜಮೀನು, ಗರ್ಗೇಶ್ವರಿ, ಟಿ.ನರಸೀಪುರದ ಹತ್ತಿರ, 30 ತೆಂಗಿನ ಮರ, 1 ಬೋರ್‌ವೆಲ್ ಇದೆ. ಸ್ವಯಾರ್ಜಿತ ಆಸ್ತಿ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ:
9066102267

ಬಸವಮಾರ್ಗ ಕ್ಯಾಟರಿಂಗ್ ಸರ್ವಿಸ್
ಉತ್ತರ ಮತ್ತು ದಕ್ಷಿಣ ಭಾರತ ಶೈಲಿಯಲ್ಲಿ ಅಡುಗೆ ಮಾಡಿ ಅನುಭವವುಳ್ಳ ಅಡುಗೆ ಭಟ್ಟರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಮುಂಗಡ ಹಣದ ಸೌಲಭ್ಯವಿರುತ್ತದೆ.
8553111999
8803344999

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ, ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ ಪ್ರತಿದಿನ ವಧು ವರರ ನೇರ ಸಂದರ್ಶನ ಇರುತ್ತದೆ
ಡಾ. ಗುರೂಜಿ
9448229184
7899625268

ಬೇಕಾಗಿದ್ದಾರೆ
ಮಡಿಕೇರಿ ಆರ್ಯುಡ್ ನಗರದಲ್ಲಿ ನೆಲೆಸಿರುವ ಕುಟುಂಬ ಒಂದಕ್ಕೆ ಮನೆ ಕೆಲಸ ಮಾಡಲು ಮಹಿಳೆ ಅಥವಾ ಯುವತಿ ಬೇಕಾಗಿದ್ದಾರೆ. ಉತ್ತಮ ವೇತನ, ವಸತಿ ಹಾಗೂ ಊಟದ ವ್ಯವಸ್ಥೆ ಇದೆ. ಸಂಪರ್ಕಿಸಿ:
9900707733

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈಲಿ.,
#2921/ಎ, ಸರಸ್ವತಿಪುರಂ, ಮೈಸೂರು. ನಾವು ರಿವಿನ್ಯೂ ಮನೆಗಳಿಗೆ ಮಾರ್ಟಗೇಜ್ ಲೋನ್ ಮಾಡಿಕೊಡುತ್ತೇವೆ. ಈ ಕೆಳಗಿನ ಸ್ಥಳಗಳಿಗೆ, ರಾಘವೇಂದ್ರ ನಗರ, ಕನಕಗಿರಿ, ಜನತನಗರ, ಲೋಕನಾಯಕ ನಗರ, ಗಣೇಶನಗರ, ಮಹದೇವ್‌ಪುರ, Loan Amount - 5,00,000 to 20,00,000. ಸಂಪರ್ಕಿಸಿ.
8088647887

PART TIME WORK WORK FROM HOME
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ / JOB. ತಿಂಗಳಿಗೆ ಸಂಬಳ 12,000 ದಿಂದ 18,000 ದವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
ಸಂಪರ್ಕಿಸಿ:
9148733213

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ, ಯುವಕ / ಯುವತಿಯರು, ವಿಧವೆ / ವಿಚ್ಛೇದಿತರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಉಚಿತ ಊಟ ವಸತಿಯೊಂದಿಗೆ, ಸಂಬಳ: 10,000 ರಿಂದ 15,000/–, ಕೂಡಲೇ ಸಂಪರ್ಕಿಸಿ:
9035324777 / 7259306665

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ್ ನಾಲ್ಲರ ದೈವ ಚೌಡಿಕ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾಹ, ಮನಸ್ಸಿನ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ಲರ ದೈವ, ಕಲ್ಲುಟ ಭಗವತಿ ಶಕ್ತಿಯಿಂದ ದಾಂಪತ್ಯ, ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

Life Partner ಆಗಲು Govt. Job ಇರುವ ವಿಚ್ಛೇದಿತಗೆ ವರ ಬೇಕಾಗಿದ್ದಾರೆ
ಲಿಂಗಾಯತ 44 / 5.5 / BA, B.Ed, Govt. Job, Salary 50,000/- Independent & Well Settled ಇರುವಂತಹ ವಿಚ್ಛೇದಿತೆಗೆ 2ನೇ ಸಂಬಂಧಕ್ಕೆ ಯಾವುದೇ ಜಾತಿಯ ಅಭ್ಯಂತರವಿಲ್ಲದ ವಿಧುರ / ವಿಚ್ಛೇದಿತ / ನೌಕರಸ್ಥ / ವ್ಯಾಪಾರಸ್ಥ / ವರ ಬೇಕಾಗಿದ್ದಾರೆ. (ಮಕ್ಕಳಿದ್ದರೂ ಪರವಾಗಿಲ್ಲ). ಮೈಸೂರು.
8310546187

40x60 N/F ಸೈಟು @ Rs. 18 ಲಕ್ಷ
DTCP Approved Layout
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಹುಣಸೂರು ಮೈನ್ ರೋಡ್‌ನಿಂದ 1 kms. ಇಲವಾಲ ಬಸ್ಸು ನಿಲ್ದಾಣ ದಿಂದ 6 kms
9538583377

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ, ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: 7 ರಿಂದ 2nd PUC, ಸಂಬಳ: 11,500 ರಿಂದ 16,800 ವರೆಗೆ, ESI & PF ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ.
8951869646
9902645646

ಶ್ರೀ ಮೂರ್ತಿ ಟೂರಿಸ್ಟ್
22/1/23 ಭಾನುವಾರ ಗೊರವನಹಳ್ಳಿ ಮಹಾಲಕ್ಷ್ಮಿ, ಎಡಿಯೂರು ಹೆಬ್ಬೂರು, ದೇವರಾಯನ ದುರ್ಗ. 26/1/23 ರಿಂದ 4 ದಿನಗಳು. ಹೊರನಾಡು, ಬೇಲೂರು, ಶೃಂಗೇರಿ. ಕೊಲ್ಲೂರು, ಗೋಕರ್ಣ, ಮುರುಡೇಶ್ವರ, ಆನೇಗುಡ್ಡ, ಅಂಬಲಪಾಡಿ, ಉಡುಪಿ, ಧರ್ಮಸ್ಥಳ, ಸುಬ್ರಹ್ಮಣ್ಯ ಪ್ರವಾಸ.
Tickets at your Door Step
9480733069

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 45, ಸಂಬಳ: 14,500, ESI, PF ಒಳಗೊಂಡು 3 Shift ಹಾಗೂ Weekoff ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆದು ಕೊಳ್ಳತಕ್ಕದ್ದು. ಸ್ಥಳ: CIPET ಕಾಲೇಜ್ ಹತ್ತಿರ, ರಿಂಗ್ ರೋಡ್, ಮೇಟಗಳ್ಳಿ, ಮೈಸೂರು.
9986874584

WANTED
Accountants With Knowledge of Tally, Telecallers, Anchors, Event Manager & Car Driver, Contact
9980959598

FOR SALE
1) 30x40, 30x50 sites in Defence Apartment Near Kote Road
2) 2 Acr land TVS factory Near . 1 Acr Harohalli Hd Kote Road
3) Semi Commercial 40x45 s/w c RK Nagar I blk
4) 40x60 KC Layout
5) 30x40 12 lakhs Yelwala Near
6) 40x60 Jaipura, HD Kote Road

PRAKRUTHI PROPERTIES
90359 90359 / 95386 90359

ಮನೆ ಭೋಗ್ಯಕ್ಕೆ ಬೇಕಾಗಿದೆ
3 BHK North Facing ದಿಕ್ಕಿನ ಮನೆ ವಿಜಯನಗರ, ಕುವೆಂಪುನಗರ, ಸರಸ್ವತಿಪುರಂ, ಗಂಗೋತ್ರಿ ಬಡಾವಣೆ ಸುತ್ತಮುತ್ತ ಬೇಕಾಗಿದೆ. (Broker's Excuse) ದೂರವಾಣಿ ಸಂಖ್ಯೆ:
9945458956
9606272959

WANTED
Employees for filling petrol & Gas in Petrol Bunk Cashier Plus Helper, Qualification SSLC Pass, Timing 6.30am onwards. Full or Part time. Contact:
9844002226

Sankarathi Spl
Ellu + Bella Chocolates are avalible here.
SRI VASAVAMBA TRADING
9141566014
8762854700

WANTED
Office Peon Male / Female, Age 30-45 yrs, Saraswathipuram, Contact:
7349667716

ನೇರ ನೇಮಕಾತಿ
- Non Voice Executive -10 Salary 12 to 18k
- Java HTML, PHP Developer (BE Any)
- ಹಿಂದಿ, ಕನ್ನಡ, ತೆಲುಗು, ತಮಿಳ್ Tele Callers, Salary : 12,000/-
- Accountant and Data Entry (Degree) Salary 12,000/–15,000/-.
- 3 Boys and 3 Office Girls, No Marketing, No Sales, No Target.

9483434329

Cut Jaggery, Cut Copra, Roasted Nylon Till, Mix Yellu, Roasted Groundnuts, Specially Homemade Sugar Cubes.
All items are available at Wholesale Rates.
SRI VASAVAMBA TRADING Co.
#13, D.D.Urs Road, Opp. to Shree
9141566014 / 8762834700

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಸಂಬಳ: ರೂ.12,000/–
7899754149

ಕೂಡಲೇ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ / ಇಲ್ಲದ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ.
ಶ್ರೀ ಭಗವಾನ್ ಸಿಲ್ಕ್ಸ್
ಕೆ.ಆರ್.ಸರ್ಕಲ್, ಮೈಸೂರು.

SITE FOR SALE
30x40 MUDA Site
ಶಾಂತವೇರಿ ಗೋಪಾಲಗೌಡನಗರ
(Call Only Buyers, Brokers Excuse)
9880882605

PART TIME JOB
India's Top Most Corporate Company is hiring part time job home basis job experience in corporate Field on Commission basis and good incentives. Contact:
7619594124
CV Mail at : mahalakshmivenkatesh999@gmail.com

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಅನಿಮಲ್ ಫೀಡ್ ಕಂಪನಿಗೆ ಪೌಡರಿಂಗ್ ಪ್ಯಾಕಿಂಗ್ ಮತ್ತು ಲೋಡಿಂಗ್ ಕೆಲಸಕ್ಕೆ 18 ರಿಂದ 45 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ಆಧಾರ್‌ಕಾರ್ಡ್ ಜೆರಾಕ್ಸ್ ಪ್ರತಿ ಜತೆಗೆ ಸಂಪರ್ಕಿಸಿ:– ಸಾಯಿ ಕೃಪ ಎಂಟರ್‌ಪ್ರೈಸಸ್, ಸಂಬಳ: 14,000/– (8 ಗಂಟೆ ಕೆಲಸಕ್ಕೆ)
ರತ್ನಯ್ಯ : 9900889325
ಬೋರೇಗೌಡ : 8050905152
Interview ಸ್ಥಳ: CIEPT ಕಾಲೇಜು ಹತ್ತಿರ, ಬೆಳಿಗ್ಗೆ – 10 ರಿಂದ ಮಧ್ಯಾಹ್ನ 12.30 ರವರೆಗೆ

WHOLE SALE RATE
Neem Plywood - 1504
White Laminate - 370
Color Laminate - 600
Vidyaranaypuram, Mysore.
Manu:
8880664465

ಬೇಕಾಗಿದ್ದಾರೆ
ನ್ಯೂ ಸಯ್ಯಾಜಿರಾವ್ ರಸ್ತೆ ಬಂಬೂ ಬಜಾರ್ ರಸ್ತೆಯಲ್ಲಿರುವ ಬಾರ್ ಅಂಡ್ ರೆಸ್ಟೋರೆಂಟ್‌ಗೆ ನುರಿತ ನಾನ್‌ವೆಜ್ ಅಡುಗೆಯವರು ಬೇಕಾಗಿದ್ದಾರೆ. ಸಂಪರ್ಕಿಸಿ:
8951609961
9342492525

WANTED
Nursing Staff Required Diploma Nursing or ANM Fresh or Experience Nurse. Preference for Hebbal Surrounding Area.
9880626252 / 9448425655

WANTED
for a Reputed computer Training Institue Tele Callers, Counselors, Marketing Executive and Trainers. Free Training Plus job Attractive Salaries and incentive.
9035066233
9606800244

MUDA Approved Site
40x60 E/F ಸೈಟು @ Rs. 48 ಲಕ್ಷ
30x40 E/F ಸೈಟು @ Rs. 22 ಲಕ್ಷ
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ. ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ
9538583377

ಸೈಟುಗಳು ಮಾರಾಟಕ್ಕಿದೆ
30x40 (NF), ಮಹದೇಶ್ವರ ಬಡಾವಣೆ ಮತ್ತು 30x50 (SF) ಹೊಸ ಹೌಸಿಂಗ್ ಬೋರ್ಡ್, ಪಿರಿಯಾಪಟ್ಟಣ ಟೌನ್, ಮೈಸೂರು ಜಿಲ್ಲೆ.
8073575689
9743182428

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಟೈಲರುಗಳು ಮತ್ತು ಹೆಲ್ಪರುಗಳು, ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ESI, PF ವಾರದ ರಜೆ ಮತ್ತು ಬೋನಸ್ ಇರುತ್ತದೆ. ಸಂಪರ್ಕಿಸಿ:
7795285485
8105249880

ಜಮೀನು ಬೇಕಾಗಿದೆ
ಮೈಸೂರು ಹೆಚ್.ಡಿ.ಕೋಟೆ ರಸ್ತೆಯಲ್ಲಿ ಮತ್ತು ಗದ್ದಿಗೆ ಮುಖ್ಯ ರಸ್ತೆಯಲ್ಲಿ ಜಮೀನು ಬೇಕಾಗಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ ನೇರ ವಾರಸುದಾರರಿಗೆ ಅವಕಾಶ. ಸಂಪರ್ಕಿಸಿ:
9663793666

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

8.88 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಸಿಎಸ್‌ಪಿ ಚಾಲನೆ



ಪಾಂಡವಪುರ, ಜ.8– ತಾಲೂಕಿನ ತೊಣ್ಣೂರು ಕೆರೆ ಹಾಗೂ ಲಕ್ಷ್ಮೀಸಾಗರದಲ್ಲಿ 8.88 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಎಸ್. ಪುಟ್ಟರಾಜು ಭೂಮಿ ಪೂಜೆ ನೆರವೇರಿಸಿದರು.

ತೊಣ್ಣೂರುಕೆರೆ ಗ್ರಾಮದ ಕೊಳಲು ವೇಣು ಗೋಪಾಲಸ್ವಾಮಿ ದೇವಸ್ಥಾನದ ಆವರಣದಲ್ಲಿ 2.50 ಕೋಟಿ ರೂ. ವೆಚ್ಚದಲ್ಲಿ ದೇವಸ್ಥಾನದ ಸುತ್ತ ಕಾಂಕ್ರಿಟ್ ರಸ್ತೆ ನಿರ್ಮಾಣ, ಪಾರ್ಕ್ ಅಭಿವೃದ್ಧಿ, ಗ್ರಾಮ ಪರಿಮಿತಿ ರಸ್ತೆ ಅಭಿವೃದ್ಧಿ, ಕೆರೆ ತೊಣ್ಣೂರು ಹಿನ್ನೀರಿನ ಎಡದಂಡ ನಾಲೆ ಬಳಿ 5 ಕೋಟಿ ವೆಚ್ಚದಲ್ಲಿ ಕೆರೆಗೆ ಕೋಡಿ ನಿರ್ಮಾಣ ಹಾಗೂ ಗೇಟ್‌ಗಳ ಅಳವಡಿಕೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ ಶಾಸಕ ಪುಟ್ಟರಾಜು, ಲಕ್ಷ್ಮೀಸಾಗರದಲ್ಲಿ 1.08 ಕೋಟಿ ವೆಚ್ಚದಲ್ಲಿ ಗ್ರಾಮದಿಂದ ಕೋಡಾಲ ಗ್ರಾಮ ಸಂಪರ್ಕಿಸುವ ರಸ್ತೆ, ಚರಂಡಿ ಅಭಿವೃದ್ಧಿ, 30 ಲಕ್ಷ ವೆಚ್ಚದಲ್ಲಿ ನಾಲೆ ಸೇತುವೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ದುದ್ದ ಹೋಬಳಿ ಸೇರಿದಂತೆ ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೇಮಾವತಿ ನೀರಾವರಿ ಯೋಜನೆಯಡಿ 35 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಅಧಿಕ ಪ್ರಮಾಣದಲ್ಲಿ ಮಳೆ ನೀರು ಬಂದು ತೊಣ್ಣೂರುಕೆರೆ ವ್ಯಾಪ್ತಿಯಲ್ಲಿ ಆದ ಅವಾಂತರ ಸರಿಪಡಿಸುವ ಕೆಲಸ ಮಾಡುತ್ತಿದ್ದೇವೆ. ತೊಣ್ಣೂರುಕೆರೆ ಹಿನ್ನೀರಲ್ಲಿ 5 ಕೋಟಿ ವೆಚ್ಚದ ಕೆರೆಕೋಡಿ ಹಾಗೂ ಗೇಟ್ ನಿರ್ಮಾಣ ಮಾಡಲಾಗುತ್ತಿದ್ದು, 8 ತೂಬುಗಳು ಬರಲಿದ್ದು, ಕೆಆರ್‌ಎಸ್ ಮಾದರಿ ಗೇಟ್ ನಿರ್ಮಿಸಲಾಗುತ್ತಿದೆ. ಮಳೆಯಿಂದ ಕೆರೆಗೆ ಎಷ್ಟೇ ಪ್ರಮಾಣದಲ್ಲಿ ನೀರು ಬಂದರೂ ಲಕ್ಷ್ಮೀಸಾಗರ, ಹನುಮಂತನಗರ ಜನರಿಗೆ ಯಾವುದೇ ತೊಂದರೆಯಾಗದಂತೆ ಆ ನೀರನ್ನು ಹೊರಹಾಕಲು ಕ್ರಮವಹಿಸಲಾಗಿದೆ. ವರ್ಷವಿಡಿ ತೊಣ್ಣೂರು ಕೆರೆಯಲ್ಲಿ 24.50 ಅಡಿ ನೀರು ಸಂಗ್ರಹಿಸಲು ಕ್ರಮವಹಿಸಲಾಗಿದೆ ಎಂದರು.

ಲಕ್ಷ್ಮೀಸಾಗರದಿಂದ ಕೋಡಾಲ ಗ್ರಾಮ ಸಂಪರ್ಕಿಸುವ ರಸ್ತೆ, ನಾಲೆಗೆ ಸೇತುವೆ ನಿರ್ಮಾಣಕ್ಕೆ ಪೂಜೆ ಸಲ್ಲಿಸಲಾಗಿದೆ. ಹಾಗೆಯೇ ಲಕ್ಷ್ಮೀಸಾಗರದಿಂದ ಟಿ.ಎಸ್.ಛತ್ರ ಗ್ರಾಮ ಸಂಪರ್ಕಿಸುವ ರಸ್ತೆ ಅಭಿವೃದ್ಧಿಗೂ ಕ್ರಮ ವಹಿಸಲಾಗಿದೆ. ಮೇಲುಕೋಟೆ, ಲಕ್ಷ್ಮೀಸಾಗರ ಸೇರಿದಂತೆ ಈ ಭಾಗಕ್ಕೆ ಕಾವೇರಿ ನೀರು ಪೂರೈಸುವ ಯೋಜನೆ ನಡೆಯುತ್ತಿದೆ. ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ವೇಳೆ ಕುಮಾರಸ್ವಾಮಿ ಅವರು ಇಡೀ ಜಿಲ್ಲೆಗೆ 1500 ಕೋಟಿ ವೆಚ್ಚದಲ್ಲಿ ಕುಡಿಯುವ ನೀರು ಪೂರೈಕೆಗೆ ಕ್ರಮ ವಹಿಸಿದ್ದರು. ಆ ನಂತರ ಬಂದ ಸರ್ಕಾರ ಅದನ್ನು ಕಿತ್ತೆಸೆದು, 500 ಕೋಟಿಯಲ್ಲಿ ಕೆ.ಆರ್.ಪೇಟೆ, ಪಾಂಡವಪುರ, ನಾಗಮಂಗಲ ತಾಲೂಕಿಗೆ ಮಾತ್ರ ನೀಡುತ್ತಿದ್ದಾರೆ. ಉಳಿದ 4 ತಾಲೂಕು ಬಿಟ್ಟಿದ್ದಾರೆ ಎಂದು ಕಿಡಿಕಾರಿದರು.

ಕೆಆರ್‌ಎಸ್‌ನಲ್ಲಿ 50 ಅಡಿ ನೀರಿದ್ದರೂ ಸಹ ತೊಣ್ಣೂರು ಕೆರೆಗೆ ನೀರು ತುಂಬಿಸುವ ಯೋಜನೆ ಮಾಡಿದ್ದೇನೆ. ಇದನ್ನು ನನಗೆ ಯಾರು ಹೇಳಿಕೊಟ್ಟಿಲ್ಲ. ನನಗೂ ಕ್ಷೇತ್ರದ ಋಣ ಇದೆ. ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಮೂಲಕ ಋಣ ತೀರಿಸುತ್ತಿದ್ದೇನೆ ಎಂದರು.

ಈ ವೇಳೆ ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇ ಗೌಡ, ಗ್ರಾಪಂ ಅಧ್ಯಕ್ಷೆ ಭಾರತಿ, ಮಾಜಿ ಅಧ್ಯಕ್ಷೆ ಶೃತಿ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಭಾಸ್ಕರ್, ತಾಪಂ ಮಾಜಿ ಸದಸ್ಯ ರಾಜಣ್ಣ, ಹೇಮಾವತಿ ನೀರಾವರಿ ನಿಗಮದ ಇಇ ಪುಟ್ಟಮಾಯಿಗೌಡ, ಎಇಇ ಶಾಂತ ಕುಮಾರ್, ಎಇಇಗಳಾದ ಗಣೇಶ್, ಪುನೀತ್, ಗ್ರಾಪಂ ಮಾಜಿ ಉಪಾಧ್ಯಕ್ಷ ಜಗದೀಶ್, ಲಕ್ಷ್ಮೀಸಾಗರ ಗ್ರಾಮದ ಯಜಮಾನರಾದ ಕಿಟ್ಟೇಗೌಡ, ಬೆಟ್ಟೇಗೌಡ, ಎಲ್.ಡಿ. ಸಂಜಯ್, ಜಯರಾವ್, ಕೃಷ್ಣೆಗೌಡ, ಕೃಷ್ಣಮೂರ್ತಿ, ಹಾಳಯ್ಯ, ಸೋಬಾನೆ ರಾಜೇಶ್ ಸೇರಿದಂತೆ ಹಲವರಿದ್ದರು.

> ನಾನು ಮೊದಲ ಬಾರಿ ಶಾಸಕನಾದಾಗ ಕ್ಷೇತ್ರದಲ್ಲಿ ಒಂದೇ ಒಂದು ವಿದ್ಯುತ್ ಸಬ್ ಸ್ಟೇಷನ್ ಇತ್ತು. ಬಳಿಕ ಹೋಬಳಿಗೆ ಎರಡರಂತೆ ವಿದ್ಯುತ್ ಸಬ್‌ಸ್ಟೇಷನ್ ಸ್ಥಾಪಿಸಿದ್ದೇವೆ. ಇದೀಗ ಮತ್ತೆ 5 ಹೊಸ ಸಬ್‌ಸ್ಟೇಷನ್‌ನ್ನು ಮಂಜೂರು ಮಾಡಿಸಿದ್ದೇನೆ. ಮೇಲುಕೋಟೆ ಹೋಬಳಿಯಲ್ಲಿ 220 ಕೆವಿ ವಿದ್ಯುತ್ ಸ್ಟೇಷನ್ ಸ್ಥಾಪನೆ ಮಾಡಲಾಗುತ್ತಿದ್ದು, 25 ವರ್ಷ ರೈತರಿಗೆ ವಿದ್ಯುತ್ ಸಮಸ್ಯೆ ಎದುರಾಗದಂತೆ ಕ್ರಮವಹಿಸಲಾಗಿದೆ. ಆದರೆ, ಸರ್ಕಾರ ಕಮಿಷನ್ ಆಸೆಗಾಗಿ ವಿದ್ಯುತ್ ಖರೀದಿ ಸದೆ ಜನರಿಗೆ ವಿದ್ಯುತ್ ಸಮಸ್ಯೆ ಮಾಡಿದ್ದಾರೆ.
>
> –ಸಿ.ಎಸ್. ಪುಟ್ಟರಾಜು, ಶಾಸಕ

ಗ್ರಾಮೀಣ ಜನರು ಆರೋಗ್ಯದ ಬಗ್ಗೆ ಕಾಳಜಿ ವಹಿಸಿ



ಮದ್ದೂರು, ಜ.8– ಗ್ರಾಮೀಣ ಜನರು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ನಟ ಶ್ರೀನಗರ ಕಿಟ್ಟಿ ಸಲಹೆ ನೀಡಿದರು.

ತಾಲೂಕಿನ ಕೆ.ಹೊನ್ನಲಗೆರೆ ಸರ್ಕಾರಿ ಶಾಲಾವರಣದಲ್ಲಿ ಭಾನುವಾರ ಹೆಚ್.ಬಿ.ಜಯರಾಮು ಅವರ ಮೊದಲ ಪುಣ್ಯಸ್ಮರಣೆ ಪ್ರಯುಕ್ತ ಶಂಕರ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬೆಂಗಳೂರು ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಬೃಹತ್ ಆರೋಗ್ಯ ಶಿಬಿರ ಹಾಗೂ ರೋಟರಿಯವರ ಬೃಹತ್ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಹಣ, ಐಶ್ವರ್ಯಕ್ಕಿಂತ ಆರೋಗ್ಯವೇ ಮುಖ್ಯ. ಆರೋಗ್ಯ ಇದ್ದರೆ ಮಾತ್ರ ನೆಮ್ಮದಿ ಜೀವನ ನಡೆಸಲು ಸಾಧ್ಯ. ಪ್ರತಿಯೊಬ್ಬರು ಆರೋಗ್ಯ ಬಗ್ಗೆ ಗಮನ ಹರಿಸುವ ಮೂಲಕ ಸುಖಮಯ ಜೀವನ ನಡೆಸಬೇಕು ಎಂದು ಸಲಹೆ ನೀಡಿದರು.

ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಮಾತನಾಡಿದರು. ಶಿಬಿರದಲ್ಲಿ ಕೆ.ಹೊನ್ನಲಗೆರೆ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು. ನೂರಾರು ಯುವಕರು ರಕ್ತದಾನ ಮಾಡಿ ಗಮನ ಸೆಳೆದರು.

ಕೆಪಿಸಿಸಿ ಸದಸ್ಯ ಎಸ್.ಗುರುಚರಣ್, ಮನ್‌ಮುಲ್ ನಿರ್ದೇಶಕಿ ರೂಪ, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ತಾಲೂಕು ಜೆಡಿಎಸ್ ಕಾರ್ಯಾಧ್ಯಕ್ಷ ರಾಜಣ್ಣ, ವೈದ್ಯರಾದ ಭಾಸ್ಕರ್, ಸುನೀಲ್, ರೋಹಿತ್, ಸುಬ್ಬು, ಸುರೇಶ, ಪ್ರಮೋದ್ ಸುಪ್ರೀತ್, ಎಚ್.ಬಿ. ಮಹದೇವ, ಎಚ್.ಬಿ.ಶಿವಣ್ಣ, ಎಚ್.ಬಿ.ರಮೇಶ್, ಎಚ್.ಪಿ.ಸ್ವಾಮಿ, ಅಂಕಪ್ಪ ಪುಟ್ಟಸ್ವಾಮಿ, ಸತೀಶ್, ಡೈಮಂಡ್ ಬಾಯ್ಸ್ ಪದಾಧಿಕಾರಿಗಳು ಹಾಗೂ ಕೆಹೊನ್ನಲಗೆರೆ ಗ್ರಾಮಸ್ಥರು ಇದ್ದರು.

ಕೆ.ಆರ್.ಪೇಟೆ ಅಭಿವೃದ್ಧಿಗೆ ಜೆಡಿಎಸ್ ಕೊಡುಗೆ ಅಪಾರ

ಹೆಚ್‌ಡಿಡಿ, ಹೆಚ್‌ಡಿಕೆ ಕೈ ಬಲಪಡಿಸಲು ಎಂಎಲ್‌ಸಿ ಡಾ.ಸೂರಜ್ ರೇವಣ್ಣ ಮನವಿ



ಕೆ.ಆರ್.ಪೇಟೆ, ಜ.8– ಕೆ.ಆರ್.ಪೇಟೆ ಅಭಿವೃದ್ಧಿಗೆ ಜೆಡಿಎಸ್ ಕೊಡುಗೆ ಅಪಾರ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಗೆಲ್ಲಿಸುವ ಮೂಲಕ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹಾಗೂ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಕೈ ಬಲಪಡಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಮನವಿ ಮಾಡಿದರು.

ಪಟ್ಟಣದ ಎಂ.ಡಿ.ಕೃಷ್ಣಮೂರ್ತಿ ಪೆಟ್ರೋಲ್ ಬಂಕ್ ಸಮೀಪ ಡಾ.ಸೂರಜ್ ರೇವಣ್ಣ ಹುಟ್ಟುಹಬ್ಬ ಅಂಗವಾಗಿ ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಎಸ್.ಆರ್.ದಿನೇಶ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ದೇವೇಗೌಡರ ಕುಟುಂಬಕ್ಕೆ ತೀರ ಹತ್ತಿರವಿರುವ ತಾಲೂಕೆಂದರೆ ಕೆ.ಆರ್.ಪೇಟೆ. ತಾಲೂಕು ಹಾಸನ ಜಿಲ್ಲೆಗೆ ಹೊಂದಿಕೊಂಡಿದ್ದು, ಕ್ಷೇತ್ರದಲ್ಲಿ ಹೆಚ್ಚು ಬಾರಿ ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪಕ್ಷಕ್ಕೆ ಶಕ್ತಿ ತುಂಬಿದ್ದೀರಿ. ಅದೇ ರೀತಿ ಮುಂಬರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಯಾರೇ ಆಗಲಿ ಅವರ ಗೆಲುವಿಗೆ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಕರೆ ನೀಡಿದರು.

ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿದ್ದು, ಕುಮಾರಣ್ಣ ಮುಖ್ಯಮಂತ್ರಿಯಾಗಲಿದ್ದಾರೆ. ಹೀಗಾಗಿ ಕಾರ್ಯಕರ್ತರು ಈಗಿನಿಂದಲೇ ಪಕ್ಷ ಸಂಘಟನೆ ಕೈಗೊಂಡು ಜೆಡಿಎಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು. ಆ ಮೂಲಕ ಮಂತ್ರಿಯಾದರೂ ಕನಿಷ್ಠ ರಸ್ತೆ ಅಭಿವೃದ್ಧಿ ಮಾಡದ ನಾರಾಯಣಗೌಡರಿಗೆ ತಕ್ಕಪಾಠ ಕಲಿಸಬೇಕು. ಪಕ್ಷದಿಂದ 2 ಸಲ ಟಿಕೆಟ್ ನೀಡಿ ಗೆಲ್ಲಿಸಿ ಸೂಕ್ತ ಸ್ಥಾನಮಾನ ನೀಡಿದರೂ ಪಕ್ಷಕ್ಕೆ ದ್ರೋಹ ಬಗೆದು ಕೆ.ಆರ್.ಪೇಟೆಯನ್ನು 2ನೇ ಶಿಕಾರಿಪುರ ಮಾಡುತ್ತೇನೆಂದು ಬಿಜೆಪಿಗೆ ಹೋದ ನಾರಾಯಣಗೌಡ ನಂಬಿಕೆ ಇಟ್ಟ ಕ್ಷೇತ್ರದ ಜನರಿಗೆ ಏನೂ ಮಾಡದೇ 3 ವರ್ಷ ಮಂತ್ರಿಯಾಗಿ ಕಾಲಹರಣ ಮಾಡಿದ್ದಾರೆ ಎಂದು ದೂರಿದರು. ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ರೋಡ್ ಶೋ ನಡೆಸಿದ ಸೂರಜ್ ರೇವಣ್ಣ ಅವರಿಗೆ ಟಿ.ಬಿ.ವೃತ್ತದಲ್ಲಿ ಪುರಸಭೆ ಮಾಜಿ ಸದಸ್ಯ ಕೆ.ಎನ್. ಕಿರಣ್ ಗುಂಡ ನೇತೃತ್ವದಲ್ಲಿ ಜೆಡಿಎಸ್ ಕಾರ್ಯಕರ್ತರು ಕ್ರೇನ್ ಮೂಲಕ ಬೃಹತ್ ಹಾರ ಹಾಕಿ ಪುಷ್ಪಾರ್ಚನೆ ಮಾಡಿ ಅದ್ದೂರಿಯಾಗಿ ಸ್ವಾಗತಿಸಿದರು.

ಈ ಸಂದರ್ಭ ಜೆಡಿಎಸ್ ಹಿರಿಯ ಮುಖಂಡರಾದ ಬಿ.ಎಲ್.ದೇವರಾಜು, ಬಸ್ ಕೃಷ್ಣೇಗೌಡ, ರಘು, ಎಂ.ಬಿ.ಹರೀಶ್, ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು, ಪುರಸಭಾ ಸದಸ್ಯರಾದ ಬಸ್ ಸಂತೋಷ್ ಕುಮಾರ್, ಜಿಲ್ಲಾ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಬಿ.ಎಂ. ಕಿರಣ್, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ಪಿ. ಲೋಕೇಶ್, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ದಿನೇಶ್, ದರ್ಶನ್, ಶ್ರೀನಿವಾಸ್, ತಾಪಂ ಮಾಜಿ ಸದಸ್ಯ ಮಂಜೇಶ್, ಅತೀಕ್ ಅಹಮದ್, ಗಂಗಾಧರ್, ಬಿ.ವಿ.ನಾಗೇಶ್, ಲೋಕೇಶ್ ಸೇರಿದಂತೆ ಇತರರಿದ್ದರು.



ಶ್ರೀರಂಗಪಟ್ಟಣ ತಾಲೂಕಿನ ಪಿ.ಹೊಸಹಳ್ಳಿಯಲ್ಲಿ ನಿರ್ಮಿಸುತ್ತಿರುವ ಗ್ರಾಮದೇವತೆ ಮಾರಮ್ಮದೇವಿ ದೇವಸ್ಥಾನ ಕಾಮಗಾರಿಗೆ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ 50 ಸಾವಿರ ಧನಸಹಾಯ ನೀಡಿದರು. ಈ ವೇಳೆ ಮುಖಂಡರಾದ ಪೈ.ಲಕ್ಷ್ಮಣ್, ಪೈ.ಮಾದೇವಣ್ಣ, ಪೈ.ಪುಟ್ಟರಾಜು, ಶಾಮಿಯಾನ ವಿಜಯ್, ಗ್ರಾಪಂ ಸದಸ್ಯರಾದ ಕೃಷ್ಣಾನಂದ, ಸಾಗರ್, ಸತೀಶ್, ಶೇಖರ್, ಚೇತನ್ ಸೇರಿದಂತೆ ಇತರರಿದ್ದರು.

ಗಂಗಾಮತಸ್ಥರನ್ನು ಎಸ್ಟಿಗೆ ಸೇರಿಸಲು ಪ್ರಧಾನಿಗೆ ಮನವಿ

ಭಾನು ಪ್ರತಾಪ್‌ಸಿಂಗ್ ವರ್ಮಾ ಭರವಸೆ



ಮಂಡ್ಯ, ಜ.8– ಗಂಗಾಮತಸ್ಥ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಪ್ರಧಾನಿ ಮೋದಿ ಅವರಿಗೆ ಮನವಿ ಮಾಡುತ್ತೇನೆ ಎಂದು ಭಾರತ ಸರ್ಕಾರದ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ ರಾಜ್ಯ ಸಚಿವ ಭಾನು ಪ್ರತಾಪ್‌ಸಿಂಗ್ ವರ್ಮಾ ಭರವಸೆ ನೀಡಿದರು.

ನಗರಕ್ಕೆ ಭೇಟಿ ನೀಡಿ ರಾಷ್ಟ್ರೀಯ ಎಸ್ಸಿ/ಎಸ್ಟಿ, ಓಬಿಸಿ, ಅಲ್ಪಸಂಖ್ಯಾತರ ಸಂಘದ ರಾಷ್ಟ್ರೀಯ ಉಪಾಧ್ಯಕ್ಷ ಡಾ.ಟಿ.ಕೃಷ್ಣಯ್ಯ ಮತ್ತು ಕೋಲಿ ಗಂಗಮತಸ್ಥ ಸಮುದಾಯದ ಅಭಿನಂದನೆ ಮತ್ತು ಮನವಿ ಸ್ವೀಕರಿಸಿ ಅವರು ಮಾತನಾಡಿದ ಅವರು, ಮಂಡ್ಯದ ಕೋಲಿ ಮತ್ತು ಉಪಜಾತಿಗಳ ಗಂಗಮತಸ್ಥ ಸಮುದಾಯ ನೀಡಿರುವ ಮನವಿಯನ್ನು ಪ್ರಧಾನಿಗಳ ಸಚಿವಾಲಯಕ್ಕೆ ತಲುಪಿಸಿ ಸಂಬಂಧಪಟ್ಟ ಸಚಿವರೊಂದಿಗೆ ಸಂಪುಟದಲ್ಲಿ ಚರ್ಚಿಸುತೇವೆ ಎಂದರು.

ರಾಷ್ಟ್ರೀಯ ಎಸ್ಸಿ/ಎಸ್ಟಿ, ಓಬಿಸಿ, ಅಲ್ಪಸಂಖ್ಯಾತರ ಸಂಘದ ರಾಷ್ಟ್ರೀಯ ಉಪಾಧ್ಯಕ್ಷ ಡಾ.ಟಿ.ಕೃಷ್ಣಯ್ಯ ಮಾತನಾಡಿ, ಗಂಗಾಮತಸ್ಥರನ್ನು ಎಸ್ಟಿಗೆ ಸೇರಿಸುವಂತೆ 40 ವರ್ಷಗಳಿಂದ ಮನವಿ ಮಾಡುತ್ತಿದ್ದೇವೆ. ಆದರೆ ರಾಜಕೀಯ ದುರುದ್ದೇಶದಿಂದ ನಿರ್ಲಕ್ಷಿಸಲಾಗುತ್ತಿದೆ. ಕಳೆದ ಲೋಕಸಭಾ ಚುನಾವಣೆ ವೇಳೆ ಪ್ರಧಾನಿ ಮೋದಿ ಸೇರಿದಂತೆ ಸಚಿವರು ಹಾಗೂ ಬಿಜೆಪಿ ಇತರೆ ನಾಯಕರು, ಗಂಗಾಮತ ಸಮುದಾಯವನ್ನು ಎಸ್‌ಟಿಗೆ ಸೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ ಈವರೆಗೂ ಭರವಸೆ ಈಡೇರಿಸಿಲ್ಲ. ಸಮುದಾಯ ಗಂಭೀರವಾಗಿ ಪರಿಗಣಿಸಿದೆ ಎಂದು ಆಗ್ರಹಿಸಿದರು. ಶೈಕ್ಷಣಿಕ, ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿರುವ ಗಂಗಾಮತ ಸಮುದಾಯ ಪಪಂಗಡಕ್ಕೆ ಸೇರುವ ಎಲ್ಲಾ ಅರ್ಹತೆ ಹೊಂದಿದೆ ಸದ್ಯ ಕಡತವು ಕೇಂದ್ರದ ರಿಜಿಸ್ಟ್ರಾರ್ ಜನರಲ್ ಬಳಿ ಉಳಿದುಕೊಂಡಿದೆ ಎಂದರು. ಕೋಲಿ ಗಂಗಾಮತಸ್ಥ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಿದೆ. ಈಗಾಗಲೇ ಕುಲಶಾಸ್ತ್ರ ಅಧ್ಯಯನ ಆಗಿ ಮುಗಿದು ವರದಿ ಕೇಂದ್ರ ಸರ್ಕಾರದ ಮುಂದಿದೆ. ವಿಧಾನಸಭೆ– ಲೋಕಸಭೆ ಚುನಾವಣೆಗೆ ಮುನ್ನ ವರದಿ ಜಾರಿಗೆ ಒತ್ತಾಯಿಸುತ್ತೇವೆ ಎಂದರು. ಈ ವೇಳೆ ಗಂಗಾಮತಸ್ಥ ಸಮಾಜದ ವಕೀಲ ಕುಮಾರ್, ಹನುಮಂತು, ಚಂದ್ರಶೇಖರ್ ಮತ್ತಿತರರಿದ್ದರು.


ಸಿಎಂಗೂ ಸ್ಯಾಂಟ್ರೋ ರವಿಗೂ ಯಾವುದೇ ಸಂಬಂಧವಿಲ್ಲ

ಬಿಜೆಪಿ ಟ್ವೀಟ್

ಬೆಂಗಳೂರು, ಜ.8– 'ಸ್ಯಾಂಟ್ರೋ ರವಿ'ಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೂ ಅವರ ಪುತ್ರ ಭರತ್‌ಗೂ ಯಾವುದೇ ಸಂಬಂಧವಿಲ್ಲ ಎಂದು ಬಿಜೆಪಿ ಸ್ಪಷ್ಟಪಡಿಸಿದೆ.

ಸಿಎಂ ಮನೆಗೆ ಹಲವರು ಭೇಟಿ ನೀಡುತ್ತಿರುತ್ತಾರೆ. ಇಲ್ಲಿಗೆ ಬರುವವರು ಸಿಎಂ ಹಾಗೂ ಕುಟುಂಬದವರ ಜೊತೆ ಫೋಟೋ ತೆಗೆಸಿಕೊಂಡು ಹೋಗುವುದು ಸಾಮಾನ್ಯ. 'ಸ್ಯಾಂಟ್ರೋ ರವಿ' ಫೋಟೋ ತೆಗೆದಿರಬಹುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಥವಾ ಅವರ ಪುತ್ರ ಭರತ್ ಬೊಮ್ಮಾಯಿ ಅವರಿಗೂ ಸ್ಯಾಂಟ್ರೋ ರವಿಗೂ ಯಾವುದೇ ಸಂಬಂಧವಿಲ್ಲ. ಇವೆಲ್ಲವೂ ವಿರೋಧ ಪಕ್ಷಗಳ ಕಾರ್ಖಾನೆಗಳಲ್ಲಿ ತಯಾರಾದ ಸುಳ್ಳು ಎಂದು ಬಿಜೆಪಿ ಟ್ವೀಟ್ ಮಾಡಿದೆ.

ವೈ.ಕೃಷ್ಣಮೂರ್ತಿ ನಿಧನ



ಮೈಸೂರು, ಜ.8– ಮೈಸೂರಿನ ಶಾರದಾ ದೇವಿನಗರದ ನಿವಾಸಿ, ರಾಜ್ಯ ವಯಸ್ಕ ಶಿಕ್ಷಣ ಮಂಡಳಿಯ ನಿವೃತ್ತ ಅಧಿಕಾರಿ ವೈ.ಕೃಷ್ಣ ಮೂರ್ತಿ (89) ಅವರು ಶನಿ ವಾರ ಖಾಸಗಿ ಆಸ್ಪತ್ರೆ ಯಲ್ಲಿ ನಿಧನರಾದರು.

ಆಧುನಿಕ ಡೈರಿ ಮತ್ತು ಪೌಲ್ಟ್ರಿ ಉತ್ಪನ್ನಗಳ ಕುರಿತು ಡೆನ್ಮಾರ್ಕ್‌ನಲ್ಲಿ ತರಬೇತಿ ಪಡೆದಿದ್ದ ಅವರು ಆ ನಿಟ್ಟಿನಲ್ಲೂ ಉತ್ತಮ ಸೇವೆ ಸಲ್ಲಿಸಿದ್ದರು. ಮೃತರ ಪತ್ನಿ ದಿವಂಗತ ಸರೋಜಾ ಅವರು ಕಾಂಗ್ರೆಸ್ ಪಕ್ಷದ ಸಾಮಾಜಿಕ ಕಾರ್ಯಕರ್ತೆ ಯಾಗಿದ್ದರು. ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಕೃಷಮೂರ್ತಿ ಅವರ ಅಂತ್ಯ ಸಂಸ್ಕಾರ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಎಲ್.ರವಿ ಅಯ್ಯರ್



ಮೈಸೂರು, ಜ.8– ಮೈಸೂರಿನ ಮಹಾಜನ ಕಾಲೇಜು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎಲ್. ರವಿ ಅಯ್ಯರ್(59) ಅವರು ಹೃದಯಾಘಾತದಿಂದ ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಹಾಗೂ ಶಿಷ್ಯವೃಂದ ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಾಳೆ (ಜ.9) ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಲ ಸರಿದರೆ ಮತ್ತೆ ಬಾರದು...

ವಿದ್ಯಾರ್ಥಿಗಳಿಗೆ ಸಾಹಿತಿ ಬನ್ನೂರು ರಾಜು ಎಚ್ಚರಿಕೆ ಗಂಟೆ



ನಂಜನಗೂಡು, ಜ.8– ಸಮಯ ಎಂಬುದು ಬಹಳ ಅಮೂಲ್ಯವಾದದ್ದು. ಒಮ್ಮೆ ಅದು ಕಳೆದು ಹೋದರೆ ಮತ್ತೆಂದೂ ಅದು ಮರಳಿ ಬಾರದು. ಹಾಗಾಗಿ ವ್ಯರ್ಥವಾಗಿ ಕಾಲ ಕಳೆಯದೆ ಪ್ರತಿಯೊಬ್ಬರೂ ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿಗಳು ಸಮಯವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಪಟ್ಟಣದ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲೊಂದಾದ ಶ್ರೀನೀಲಕಂಠೇಶ್ವರ ಆಂಗ್ಲ ಮಾಧ್ಯಮ ಶಾಲೆ ಮತ್ತು ಮೈಸೂರಿನ ಹಿರಣ್ಮಯಿ ಪ್ರತಿಷ್ಠಾನ ಸಂಯುಕ್ತವಾಗಿ ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ನೂತನ ವರ್ಷದ ಸಂಭ್ರಮಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇದು ವೇಗದ ಯುಗವಾಗಿದ್ದು ಕ್ಷಣ ಕ್ಷಣಕ್ಕೂ ಕಾಲ ಮಿಂಚಿನಂತೆ ಓಡುತ್ತಿರುತ್ತದೆಯಾದ್ದರಿಂದ ಕಾಲ ಇದ್ದಾಗಲೇ ಸಾಧನೆಯ ಮೆಟ್ಟಿಲುಗಳನ್ನು ಏರುವ ಪ್ರಯತ್ನ ಮಾಡಬೇಕೆಂದರು.

ಪ್ರತಿಯೊಬ್ಬ ವಿದ್ಯಾರ್ಥಿಗೂ ಇದು ಓದುವ ವಯಸ್ಸು. ಈಗ ಎಲ್ಲರಿಗೂ ಓದುವುದೇ ಕೆಲಸವಾಗಬೇಕು. ಮುಂದೆ ಇದೇ ಓದು ಉದ್ಯೋಗವನ್ನೂ ಹಾಗೂ ಉತ್ತಮ ಭವಿಷ್ಯವನ್ನೂ ಕಟ್ಟಿಕೊಡುತ್ತದೆ. ತಂದೆ ತಾಯಿಗಳು ಗುರು ಹಿರಿಯರ ಆಶಯವನ್ನು ಅರ್ಥ ಮಾಡಿಕೊಂಡು ಒಂದು ನಿರ್ದಿಷ್ಟ ಗುರಿಯೊಡನೆ ವಿದ್ಯಾರ್ಥಿಗಳು ಕಾಲ ಪ್ರಜ್ಞೆಯೊಡನೆ ಓದಿನತ್ತ ಆಸಕ್ತಿ ತಾಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜೀವನದ ವಿದ್ಯಾಭ್ಯಾಸದ ಹಾದಿಯಲ್ಲಿ ಈಗ ಇಪ್ಪತ್ತು, ಇಪ್ಪತ್ತೈದು ವರ್ಷಗಳು ಕಷ್ಟಪಟ್ಟು ಓದಿದರೆ ಮುಂದಿನ ಎಪ್ಪತ್ತೈದು ವರ್ಷಗಳು ಸುಖದಿಂದ ಇರಬಹುದೆಂದು ಹೇಳಿದರು. ಶ್ರೀ ನೀಲಕಂಠೇಶ್ವರ ವಿದ್ಯಾಸಂಸ್ಥೆಯ ಹಿರಿಯರಾದ ಮಾದಮ್ಮ ಹಾಗೂ ಶಿವಮ್ಮ ಅವರು ಜ್ಯೋತಿ ಬೆಳಗು ವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಶುಭ ಹಾರೈಸಿದರು. ಖ್ಯಾತ ಮುಕ್ತ ಕವಿ ಎಂ.ಮುತ್ತು ಸ್ವಾಮಿ ಮತ್ತು ಶಾಲೆಯ ಶಿಕ್ಷಕಿ ಶೋಭಾ ರಾಣಿ, ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಎನ್.ಎಂ.ಕುಮಾರ ಸ್ವಾಮಿ ವಿದ್ಯಾರ್ಥಿಗಳಿಗೆ ಹಿತವಚನ ಹೇಳಿದರು.

ಇದೇ ವೇಳೆ ಹಿರಣ್ಮಯಿ ಪ್ರತಿಷ್ಠಾನದ ವತಿಯಿಂದ ನಡೆಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರತಿಷ್ಠಾನದ ಅಧ್ಯಕ್ಷರೂ ಆದ ಖ್ಯಾತ ಶಿಕ್ಷಣ ತಜ್ಞ ಎ.ಸಂಗಪ್ಪ ಅವರು ಬಹುಮಾನ ವಿತರಿಸಿ ಗೌರವಿಸಿದರು.

ಆರು ಸಂಶೋಧಕರಿಗೆ ಇನ್ಫೋಸಿಸ್ ಪ್ರಶಸ್ತಿ

ಬೆಂಗಳೂರು, ಜ.8– ಆಯಾ ಕ್ಷೇತ್ರಗಳಲ್ಲಿನ ಅವರ ಕಾರ್ಯವನ್ನು ಗುರುತಿಸಿ ಆರು ಸಂಶೋಧಕರಿಗೆ 2022ನೇ ಸಾಲಿನ ಇನ್ಫೋಸಿಸ್ ಪ್ರಶಸ್ತಿಯನ್ನು ಶನಿವಾರ ಪ್ರದಾನ ಮಾಡಲಾಯಿತು.

ಇನ್ಫೋಸಿಸ್ ಸೈನ್ಸ್ ಫೌಂಡೇಶನ್ ಲಾಭೋದ್ದೇಶವಿಲ್ಲದ ಟ್ರಸ್ಟ್ ಆಗಿದ್ದು, ಸಂಸ್ಥೆಯು ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್, ಮಾನವಿಕತೆ, ಜೀವ ವಿಜ್ಞಾನ, ಗಣಿತ ವಿಜ್ಞಾನ, ಭೌತಿಕ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿನ ಸಂಶೋಧಕರನ್ನು ಗುರ್ತಿಸಿ ವಾರ್ಷಿಕವಾಗಿ ಗೌರವಿಸುತ್ತದೆ.

ಭಾರತ ಮತ್ತು ಪ್ರಪಂಚದ ಅಭಿವೃದ್ಧಿಗೆ ವೈಜ್ಞಾನಿಕ ಸಂಶೋಧನೆಯ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯಲು ಇನ್ಫೋಸಿಸ್ ಈ ಪ್ರಶಸ್ತಿಯನ್ನು ನೀಡುತ್ತಿದೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಮಹೇಶ್ ಕಾಕಡೆ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಕುಲಪತಿ ಪ್ರೊ. ಸುಧೀರ್ ಕೃಷ್ಣಸ್ವಾಮಿ ಸೇರಿದಂತೆ ಆರು ಮಂದಿ ನಿನ್ನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಹೇಶ್ ಕಾಕಡೆ ಅವರಿಗೆ ಬೀಜಗಣಿತ ಸಂಖ್ಯಾಸೂತ್ರಕ್ಕೆ ಸಂಬಂಧಿಸಿದ ಸಂಶೋಧನೆ ಹಾಗೂ ಸುಧೀರ್ ಅವರಿಗೆ ಸಂವಿಧಾನದ ಮೂಲ ಸ್ವರೂಪದ ತಾತ್ವಿಕತೆ ಕುರಿತ ಬರವಣಿಗೆಗಳಿಗಾಗಿ ಪ್ರಶಸ್ತಿ ನೀಡಲಾಯಿತು. ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ ಖರಗ್‌ಪುರ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಸುಮನ್ ಚಕ್ರವರ್ತಿ, ಜೀವವಿಜ್ಞಾನ ವಿಭಾಗದಲ್ಲಿ ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್‌ನ ನ್ಯೂರೋಬಯಾಲಜಿ ವಿಭಾಗದ ಪ್ರಾಧ್ಯಾಪಕಿ ವಿದಿತಾ ವೈದ್ಯ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಭೌತವಿಜ್ಞಾನ ವಿಭಾಗದಲ್ಲಿ ಪುಣೆಯ ನ್ಯಾಷನಲ್ ಸೆಂಟರ್ ಫಾರ್ ರೇಡಿಯೊ ಆಸ್ಟ್ರಾನಮಿಯ ಪ್ರಾಧ್ಯಾಪಕ ನಿಸ್ಸಿಂ ಕಾನೇಕರ್ ಹಾಗೂ ಸಮಾಜ ವಿಜ್ಞಾನ ವಿಭಾಗದಲ್ಲಿ ಯೇಲ್ ವಿಶ್ವವಿದ್ಯಾಲಯದ ಆರ್ಥಿಕ ಬೆಳವಣಿಗೆ ಕೇಂದ್ರದ ನಿರ್ದೇಶಕಿ ರೋಹಿಣಿ ಪಾಂಡೆ ಅವರಿಗೆ ಇನ್ಫೋಸಿಸ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಮೆರಿಕದ ಬರ್ಕ್ಲಿಯ ಸೈಮನ್ಸ್ ಇನ್‌ಸ್ಟಿಟ್ಯೂಟ್ ಫಾರ್ ದಿ ಥಿಯರಿ ಆಫ್ ಕಂಪ್ಯೂಟಿಂಗ್‌ನ ನಿರ್ದೇಶಕಿ ಪ್ರೊ ಶಾಫಿ ಗೋಲ್ಡ್‌ವಾಸರ್ ಪ್ರಶಸ್ತಿ ಪ್ರದಾನ ಮಾಡಿದರು.

ದೇವೇಗೌಡರ ಬೆನ್ನಿಗೆ ಚೂರಿ ಹಾಕಿದ ವೈ.ಎಸ್.ವಿ. ದತ್ತಾ: ಜೆಡಿಎಸ್ ಕಿಡಿ



ಬೆಂಗಳೂರು, ಜ.8– ಜೆಡಿಎಸ್ ತೊರೆಯಲು ಮುಂದಾಗಿರುವ ವೈ.ಎಸ್.ವಿ. ದತ್ತಾ ವಿರುದ್ಧ ಜೆಡಿಎಸ್ ಕಿಡಿಕಾರಿದೆ. ಸರಣಿ ಟ್ವೀಟ್ ಮಾಡಿ ಆಕ್ರೋಶ ಹೊರಹಾಕಿರುವ ಜೆಡಿಎಸ್, ದೇವೇಗೌಡರ ಬೆನ್ನಿಗೆ ದತ್ತಾ ಚೂರಿಹಾಕಿದ್ದಾರೆ ಎಂದು ಕಿಡಿಕಾರಿದೆ.

ರಾಜ್ಯದ ಅಗ್ರಮಾನ್ಯ ನಾಯಕರು, ಮಾಜಿ ಪ್ರಧಾನಮಂತ್ರಿ ಆಗಿರುವ ಹೆಚ್.ಡಿ.ದೇವೇಗೌಡರ ಮಾನಸಪುತ್ರ ಎಂದೇ ಖ್ಯಾತಿ ಆಗಿರುವ ವೈ.ಎಸ್.ವಿ ದತ್ತಾ ಅವರು ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷ ಸೇರುತ್ತಿದ್ದಾರೆ. ಕೈ ಹಿಡಿಯಲು ಅವರು ದಿನವನ್ನೂ ನಿಗದಿ ಮಾಡಿಕೊಂಡಿದ್ದಾರೆ ಎನ್ನುವುದು ಸದ್ಯದ ಸುದ್ದಿ.

ಬಹುತೇಕ ಕಡೆ ದೇವೇಗೌಡರ ಮಾನಸಪುತ್ರ ಜೆಡಿಎಸ್ ತೊರೆದು ಹೋಗುತ್ತಿದ್ದಾರೆ ಎಂದು ಪ್ರಚಾರ ಮಾಡಲಾಗುತ್ತಿದೆ. ಮಾನಸಪುತ್ರ ಎನ್ನುವ ಪದವೇ ಹೆಚ್ಚು ಸದ್ದು ಮಾಡುತ್ತಿದೆ. ದತ್ತಾ ಅವರು ಗೌಡರಿಗೆ ಮಾನಸಪುತ್ರ ಪುತ್ರರಾಗಿದ್ದರೋ ಇಲ್ಲವೋ ಗೊತ್ತಿಲ್ಲ, ಆದರೆ, ದೇವೇಗೌಡರು ಮಾತ್ರ ನಿಜಕ್ಕೂ ದತ್ತಾ ಅವರನ್ನು ಹೆತ್ತ ತಂದೆಗಿಂತ ಹೆಚ್ಚು ಸಲುಹಿದ್ದರು, ಪೊರೆದಿದ್ದರು.

ಅಂತಹ ದತ್ತಾ, ಮಾನಸಪುತ್ರನೆಂದು ಖ್ಯಾತಿಯ ಜತೆಗೆ ಸಕಲವನ್ನೂ ಸಂಪಾದನೆ ಮಾಡಿಕೊಂಡ ಮೇಲೆ ಸಲುಹಿದ, ಕಷ್ಟ ಬಂದಾಗ ಕಾಪಾಡಿದ, ಕಠಿಣ ಸಂದರ್ಭಗಳಲ್ಲಿ ಕಣ್ರೆಪ್ಪೆಯಂತೆ ಪೊರೆದ, ಅನೇಕ ಸಲ ಜನ್ಮಕೊಟ್ಟ ತಂದೆಗಿಂತ ಗಟ್ಟಿಯಾಗಿ ಜತೆಗೆ ನಿಂತು ಮುಳುಗೇ ಹೋಗುತ್ತಿದ್ದ ಬದುಕನ್ನು ಬದುಕಿಸಿಕೊಟ್ಟ ಮಾನಸ ತಂದೆಯನ್ನು ಮರೆತು, ತೊರೆಯುತ್ತಿದ್ದರೆ ಎಂದು ಜೆಡಿಎಸ್ ಆರೋಪಿಸಿದೆ.

ಮಾನಸಪುತ್ರನನ್ನು ಇನ್ನೊಬ್ಬ ಪುತ್ರನೆಂದೇ ನಂಬಿದ್ದರು ದೇವೇಗೌಡರು. ನಂಬಿ ಪಕ್ಕದಲ್ಲಿ ಇಟ್ಟುಕೊಂಡರು. ಕೇಳಿದ್ದೆಲ್ಲಾ ಕೊಟ್ಟರು, ಕೇಳದಿದ್ದರೂ ಕೊಟ್ಟರು. ಪ್ರೀತಿ, ವಿಶ್ವಾಸ, ವಾತ್ಸಲ್ಯ ಎಲ್ಲವನ್ನೂ ಧಾರೆ ಎರೆದರು. ಆದರೆ, ಇವತ್ತು ಮಾನಸ ಪುತ್ರ ಎಲ್ಲವನ್ನೂ ಮರೆತು ಕೃತಜ್ಞತಾ ಹೀನರಾಗಿ ಅದೇ ಗೌಡರಿಗೆ ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸ್ ಸೇರುತ್ತಿದ್ದಾರೆ.

ಮಾನಸಪುತ್ರನಿಗೆ ನಂಬಿಕೆ ಎಂದರೆ ವ್ಯಾಪಾರ, ಪ್ರೀತಿ ಎಂದರೆ ಲಾಭದ ದಾರಿ, ವಿಶ್ವಾಸ ಎಂದರೆ ರಾಜಕೀಯ ಹಕೀಕತ್ತಿನ ರಾಜಮಾರ್ಗ. ಅಂಥ ಮಾನಸಪುತ್ರನ ಬಗ್ಗೆ ಗೌಡರು ಕೊರಗುವುದಿಲ್ಲ. ಏಕೆಂದರೆ ಪಕ್ಷದ ಎಲ್ಲಾ ನಾಯಕರು ಕಟ್ಟ ಕಡೆಯ ಕಾರ್ಯಕರ್ತನೂ ಮಾಜಿ ಪ್ರಧಾನಿಗಳ ಮಾನಸಪುತ್ರರೇ. ಢೋಂಗಿ ಮಾನಸಪುತ್ರರನ್ನು ಮರೆ ಲೇಸು. ಅಲ್ಲವೇ ಎಂದು ಟ್ವೀಟ್ ಮಾಡಿದ ಜೆಡಿಎಸ್ ಕಿಡಿಕಾರಿದೆ.

ಹೆಬ್ಬಾಳು ವಿಶ್ವಕರ್ಮ ಮಹಾಸಂಘದ ಕ್ಯಾಲೆಂಡರ್ ಬಿಡುಗಡೆ



ಹೆಬ್ಬಾಳು, ಜ.8– ಕೆ.ಆರ್.ನಗರ ತಾಲೂಕಿನ ಹೆಬ್ಬಾಳು ಗ್ರಾಮದಲ್ಲಿ ವಿಶ್ವಕರ್ಮ ಸಮುದಾಯ ಭವನ ನಿರ್ಮಾಣಕ್ಕೆ ಗ್ರಾಪಂನಿಂದ ನಿವೇಶನ ಮಂಜೂರಾಗಿದ್ದು, ಭವನ ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡಲಾಗುತ್ತದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಹೆಬ್ಬಾಳು ಹೋಬಳಿ ಮಟ್ಟದ ವಿಶ್ವಕರ್ಮ ಮಹಾಸಂಘದ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು ಸರ್ಕಾರದಿಂದ ನಿವೇಶನ ಸೇರಿದಂತೆ ಸವಲತ್ತು ಕೊಡಿಸುವಾಗ ವಿಳಂಬವಾಗುವುದು ಸಹಜ ಎಂಬುದನ್ನು ಸಮಾಜದವರು ಅರ್ಥ ಮಾಡಿಕೊಳ್ಳಬೇಕು ಎಂದರು.

ಕೆ.ಆರ್.ನಗರದ 3ನೇ ವಾರ್ಡ್‌ನಲ್ಲಿ ವಿಶ್ವಕರ್ಮ ಸಮುದಾಯ ಭವನ ನಿರ್ಮಾಣಕ್ಕೆ ಈಗಾಗಲೇ ನಿವೇಶನ ಕೊಡಿಸಲಾಗಿದ್ದು ನಿವೇಶನಕ್ಕೆ ಕಾಂಪೌಂಡ್ ನಿರ್ಮಾಣ ಮಾಡಲು ನೀಡಲಾದ 10 ಲಕ್ಷ ರೂ. ಅನುದಾನದಲ್ಲಿ ಕಾಂಪೌಂಡ್ ಬದಲು ಸಣ್ಣ ಕಚೇರಿ ನಿರ್ಮಾಣ ಮಾಡಿಕೊಳ್ಳಬೇಕು ಎಂದು ಸಂಘದ ಮುಖಂಡರಿಗೆ ಸಲಹೆ ನೀಡಿದರು.

ಕಚೇರಿ ನಿರ್ಮಾಣದ ನಂತರ ಸಮುದಾಯದವರು ಭೇಟಿಗೆ ಅನುಕೂಲವಾಗಲಿದ್ದು, ಇದರಿಂದ ಸಮಾಜ ಸಂಘಟನೆಯಾಗಲಿದೆ. ಸಮಾಜ ಸಧೃಡವಾಗಿ ಸಂಘಟನೆಗೊಂಡಾಗ ಮಾತ್ರ ಭವನ ನಿರ್ಮಾಣ ಮಾಡುವುದರ ಜತೆಗೆ ಇತರ ಕಾರ್ಯಕ್ರಮ ಏರ್ಪಡಿಸಲು ಸಾಧ್ಯ. ಕೆ.ಆರ್.ನಗರ ವಿಶ್ವಕರ್ಮ ಸಮುದಾಯ ಭವನಕ್ಕೆ ಸರ್ಕಾರದಿಂದ 2 ಕೋಟಿ ಅನುದಾನ ಕೊಡಿಸುವ ಭರವಸೆ ನೀಡಿದರು.

ಈ ವೇಳೆ ಹೆಬ್ಬಾಳು ಗ್ರಾಪಂ ಅಧ್ಯಕ್ಷೆ ಭವ್ಯ, ಸಮಾಜದ ಹಿರಿಯ ಮುಖಂಡ ವೀರಭದ್ರಾಚಾರ್, ಸಂಘದ ಗೌರವಾಧ್ಯಕ್ಷ ನಾಗರಾಜಚಾರ್, ಅಧ್ಯಕ್ಷ ಎಂ.ವಿ.ಅರುಣ್ ಕುಮಾರ್, ಉಪಾಧ್ಯಕ್ಷ ಯೋಗಾಚಾರ್, ಕಾರ್ಯದರ್ಶಿ ತೇಜಕುಮಾರ್, ಸಹ ಕಾರ್ಯದರ್ಶಿ ಎ.ಇ.ಪ್ರಸಾದ್, ಖಜಾಂಚಿ ಸುಂದ್ರೇಶಚಾರ್, ಸಂಚಾಲಕ ಸಣ್ಣ ಸ್ವಾಮಾಚಾರ್, ಸಂಘಟನಾ ಕಾರ್ಯದರ್ಶಿ ಪ್ರಕಾಶ್, ಮುಖಂಡರಾದ ಕೆಸ್ತೂರು ಶೇಖರ್, ವೇಣುಗೋಪಾಲ್, ಹೆಚ್.ಕೆ. ಸುಜಯ್, ರಮೇಶ್, ವೆಂಕಟೇಶ್, ಸಿ.ವಿ. ಮೋಹನ್‌ಕುಮಾರ್, ಮೂರ್ತಿ ಇನ್ನಿತರರಿದ್ದರು.

ನಾಳೆ ಮೈಸೂರು ರಂಗಾಯಣಕ್ಕೆ ಮುತ್ತಿಗೆ ಹಾಕಲು ತೀರ್ಮಾನ



ತಿ.ನರಸೀಪುರ ಜ.8– ಮೈಸೂರಿನ ರಂಗಾಯಣದಲ್ಲಿ ಪ್ರದರ್ಶನಗೊಂಡ ನಾಟಕದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕುರಿತು ಅವಹೇಳನಕಾರಿ ಸಂಭಾಷಣೆ ಬಳಸಿರುವುದನ್ನು ಖಂಡಿಸಿ ಜ.10ರಂದು ರಂಗಾಯಣ ಮುತ್ತಿಗೆ ಹಾಕಲು ತೀರ್ಮಾನಿಸಿದ್ದು, ಕಾಂಗ್ರೆಸ್ ಕಾರ್ಯಕರ್ತರು, ಸಮುದಾಯದ ಮುಖಂಡರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ತಿ.ನರಸೀಪುರ ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆಹುಂಡಿ ಮಹೇಶ್ ಮನವಿ ಮಾಡಿದ್ದಾರೆ.

ಪಟ್ಟಣದ ತಾಲೂಕು ಕುರುಬರ ಸಂಘದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪನವರ ಪ್ರತಿ ನಡೆಯು ಕೋಮು ಸಂಘರ್ಷಕ್ಕೆ ಕಾರಣವಾಗುತ್ತಿದೆ. ಸರ್ಕಾರದ ಸಂಸ್ಥೆಯಾದ ರಂಗಾಯಣವನ್ನು ತಮ್ಮ ದುರುದ್ದೇಶಕ್ಕೆ ಬಿಜೆಪಿ ಹಾಗೂ ಆರ್‌ಎಸ್‌ಎಸ್ ರಹಸ್ಯ ಕಾರ್ಯಸೂಚಿಗಳ ಜಾರಿಗೆ ಬಳಸಿಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರರ ಸಾಂಬಶಿವ ಪ್ರಹಸನ ನಾಟಕವನ್ನು ಕಾರ್ತಿಕ್ ಉಪಮನ್ಯು ನಿರ್ದೇಶನದಲ್ಲಿ 'ನಾಗರತ್ನಮ್ಮ' ರಂಗ ಕಾರ್ಯಾಗಾರದ ಶಿಬಿರಾರ್ಥಿಗಳು ಡಿ.31ರಂದು ಪ್ರದರ್ಶಿಸುತ್ತಿದ್ದರು. ಈ ನಾಟಕದಲ್ಲಿ ಕೆಲವು ಅಂಶಗಳನ್ನು ತಿರುಚಿ ಸಿದ್ದರಾಮಯ್ಯನವರನ್ನು ಹೀಯಾಳಿಸಲಾಗಿದೆ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನೂ ಗೇಲಿ ಮಾಡಲಾಗಿದೆ ಎಂದರು. ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು ಮಾತನಾಡಿ, ಅನ್ನಭಾಗ್ಯ, ಕ್ಷೀರಭಾಗ್ಯ, ಶಾದಿ ಭಾಗ್ಯಗಳನ್ನು ಕೊಟ್ಟು ಜನರನ್ನು ಅವರು ಸೋಂಬೇರಿಗಳನ್ನಾಗಿ ಮಾಡಿದರು. ಅದೇ ರೀತಿ ಕಳ್ಳತನ ಭಾಗ್ಯವನ್ನು ನೀಡಬೇಕಾಗಿತ್ತು ಎನ್ನುವ ಸಂಭಾಷಣೆಯನ್ನು ರಂಗದ ಮೇಲೆ ಪ್ರಸ್ತುತಪಡಿಸಲಾಗಿತ್ತು. ಕಾರ್ಯಕ್ರಮಗಳಲ್ಲಿ ನಿದ್ರೆ ಹೊಡೆಯುವುದು, ಗೊರಕೆ ಹೊಡೆದು ಅವರಿಂದ ರಾಜ್ಯವೇ ಹಾಳಾಗಿದೆ. ನಿಮಗೆ ಈ ಬಾರಿ ಬಾದಾಮಿಯೂ ಕೂಡ ಸಿಗುವುದಿಲ್ಲ ಎಂದು ಸೇವಕನ ಪಾತ್ರಧಾರಿಯಿಂದ ನಾಟಕದಲ್ಲಿ ಹೇಳಿಸಲಾಗಿದೆ ಎಂದು ಆರೋಪಿಸಿದರು.

ಮೈಸೂರು ಮಿತ್ರ ಸೋಮವಾರ 9 ಜನವರಿ 2023

ಕಾಡಿಗೆ ಅಕ್ರಮವಾಗಿ ನುಗ್ಗಿ ಕಾಡು ಕುರಿ ಬೇಟೆಯಾಡಿದ್ದ ನಾಲ್ವರ ಸೆರೆ

ಬೇಟೆಗೆ ಬಂದೂಕು ನೀಡಿದವನು ಆರೋಪಿ



ಮಡಿಕೇರಿ, ಜ.8– ಮೂರ್ನಾಡು ಸಮೀಪದ ಮುತ್ತಾರ್‌ಮುಡಿ ಗ್ರಾಮದಲ್ಲಿರುವ ಸಂರಕ್ಷಿತ ಭದ್ರಕಾಳಿ ದೇವರ ಕಾಡಿಗೆ ಅಕ್ರಮ ಪ್ರವೇಶ ಮಾಡಿ 2 ಹೆಣ್ಣು ಕಾಡು ಕುರಿಗಳನ್ನು ಗುಂಡಿಕ್ಕಿ ಹತ್ಯೆ ಮಾಡಿದ 4 ಮಂದಿ ಆರೋಪಿಗಳನ್ನು ಮಡಿಕೇರಿ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ಕಾಫಿ ಕೆಲಸಕ್ಕಾಗಿ ಮುತ್ತಾರ್‌ಮುಡಿಗೆ ಬಂದಿರುವ ತಮಿಳುನಾಡಿನ ಸೇಲಂ ಜಿಲ್ಲೆ ಅತ್ತೂರು ನಿವಾಸಿಗಳಾದ ಜಯರಾಮ್, ಮಥಾಯಂ, ಅಶೋಕ್ ಮತ್ತು ಮುತ್ತಾರ್‌ಮುಡಿ ಗ್ರಾಮ ನಿವಾಸಿ ತಮ್ಮಯ್ಯ ಎಂಬುವರೇ ಬಂಧಿತ ಆರೋಪಿಗಳು.

ಘಟನೆ ಹಿನ್ನೆಲೆ: ಶನಿವಾರ ರಾತ್ರಿ ಮಡಿಕೇರಿ ವಲಯಕ್ಕೆ ಸೇರಿದ ಮುತ್ತಾರ್‌ಮುಡಿ ಗ್ರಾಮದ ಭದ್ರಕಾಳಿ ದೇವರ ಕಾಡಿಗೆ ತಂಡವೊಂದು ಬೇಟೆಗೆ ತೆರಳಿರುವ ಕುರಿತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ಮಡಿಕೇರಿ ವಿಭಾಗದ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ 3 ಮಂದಿ ಬೇಟೆಗಾರರನ್ನು ಬಂಧಿಸಿದ್ದಾರೆ. ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದ ಸಂದರ್ಭ ಅಲ್ಲಿನ ನಿವಾಸಿ ತಮ್ಮಯ್ಯ ಎಂಬವರ ಬಂದೂಕು ಬಳಸಿ 2 ಹೆಣ್ಣು ಕಾಡುಕುರಿಗಳನ್ನು ಬೇಟೆಯಾಡಿರುವುದಾಗಿ ಮಾಹಿತಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಕಾಡು ಪ್ರಾಣಿ ಬೇಟೆಗೆ ಬಂದೂಕು ನೀಡಿದ ಆರೋಪದಲ್ಲಿ ತಮ್ಮಯ್ಯ ಅವರನ್ನು ಭಾನುವಾರ ಬೆಳಗ್ಗೆ ಅರಣ್ಯ ಅಧಿಕಾರಿಗಳು ಬಂಧಿಸಿದ್ದಾರೆ.

ಆರೋಪಿಗಳ ಬಳಿಯಿಂದ ಕೃತ್ಯಕ್ಕೆ ಬಳಸಿದ್ದ ಒಂಟಿ ನಳಿಗೆಯ ಒಂದು ಕೋವಿ, ಬಳಕೆಯಾಗಿರುವ 1 ಕಾಡತೂಸು ಮತ್ತು 2 ಹೆಣ್ಣು ಕಾಡು ಕುರಿಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತ 4 ಮಂದಿ ಆರೋಪಿಗಳ ವಿರುದ್ಧ ವನ್ಯ ಜೀವಿ ಸಂರಕ್ಷಣಾ ಕಾಯಿದೆ ಅಡಿ ಪ್ರಕರಣ ದಾಖಲಿಸಲಾಗಿದ್ದು, ಎಲ್ಲಾ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಡಿಎಫ್‌ಓ ಎ.ಟಿ. ಪೂವಯ್ಯ ಮಾರ್ಗದರ್ಶನದಲ್ಲಿ ಎಸಿಎಫ್ ಮೊಹಿಸಿನ್ ಬಾಷಾ, ಆರ್‌ಎಫ್‌ಓ ಹನುಮಂತ್ ರಾಜು, ಡಿಆರ್‌ಎಫ್‌ಓ ಮಲ್ಲಯ್ಯ ಹಿರೇಮಠ, ಯತೀಶ್, ಸಿಬ್ಬಂದಿಗಳಾದ ಭವ್ಯ, ವಾಸುದೇವ್, ಸಂಜು, ಮೋಹನ್, ಶರತ್, ನಿಖಿಲ್, ತಿಮ್ಮಯ್ಯ, ಚಂದ್ರು ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಹಿಂದೂ ದೇವರುಗಳನ್ನು ಅವಹೇಳನ ಮಾಡುತ್ತಾ ಮತಾಂತರಕ್ಕೆ ಪ್ರೇರೇಪಿಸುತ್ತಿದ್ದ ನೌಕರನ ಬಂಧನ

ಹಿಂದೂ ಜಾಗರಣಾ ವೇದಿಕೆ ಪ್ರಮುಖರ ಕಾರ್ಯಾಚರಣೆ

ಮಡಿಕೇರಿ, ಜ.8– ಹಿಂದೂ ದೇವರುಗಳನ್ನು ಅವಹೇಳನ ಮಾಡುತ್ತಾ ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವಂತೆ ಪ್ರೇರೇಪಿಸುತ್ತಿದ್ದ ಆರೋಪದಲ್ಲಿ ಸರಕಾರಿ ನೌಕರನನ್ನು ಹಿಂದೂ ಜಾಗರಣಾ ವೇದಿಕೆ ಪ್ರಮುಖರು ಸೆರೆ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಮಡಿಕೇರಿಯಲ್ಲಿ ನಡೆದಿದೆ.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತರಬೇತಿ ಕೇಂದ್ರದಲ್ಲಿ ಪ್ರಥಮ ದರ್ಜೆ ಗುಮಾಸ್ತನಾಗಿ ಕರ್ತವ್ಯದಲ್ಲಿರುವ ನಿಶಾಂತ್ ಎಂಬಾತನೇ ಬಂಧಿತ ಆರೋಪಿ. ಆರೋಪಿ ನಿಶಾಂತ್ ನಗರದ ಜನರಲ್ ತಿಮ್ಮಯ್ಯ ವೃತ್ತದ ಬಳಿ ಇರುವ ಬಸ್ ತಂಗುದಾಣದಲ್ಲಿದ್ದ ಮಕ್ಕಳು, ಮಹಿಳೆಯರು ಹಾಗೂ ವಯೋವೃದ್ಧರ ಬಳಿ ತೆರಳಿ ಬೆಳಕು ಎಂಬ ಪುಸ್ತಕ ನೀಡಿ ಕ್ರೈಸ್ತ ಧರ್ಮಕ್ಕೆ ಮತಾಂತರ ಆಗುವಂತೆ ಪ್ರೇರೇಪಿಸುತ್ತಿದ್ದ ಎನ್ನಲಾಗಿದೆ.

ಈ ವೇಳೆ ಸ್ಥಳದಲ್ಲಿದ್ದ ಹಿಂದೂ ಜಾಗರಣ ವೇದಿಕೆಯ ಪ್ರಮುಖರಾದ ಸತ್ಯ ಕರ್ಕೇರ, ಜಿತಿನ್ ಮತ್ತು ರಾಜೇಶ್ ಅವರುಗಳು ಆತನನ್ನು ವಿಚಾರಿಸಿದಾಗ ಆತ ತಾನೊಬ್ಬ ಸರಕಾರಿ ನೌಕರ ಎಂದು ಹೇಳಿದ್ದಾನೆ. ಆತನನ್ನು ಪರಿಶೀಲಿಸಿದಾಗ ಬೆಳಕು ಎಂಬ 15 ಪುಸ್ತಕಗಳು ದೊರೆತಿದೆ. ಬಳಿಕ ನಿಶಾಂತ್‌ನನ್ನು ನಗರ ಪೊಲೀಸ್ ಠಾಣೆಗೆ ಕರೆತಂದು ಪೊಲೀಸರಿಗೆ ಒಪ್ಪಿಸಿದ್ದಾರೆ. ಹಿಂದೂ ಜಾಗರಣಾ ವೇದಿಕೆ ಪ್ರಮುಖ್ ಕುಮಾರ್ ಎಂಬವರು ನಿಶಾಂತ್ ವಿರುದ್ಧ ಬಲವಂತದ ಮತಾಂತರ ಕುರಿತು ದೂರು ನೀಡಿದ್ದಾರೆ. ಮಡಿಕೇರಿ ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ನಿಶಾಂತ್‌ನನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಹೃದಯಾಘಾತಕ್ಕೆ ಬಾಲಕ ಬಲಿ

ಎರಡು ಬಾರಿ ಜೋರಾಗಿ ಕಿರುಚಿಕೊಂಡ, ಆಸ್ಪತ್ರೆಗೆ ಕರೆತರುವಷ್ಟರಲ್ಲಿ ಸಾವು



ಮಡಿಕೇರಿ, ಜ.8– ಹೃದಯಾಘಾತ ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಖಾಯಿಲೆಯಂತಾಗಿ ಬಿಟ್ಟಿದೆ. ಆದರೆ ಅದು ಮಕ್ಕಳ ಮೇಲೂ ಪರಿಣಾಮ ಬೀರಿದ್ದು, ಬಾಲಕನೋರ್ವ ಹೃದಯಾಘಾತಕ್ಕೆ ಬಲಿಯಾಗಿರುವ ಘಟನೆ ವರದಿಯಾಗಿದೆ.

ಕುಶಾಲನಗರ ಕೂಡು ಮಂಗಳೂರು ಗ್ರಾಮದ ನಿವಾಸಿ ಮಂಜಾಚಾರಿ ಎಂಬುವರ ಪುತ್ರ ಕೊಪ್ಪ ಭಾರತ್ ಮಾತಾ ಶಾಲೆಯಲ್ಲಿ 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಕೀರ್ತನ್(12) ಎಂಬಾತನೇ ಹೃದಯಾಘಾತದಿಂದ ಸಾವನ್ನಪ್ಪಿದ ಬಾಲಕ. ಎಂದಿನಂತೆ ಶನಿವಾರ ರಾತ್ರಿ ಮಲಗಿದ್ದ ಕೀರ್ತನ್ ತಡರಾತ್ರಿ 2 ಬಾರಿ ಜೋರಾಗಿ ಕಿರುಚಿಕೊಂಡಿದ್ದಾನೆ. ಇದರಿಂದ ಗಾಬರಿಯಾದ ಪೋಷಕರು ಕೀರ್ತನ್‌ನನ್ನು ತಕ್ಷಣ ಕುಶಾಲನಗರ ಆಸ್ಪತ್ರೆಗೆ ಕರೆತರುವ ವೇಳೆ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ. ಮೃತ ಕೀರ್ತನ್ ವ್ಯಾಸಂಗ ಮಾಡುತ್ತಿದ್ದ ಶಾಲೆಯಲ್ಲಿ ಆತನ ತಂದೆ ಮಂಜಾಚಾರಿ ಅವರು ಶಾಲಾ ಬಸ್ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕೊಹಿನೂರು ರಸ್ತೆ ಬದಿ ಬಾಡಿಗೆ ಲಾರಿಗಳ ನಿಲುಗಡೆಯಿಂದ ಜನರ ಓಡಾಟಕ್ಕೆ ತೊಂದರೆ

- ವರ್ತಕರು, ಹೋಟೆಲ್ ಉದ್ಯಮಿಗಳಿಂದ ಜಿಲ್ಲಾಡಳಿತ, ಪೊಲೀಸ್ ಇಲಾಖೆಗೆ ದೂರು
- ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಮನವಿ

ಮಡಿಕೇರಿ, ಜ.8– ಮಡಿಕೇರಿ ನಗರದ ಕೊಹಿನೂರು ರಸ್ತೆಯ ಬದಿಯಲ್ಲಿ ಬಾಡಿಗೆ ಲಾರಿಗಳನ್ನು ನಿಲ್ಲಿಸುತ್ತಿರುವುದರಿಂದ ಸಮೀಪದ ವ್ಯಾಪಾರಿಗಳಿಗೆ ಹಾಗೂ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಲಾರಿಗಳ ನಿಲುಗಡೆಗೆ ಪರ್ಯಾಯ ವ್ಯವಸ್ಥೆ ಸೂಚಿಸಬೇಕೆಂದು ಒತ್ತಾಯಿಸಿ ಸ್ಥಳೀಯ ವರ್ತಕರು ಹಾಗೂ ಹೊಟೇಲ್ ಉದ್ಯಮಿಗಳು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಿದ್ದಾರೆ.

ಜನನಿಬಿಡ ಪ್ರದೇಶವಾಗಿರುವ ಕೊಹಿನೂರು ರಸ್ತೆಯಲ್ಲಿ ಲಾರಿಗಳನ್ನು ನಿಲುಗಡೆಗೊಳಿಸುತ್ತಿರುವುದರಿಂದ ಇಲ್ಲಿನ ವಾಣಿಜ್ಯ ಮಳಿಗೆ, ಅಂಗಡಿ, ಹೊಟೇಲ್ ವ್ಯಾಪಾರಕ್ಕೆ ಅಡಚಣೆಯಾಗುತ್ತಿದೆ. ಪ್ರವಾಸಿಗರು ವಾಹನ ನಿಲುಗಡೆಗೆ ಹರಸಾಹಸ ಪಡುತ್ತಿದ್ದಾರೆ. ಅಲ್ಲದೆ ಇಲ್ಲಿ ಸಾರ್ವಜನಿಕ ಶೌಚಾಲಯವೂ ಇದ್ದು, ಇದನ್ನು ಬಳಸಲು ಸಾರ್ವಜನಿಕರಿಗೆ ಅಡಚಣೆಯಾಗುತ್ತಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ನಗರಸಭೆಯಿಂದ ಬಾಡಿಗೆ ವಾಹನಗಳ ನಿಲುಗಡೆಗೆ ನೂತನ ಖಾಸಗಿ ಬಸ್ ನಿಲ್ದಾಣದ ಸಮೀಪ ಸ್ಥಳ ಸೂಚಿಸಿ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಬಾಡಿಗೆ ಲಾರಿಗಳನ್ನು ಇಲ್ಲಿ ನಿಲುಗಡೆಗೊಳಿಸಲು ಸೂಚನೆ ನೀಡಬೇಕೆಂದು ವರ್ತಕರು ಮನವಿಯಲ್ಲಿ ತಿಳಿಸಿದ್ದಾರೆ.

ಲಾರಿ ಮಾಲೀಕರು ಮತ್ತು ಚಾಲಕರ ಸಂಘ ಕೂಡ ಸಾರ್ವಜನಿಕರು ಹಾಗೂ ವರ್ತಕರ ಮನವಿಗೆ ಸ್ಪಂದಿಸಿ ನಿಲ್ದಾಣವನ್ನು ಸ್ಥಳಾಂತರಗೊಳಿಸಿ ಸಹಕರಿಸಬೇಕೆಂದು ವರ್ತಕರು ಕೋರಿಕೊಂಡಿದ್ದಾರೆ. ಲಾರಿ ನಿಲ್ದಾಣವನ್ನು ಸ್ಥಳಾಂತರಿಸಲು ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ಸ್ಥಳೀಯ ಶಾಸಕರು ಹಾಗೂ ನಗರಸಭೆಯ ಆಡಳಿತ ಮಂಡಳಿ ಪ್ರವಾಸೋದ್ಯಮವನ್ನೇ ನಂಬಿ ಜೀವನ ಸಾಗಿಸುತ್ತಿರುವವರಿಗೆ ಅಗತ್ಯ ಸಹಕಾರ ನೀಡಬೇಕೆಂದು ಮನವಿ ಮಾಡಿದ್ದಾರೆ.

ಸ್ಥಳೀಯ ವರ್ತಕರು ಸಹಿ ಮಾಡಿರುವ ಮನವಿ ಪತ್ರವನ್ನು ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸಲ್ಲಿಸಲಾಗಿದೆ.

ಪಠ್ಯೇತರ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲ



ನಾಪೋಕ್ಲು, ಜ.8– ವಿದ್ಯಾಸಂಸ್ಥೆಗಳು ವಿದ್ಯಾರ್ಥಿಗಳ ಮತ್ತು ಪೋಷಕರ ನಿರೀಕ್ಷೆಯನ್ನು ಹುಸಿಗೊಳಿಸದೆ ಮಕ್ಕಳ ಭವಿಷ್ಯವನ್ನು ರೂಪಿಸುವುದೇ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತರಾಗಿದ್ದೇವೆ ಎಂದು ಸ್ಥಳೀಯ ಅಂಕುರ್ ಪಬ್ಲಿಕ್ ಶಾಲೆಯ ಕಾರ್ಯದರ್ಶಿ ರತ್ನ ಚರ್ಮನ ತಿಳಿಸಿದರು.

ಶನಿವಾರ ಅಂಕುರ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಏರ್ಪಡಿಸಲಾಗಿದ್ದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಪಾಠದ ಜೊತೆ ವಿವಿಧ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲಾಗುತ್ತಿದೆ. ಇದರಿಂದ ಮಕ್ಕಳ ಉಜ್ವಲ ಭವಿಷ್ಯಕ್ಕೆ ಸಹಕಾರಿಯಾಗಲಿದೆ ಎಂದರು.

ಸಮಾರಂಭವನ್ನು ಸಂಸ್ಥೆಯ ಅಧ್ಯಕ್ಷ ಕೇಟೋಳಿರ ರಾಜಾ ಚರ್ಮಣ ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಶಾಲಾ ಟ್ರಸ್ಟಿ ಕಾಮೆಂಡ ಕಂಬಯ್ಯ, ನಿವೃತ್ತ ಪ್ರಾಂಶುಪಾಲ ಪ್ರೊ. ಕಲ್ಯಾಟಂಡ ಪೂಣಚ್ಚ, ಪೆಮ್ಮುಡಿಯಂಡ ಅಪ್ಪಣ್ಣ, ಮುಕ್ಕಾಟಿರ ವಿನಯ್, ಕುಂಡಿಯೋಳಂಡ ಗಣೇಶ್ ಮುತ್ತಪ್ಪ, ಬಡುವಂಡ್ರ ಅರುಣ್ ಅಪ್ಪಚ್ಚು, ಮುಂಡಂಡ ಜಯಕುಮಾರ್, ಕೇಟೋಳಿರ ಗಾಯನ್ ಗೌರಮ್ಮ, ಕನ್ನಂಬೀರ ಸುಧಿ ತಿಮ್ಮಯ್ಯ ಸೇರಿದಂತೆ ಪೋಷಕರು, ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.

ವಿದ್ಯಾರ್ಥಿ ನಾಯಕಿ ದೇಚಮ್ಮ ಸ್ವಾಗತಿಸಿದ ಕಾರ್ಯಕ್ರಮದಲ್ಲಿ ಬೊಳ್ಳಪಂಡ ಆಶಾ ಬೋಪಣ್ಣ ಮತ್ತು ಬಲ್ಯಾಟಂಡ ಡಿಶ್ಮ ಕುಟ್ಟಯ್ಯ ನಿರೂಪಿಸಿದರು. ವಿದ್ಯಾರ್ಥಿ ನಾಯಕ ಮನವಟ್ಟಿರ ಜೀವಿತ್ ಬೆಳ್ಯಪ್ಪ ವರದಿ ವಾಚಿಸಿ ವಂದಿಸಿದರು. ಈ ಸಂದರ್ಭದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಗಣ್ಯರು ಬಹುಮಾನ, ಅರ್ಹತಾ ಪತ್ರವನ್ನು ವಿತರಿಸಿ ಶುಭ ಹಾರೈಸಿದರು. ಬಳಿಕ ಭವ್ಯ ವೇದಿಕೆಯಲ್ಲಿ ವಿದ್ಯಾರ್ಥಿಗಳಿಂದ ವಿವಿಧ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿ ಸಭಿಕರನ್ನು ರಂಜಿಸಿತು.

ಇಂದು ಬಸ್ ನಿಲ್ದಾಣ ಉದ್ಘಾಟನೆ

ಮಡಿಕೇರಿ, ಜ.8– ಸೋಮವಾರಪೇಟೆ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಜಯಂತ್ಯೋತ್ಸವ ಸಮಿತಿ ವತಿಯಿಂದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಬಸ್ ನಿಲ್ದಾಣ ಉದ್ಘಾಟನೆ ಮತ್ತು ಗುರುವಂದನಾ ಕಾರ್ಯಕ್ರಮವು ಜ.9 ರಂದು ನಡೆಯಲಿದೆ.

ಅಂದು ಬೆಳಗ್ಗೆ 9 ಗಂಟೆಗೆ ಜೆ.ಸಿ. ವೇದಿಕೆಯಿಂದ ವಿವಿಧ ಕಲಾ ತಂಡಗಳು ಹಾಗೂ ಪೂರ್ಣ ಕುಂಭ ಕಳಸಗಳೊಂದಿಗೆ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಭಾವಚಿತ್ರ ಮೆರವಣಿಗೆ ನಡೆಯಲಿದೆ. ನಂತರ ಬೆಳಗ್ಗೆ 10 ಗಂಟೆಗೆ ಆನೆಕೆರೆ ಸಮೀಪ ನಿರ್ಮಿಸಿರುವ ಬಸ್ಸು ನಿಲ್ದಾಣ ಉದ್ಘಾಟನೆ ನಡೆಯಲಿದೆ. ಬಳಿಕ ಬೆಳಗ್ಗೆ 11 ಗಂಟೆಗೆ ಸಾಕ್ಷಿ ಕನ್ವೆನ್ಷನ್ ಸಭಾಂಗಣದಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಲಿದೆ. ಪರಮ ಪೂಜ್ಯ ಸ್ವಾಮೀಜಿಗಳು ಹಾಗೂ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ವಾಮಾಚಾರಕ್ಕಾಗಿ ಗೂಬೆ ಸಾಗಣೆ: ಇಬ್ಬರ ಬಂಧನ





ಕೊಳ್ಳೇಗಾಲ, ಜ.8– ವಾಮಾಚಾರಕ್ಕಾಗಿ ಬಿಳಿಗಿರಿರಂಗನಬೆಟ್ಟದ ಸಮೀಪದ ಗ್ರಾಮಕ್ಕೆ ಗೂಬೆಯೊಂದನ್ನು ಕೊಂಡೊಯ್ಯುತ್ತಿದ್ದ ಇಬ್ಬರನ್ನು ಬಂಧಿಸಿ ಕೊಳ್ಳೇಗಾಲ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಜೀವಂತ ಗೂಬೆಯನ್ನು ರಕ್ಷಿಸಿದ್ದಾರೆ.

ಕೆ.ಆರ್.ಪೇಟೆ ತಾಲೂಕು ಹೊನ್ನನಹಳ್ಳಿ ಗ್ರಾಮದ ಪುಟ್ಟರಾಜು (36) ಹಾಗೂ ಮಂಡ್ಯ ಜಿಲ್ಲೆ ಯಡಹಳ್ಳಿ ಗ್ರಾಮದ ಹರೀಶ (45) ಬಂಧಿತರು. ಆರೋಪಿಗಳು ಶನಿವಾರ ರಾತ್ರಿ ಸತ್ತಿಗಾಲ ಸಮೀಪ ಬೈಕ್‌ನಲ್ಲಿ ಬಿಳಿಗಿರಿರಂಗನ ಬೆಟ್ಟದ ಕಡೆಗೆ ಗೂಬೆಯೊಂದನ್ನು ಹಸಿರು ಪ್ಲಾಸ್ಟಿಕ್ ಕ್ರೇಟ್‌ನಲ್ಲಿ ಇಟ್ಟು ಸಾಗಿಸುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಸಂಚಾರಿ ದಳದ ಪಿಎಸ್‌ಐ ವಿಜಯ ರಾಜ್, ಮುಖ್ಯ ಪೇದೆ ರಾಮಚಂದ್ರ ಸ್ವಾಮಿ, ತಖೀವುಲ್ಲ, ಬಸವರಾಜು, ಎಂ. ಬಸವರಾಜ್, ಶಂಕರ್, ಪೇದೆ ಪ್ರಭಾಕರ್ ಇನ್ನಿತರರು ಕಾರ್ಯಾಚರಣೆ ನಡೆಸಿ ಬೈಕ್ ಸಮೇತ ಇಬ್ಬರು ಆರೋಪಿಗಳು ಹಾಗೂ 2 ಮೊಬೈಲ್ ಇನ್ನಿತರೆ ವಸ್ತುಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮಕ್ಕಾಗಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ಅಪ್ರಾಪ್ತೆ ಅಪಹರಿಸಿ ದೌರ್ಜನ್ಯವೆಸಗಿದ್ದ ಯುವಕನ ಬಂಧನ

ಚಾಮರಾಜನಗರ, ಜ.8– ಅಪ್ರಾಪ್ತೆಯನ್ನು ಅಪಹರಿಸಿ, ಆಕೆಯ ಮೇಲೆ ದೌರ್ಜನ್ಯ ಎಸಗಿದ ಆರೋಪದಡಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಯುವಕನೊಬ್ಬನನ್ನು ನಗರದ ಗ್ರಾಮಾಂತರ ಠಾಣೆಯ ಪೊಲೀಸರು ಬಂಧಿಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ನಾಗಮಂಗಲ ತಾಲೂಕಿನ ಸಾಗರ್ (23) ಬಂಧಿತ. ಸಾಗರ್ ಹಾಗೂ ಬಾಲಕಿ ಇನ್‌ಸ್ಟಾಗ್ರಾಂ ಮೂಲಕ ಪರಿಚಯ ಹೊಂದಿದ್ದರು. ಮಂಡ್ಯದಿಂದ ಜಿಲ್ಲೆಗೆ ಬಂದಿದ್ದ ಯುವಕ ಬಾಲಕಿಯನ್ನು ಕರೆದುಕೊಂಡು ಹೋಗಿ ವಿವಿಧ ಕಡೆಗಳಲ್ಲಿ ಸುತ್ತಾಡಿಸಿದ್ದ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಅಪಹರಣ, ಪೋಕ್ಸೊ ಹಾಗೂ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದರು. ಗ್ರಾಮಾಂತರ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ರಾಜೇಂದ್ರ ನೇತೃತ್ವದ ತಂಡ ಮಂಡ್ಯ ಜಿಲ್ಲೆಗೆ ತೆರಳಿ ಶುಕ್ರವಾರ ಆರೋಪಿಯನ್ನು ಬಂಧಿಸಿ ಕರೆತಂದಿದೆ. ಆರೋಪಿ ಈಗ ನ್ಯಾಯಾಂಗ ಬಂಧನದಲ್ಲಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಟೋಗೆ ಲಾರಿ ಡಿಕ್ಕಿ: ನಾಲ್ವರಿಗೆ ತೀವ್ರ ಗಾಯ



ಬೇಗೂರು(ಗುಂಡ್ಲುಪೇಟೆ), ಜ.8– ಸಮೀಪದ ಅರೇಪುರ ಗೇಟ್‌ನ ರಾಷ್ಟ್ರೀಯ ಹೆದ್ದಾರಿ (766)ಯಲ್ಲಿ ಬಳಿ ಲಾರಿಯೊಂದು ಆಟೋಗೆ ಡಿಕ್ಕಿ ಹೊಡೆದು ನಾಲ್ವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಸಂಭವಿಸಿದೆ

ಮೈಸೂರಿನಿಂದ ಗುಂಡ್ಲುಪೇಟೆ ಕಡೆಗೆ ಬಣ್ಣದ ಕೆಲಸಕ್ಕೆಂದು ಆಟೋವೊಂದರಲ್ಲಿ ತೆರಳುತ್ತಿದ್ದ ಸಂದರ್ಭದಲ್ಲಿ ಕೇರಳ ಕಡೆಯಿಂದ ಬರುತ್ತಿದ್ದ ಲಾರಿಯೊಂದು ಬ್ರೇಕ್ ವೈಫಲ್ಯಗೊಂಡ ಕಾರಣ ಚಾಲಕನ ನಿಯಂತ್ರಣ ತಪ್ಪಿ ಬೇಗೂರು ಸಮೀಪದ ಅರೇಪುರ ಗೇಟ್ ಬಳಿ ಡಿಕ್ಕಿ ಹೊಡೆದಿದೆ. ಇದರಿಂದ ಆಟೋದಲ್ಲಿದ್ದ ಅರುಣ್(28), ಶರವಣ(30), ಕೃಷ್ಣ (32), ದರ್ಶನ್ (26) ಅವರುಗಳು ತ್ರೀವ್ರವಾಗಿ ಗಾಯಗೊಂಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಬೇಗೂರು ಪೊಲೀಸರು ಗಾಯಾಳುಗಳನ್ನು ಬೇಗೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸೇರಿಸಲಾಗಿದೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುಂಡ್ಲುಪೇಟೆ ತಾಲೂಕಿನಲ್ಲಿ ಮಳೆಯಿಂದ ಅಂತರ್ಜಲ ಮಟ್ಟ ಸುಧಾರಣೆ

ಗುಂಡ್ಲುಪೇಟೆ, ಜ.8– ದೇವರ ಕೃಪೆ ಹಾಗೂ ಆಶೀರ್ವಾದದಿಂದ ಈ ಬಾರಿ ಉತ್ತಮ ಮಳೆ ಬಿದ್ದ ಪರಿಣಾಮ ಕುಸಿದಿದ್ದ ತಾಲೂಕಿನ ಅಂತರ್ಜಲ ಮಟ್ಟ ಉತ್ತಮವಾಗುತ್ತಿದೆ ಎಂದು ಶಾಸಕ ಸಿ.ಎಸ್.ನಿರಂಜನ ಕುಮಾರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಹೊರವಲಯದಲ್ಲಿರುವ ವಿಜಯಪುರ ಅಮಾನಿಕೆರೆ (ದೊಡ್ಡಕೆರೆ)ಗೆ ಬಾಗಿನ ಸಮರ್ಪಿಸಿ ಮಾತನಾಡಿದ ಅವರು, ಈ ಬಾರಿ ಕೆರೆಗಳಿಗೆ ನದಿನೀರು ತುಂಬಿಸಿದ್ದರಿಂದ ತಾಲೂಕಿನ ಎಲ್ಲಾ ಕೆರೆಗಳೂ ತುಂಬಿ ಹರಿದು ಕೋಡಿಬೀಳುತ್ತಿವೆ. ಕಲ್ಲುಕಟ್ಟೆ ಜಲಾಶಯ, ವಿಜಯಪುರ ಅಮಾನಿಕೆರೆ ಹಾಗೂ ಚಿಕ್ಕಕೆರೆಗಳಿಗೆ ನೀರು ತುಂಬಿದ್ದರಿಂದ ಹಲವು ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗಿದೆ. ಉತ್ತಮ ಮಳೆಯಿಂದ ಹಲವಾರು ವರ್ಷಗಳಿಂದ ಪಾತಾಳಕ್ಕೆ ಕುಸಿದಿದ್ದ ಅಂತರ್ಜಲ ಮಟ್ಟದಲ್ಲಿ ತುಂಬಾ ಸುಧಾರಣೆ ಕಾಣುತ್ತಿದ್ದು ತಾಲೂಕು ಸಮೃದ್ಧಿಯತ್ತ ಸಾಗುತ್ತಿದೆ ಎಂದು ಅವರು ನುಡಿದರು.

ವಿಜಯಪುರದ ದೊಡ್ಡಕೆರೆಗೆ ಶಾಸಕ ನಿರಂಜನ್‌ಕುಮಾರ್ ಬಾಗಿನ



ಎಷ್ಟೇ ಆಳಕ್ಕೆ ಕೊರೆಸಿದರೂ ನೀರು ಸಿಗದಂತಾಗಿದ್ದ ರೈತರ ಜಮೀನುಗಳಲ್ಲಿ ಸಮೃದ್ಧವಾದ ನೀರು ದೊರಕುತ್ತಿರುವುದು ರೈತಾಪಿ ಜನರ ಸಂತಸಕ್ಕೆ ಕಾರಣವಾಗಿದೆ. ಚಿಕ್ಕಕೆರೆಗೆ ನೀರು ತುಂಬಿದ್ದರಿಂದ ಗುಂಡ್ಲು ಮಾರ್ಗದಲ್ಲಿ ನಲ್ಲೂರು ಅಮಾನಿಕೆರೆಗೆ ನೀರು ತುಂಬಿಸಲು ಕ್ರಮಕೈಗೊಳ್ಳಲಾಗಿದೆ. ಬರಪೀಡಿತವಾಗಿದ್ದ ತಾಲೂಕು ಸಮೃದ್ಧಿ ಕಾಣುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್.ಮಲ್ಲೇಶ್, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಸದಸ್ಯರಾದ ಬಸವರಾಜು, ಶಶಿಧರ್‌ದೀಪು, ಸಿದ್ದಯ್ಯ, ಕಿರಣ್ ಗೌಡ, ಬಿಜೆಪಿ ಮಂಡಲಾಧ್ಯಕ್ಷ ಜಗದೀಶ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರಣಯ್, ಮುಖಂಡರಾದ ನಾಗರಾಜಪ್ಪ, ಮಾಡ್ರಹಳ್ಳಿ ನಾಗೇಂದ್ರ ಸೇರಿದಂತೆ ಹಲವರು ಇದ್ದರು.



ಬಿಜೆಪಿ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ

ಚಾಮರಾಜನಗರ, ಜ.8– ನಗರದ 23ನೇ ವಾರ್ಡ್‌ನಲ್ಲಿ ಬೂತ್ ವಿಜಯ ಅಭಿಯಾನಕ್ಕೆ ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್.ಮಲ್ಲಿಕಾರ್ಜುನಪ್ಪ ಚಾಲನೆ ನೀಡಿದರು.

ವಾರ್ಡ್ ಸದಸ್ಯೆ ಗಾಯಿತ್ರಿ ಚಂದ್ರಶೇಖರ್ ಅವರ ನಿವಾಸದಲ್ಲಿ ಬಿಜೆಪಿ ಬಾವುಟ ಕಟ್ಟಿ ಹಾರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಿಜೆಪಿ ಮಹತ್ವಾಕಾಂಕ್ಷೆ ಬೂತ್ ಅಭಿಯಾನ ಆರಂಭಗೊಂಡಿದ್ದು, ರಾಜ್ಯಾದ್ಯಂತ ಜ. 12 ರವರೆಗೆ ಬೂತ್ ವಿಜಯ ಅಭಿಯಾನ ನಡೆಯುತ್ತಿದೆ. ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತರು ತಮ್ಮ ಸುತ್ತಮುತ್ತ ಬೂತ್ ಸಮಿತಿಗಳನ್ನು ರಚಿಸುವುದರ ಜೊತೆಗೆ ಅವರ ಮನೆ ಮೇಲೆ ಪಕ್ಷದ ಧ್ವಜ ಹಾರಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರ ಯೋಜನೆಗಳನ್ನು ಜನತೆ ತಿಳಿಸುವ ಮೂಲಕ ಮತ್ತೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ತರಲು ಶ್ರಮಿಸಬೇಕಿದೆ ಎಂದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಕಾರ್ಯದರ್ಶಿ ಪದ್ಮ, ಮಾಜಿ ಚುಡಾಧ್ಯಕ್ಷ. ಬಾಲಸುಬ್ರಹ್ಮಣ್ಯ, ಅಭಿಯಾನದ ಸಂಚಾಲಕರಾದ ಮಹದೇವನಾಯಕ, ಸುರೇಶ್‌ನಾಯಕ, ಶಿವುರಾಮಸಮುದ್ರ, ಮಹೇಶ್, ವಾರ್ಡ್‌ನ ಸದಸ್ಯ ಗಾಯಿತ್ರಿ, ವಾರ್ಡ್‌ನ ಬೂತ್ ಅಧ್ಯಕ್ಷರಾದ ರಾಧಾಕೃಷ್ಣ, ಕುಮಾರ್ ಮಾರ್ಕೆಟ್, ಶಶಿರೇಖಾ, ಅನ್ನಪೂರ್ಣ, ಎಸ್‌ಬಿಎಂ ಬ್ಯಾಂಕ್ ಪ್ರಸಾದ್, ಶ್ರೀನಿವಾಸ್, ಕಿಟ್ಟಿ, ಶಿವಪ್ಪ, ಕೇಬಲ್ ರಂಗಸ್ವಾಮಿ, ಆನಂದ್ ಭಗೀರಥ್ ಇತರರು ಹಾಜರಿದ್ದರು.

ಕ್ರೀಡೆಯಿಂದ ಸಾಮರಸ್ಯ ಬೆಳೆಯುತ್ತದೆ: ಎಂ.ರುದ್ರೇಶ್

ಜ್ಯೋತಿಗೌಡನಪುರದಲ್ಲಿ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ಚಾಮರಾಜನಗರ, ಜ.8– ಕ್ರೀಡೆಯಿಂದ ಗ್ರಾಮಗಳಲ್ಲಿ ಸಾಮರಸ್ಯ ಬೆಳೆಯುತ್ತದೆ ಎಂದು ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್ ಹೇಳಿದರು.


ತಾಲೂಕಿನ ಜ್ಯೋತಿಗೌಡನಪುರದಲ್ಲಿ ಜ್ಯೋತಿಗೌಡನಪುರ ಪ್ರೀಮಿಯರ್ ಲೀಗ್ (ಜೆಪಿಎಲ್) ವತಿಯಿಂದ ನಡೆದ ಕ್ರಿಕೆಟ್ ಪಂದ್ಯಾವಳಿಗೆ ಬ್ಯಾಟ್ ಮಾಡುವ ಮೂಲಕ ಚಾಲನೆ ನೀಡಿದರು. ಕ್ರೀಡೆಯಿಂದ ದೇಹ ಮತ್ತು ಮನಸ್ಸು ಸದೃಢವಾಗಿರುತ್ತದೆ. ಪ್ರಸ್ತುತ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳ ಯುವಕರು, ವಿದ್ಯಾರ್ಥಿಗಳು ಕ್ರೀಡೆ ಬಗ್ಗೆ ಹೆಚ್ಚು ಒಲವು ತೋರಿಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಕ್ರೀಡಾ ಕ್ಷೇತ್ರದಲ್ಲೂ ಕೂಡ ವಿದ್ಯಾರ್ಥಿಗಳಿಗೆ ವಿಫುಲ ಅವಕಾಶಗಳು ಇದೆ. ಕ್ರೀಡೆಯಿಂದ ಗ್ರಾಮದಲ್ಲಿ ಸಾಮರಸ್ಯ ವಾತಾವರಣ ನಿರ್ಮಾಣ ಮಾಡಲು ಸಾಧ್ಯ ಎಂದರು.

ಈ ಕ್ರಿಕೆಟ್ ಪಂದ್ಯಾವಳಿ ಯಶಸ್ವಿಯಾಗಲಿ, ಮುಂದಿನ ದಿನಗಳಲ್ಲಿ ದೊಡ್ಡಮಟ್ಟದಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿದರೆ ರಾಜ್ಯ ಮಟ್ಟದ ಕ್ರಿಕೆಟ್ ಪಟುಗಳ ಕರೆ ತರಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಮುಖಂಡರಾದ ಮೂಡ್ಲಾಪುರ ನಂದೀಶ್, ಬೆಂಗಳೂರು ಜಿಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ, ಕನಕಪುರ ಪ್ರಾಧಿಕಾರದ ಅಧ್ಯಕ್ಷ ಜಗನ್ನಾಥ್, ಗ್ರಾಪಂ ಸದಸ್ಯರಾದ ಲೋಕೇಶ್, ಶ್ರೀನಾಥ್, ಮುಖಂಡರಾದ ರಾಜು, ಸಿದ್ದೂರಪ್ಪ, ಲಿಂಗರಾಜು, ಮೋಹನ್, ಶಿವಮಲ್ಲು ಆಯೋಜಕರಾದ ಅಪ್ಪು, ಸಂಜಯ್, ಮಹೇಶ್, ರೇವಂತ್, ನವೀನ್ ಇತರರು ಹಾಜರಿದ್ದರು.

ಆಲೂರಿನಲ್ಲಿ ಭಗೀರಥ ಉಪ್ಪಾರ ಸಂಘ ಉದ್ಘಾಟನೆ

ಚಾಮರಾಜನಗರ, ಜ.8– ತಾಲೂಕಿನ ಆಲೂರಿಲ್ಲಿ ಶ್ರೀ ಭಗೀರಥ ಉಪ್ಪಾರ ಸಂಘ ಉದ್ಘಾಟಿಸಲಾಯಿತು. ಗ್ರಾಮದ ಉಪ್ಪಾರ ಸಮುದಾಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾಮಫಲಕವನ್ನು ಸಂಘದ ಗೌರವಾಧ್ಯಕ್ಷರು ಹಾಗೂ ಮಾಜಿ ಗ್ರಾಪಂ ಅಧ್ಯಕ್ಷ ಎ.ಸಿ. ಮಹದೇವಸ್ವಾಮಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಭಗೀರಥ ಉಪ್ಪಾರ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು, ಯಜಮಾನರು, ಗ್ರಾಮಸ್ಥರು ಹಾಜರಿದ್ದರು.

ವಿಸಿ ಹೊಸೂರು ಗ್ರಾಮದಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಚಾಮರಾಜನಗರ, ಜ.8– ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳು ಅಭಿವೃದ್ಧಿಯಾದರೆ ಅದು ಗ್ರಾಮಗಳ ಪ್ರಗತಿ ಹಾಗೂ ನಾಗರಿಕರ ಸಂಚಾರಕ್ಕೆ ಅನುಕೂಲವಾಗಲಿದೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು

ತಾಲೂಕಿನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿದ ಗ್ರಾಮಗಳಲ್ಲಿ ಮುಖ್ಯ ಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆಡಿಯಲ್ಲಿ ವೆಂಕಟಯ್ಯನಛತ್ರ ವಿ.ಸಿ. ಹೊಸೂರು ಗ್ರಾಮದಲ್ಲಿ ಲಿಂಗಾಯಿತರ ಬೀದಿಗೆ 50ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿ ಪೂಜೆ ನೆರವೇರಿಸಿದರು,

ಈ ವೇಳೆ ಮಾತನಾಡಿದ ಶಾಸಕರು, ಗ್ರಾಮಗಳಿಗೆ ಅಗತ್ಯವಾಗಿ ಬೇಕಾದ ರಸ್ತೆ–ಚರಂಡಿ–ಸಮುದಾಯ ಭವನ, ಕುಡಿಯುವ ನೀರು ಗಂಗಾ ಕಲ್ಯಾಣ ಯೋಜನೆ ಅರ್ಹ ಫಲಾನುಭವಿಗಳಿಗೆ ಆಶ್ರಯ ಮನೆ ನಿವೇಶನ ಸೇರಿದಂತೆ ಸರ್ಕಾರದಿಂದ ನೀಡಲಾಗುವ ಸೌಲಭ್ಯಗಳನ್ನು ಸಮಗ್ರವಾಗಿ ಕಲ್ಪಿಸಲಾಗಿದೆ ಎಂದರು

ಕಾಮಗಾರಿ ನಿರ್ವಹಿಸುತ್ತಿರುವ ಇಂಜಿನಿಯರ್ ಗುತ್ತಿಗೆದಾರರು ಗುಣಮಟ್ಟದಿಂದ ತ್ವರಿತವಾಗಿ ಪೂರ್ಣಗೊಳಿಸುವಂತೆ ಶಾಸಕರು ಸೂಚಿಸಿದರು,

ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ ರವಿಕುಮಾರ್, ಜಿಪಂ ಮಾಜಿ ಸದಸ್ಯ ರಮೇಶ್, ತಾಪಂ ಮಾಜಿ ಸದಸ್ಯ ಎಚ್.ಎಂ. ಮಹದೇವಶೆಟ್ಟಿ, ಎಪಿಎಂಸಿ ಸದಸ್ಯ ಸೋಮೇಶ್, ಗ್ರಾಪಂ ಸದಸ್ಯ ಕೆಂಪ ರಾಜ್, ಮುಖಂಡರಾದ ಶಿವಮಲ್ಲಪ್ಪ, ಶಾಂತಪ್ಪ, ಶೇಖರಪ್ಪ, ಮಹೇಶ್, ಸೋಮಣ್ಣ, ಶಾಂತಪ್ಪ, ಹೊಸೂರು ಜಗದೀಶ್, ನಂದೀಶ್, ಮಹೇಶ್, ಇಂಜಿನಿಯರ್ ಮಧುಸೂಧನ್ ಸೇರಿದಂತೆ ಗ್ರಾಮದ ಮುಖಂಡರು, ಗ್ರಾಮಸ್ಥರು, ಜನಪ್ರತಿನಿಧಿಗಳು ಇದ್ದರು.

ಒಂದನೇ ಪುಟದಿಂದ

ಮಂಡ್ಯದಲ್ಲಿ ಮುಂದಿನ ಅಕ್ಷರ ಜಾತ್ರೆ

ಮತ ಚಲಾವಣೆಯಲ್ಲಿ ಮಂಡ್ಯಕ್ಕೆ 17 ಮತಗಳು ಬಂದಿದ್ದು, ಬಳ್ಳಾರಿಗೆ 16 ಮತಗಳು ಬಂದು ಕೂದಲೆಳೆ ಅಂತರದಲ್ಲಿ ಅವಕಾಶ ತಪ್ಪಿಹೋಯಿತು.

ಕಸಾಪ ರಾಜ್ಯ ಮಟ್ಟದ ಕಾರ್ಯಕಾರಿಣಿ ಸಭೆ ಮುಕ್ತಾಯದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಶಿ, 86ನೇ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ಯಶಸ್ವಿಯಾಗಿದೆ. ದೊಡ್ಡ ಕಾರ್ಯಕ್ರಮ ಮಾಡುವಾಗ ಸಣ್ಣ ಪುಟ್ಟ ಸಮಸ್ಯೆ ಆಗುವುದು ಸಹಜ. ಈ ಬಾರಿ ಆದ ಸಮಸ್ಯೆ ಮುಂದೆ ಪುನರಾವರ್ತನೆ ಆಗದಂತೆ ನೋಡಿಕೊಳ್ಳುತ್ತೇವೆ ಎಂದರು. 87ನೇ ಸಮ್ಮೇಳನ ಮಾಡಬೇಕು ಎಂಬುವುದರ ಬಗ್ಗೆ ಚರ್ಚೆ ಆಗಿದೆ. ಒಟ್ಟು ಒಂಬತ್ತು ಜಿಲ್ಲೆಯವರು ನಮ್ಮ ಜಿಲ್ಲೆಯಲ್ಲಿ ಸಮ್ಮೇಳನ ಮಾಡುವಂತೆ ಮನವಿ ಮಾಡಿದ್ದರು. ಮಂಡ್ಯ ಜಿಲ್ಲೆಯಲ್ಲಿ ಮಾಡಬೇಕೆಂದು ಕಾರ್ಯಕಾರಿಣಿ ಸಭೆಯಲ್ಲಿ ಅತಿ ಹೆಚ್ಚು ಜನರ ಬೆಂಬಲ ನೀಡಿದ್ದಾರೆ. 87ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ಮಾಡಲು ತೀರ್ಮಾನಿಸಲಾಗಿದೆ ಎಂದರು.

ನಾಡಿನ ಅಭಿವೃದ್ಧಿಗೆ ಸರ್ಕಾರ ಬದ್ಧ

ದುಡಿದ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಂ ಹೆಬ್ಬಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನೀಲ್ ಕುಮಾರ್, ಜಿಲ್ಲಾಧಿಕಾರಿ ಸೇರಿದಂತೆ ಎಲ್ಲಾ ಅಧಿಕಾರಿಗಳನ್ನು ಅಭಿನಂದಿಸುವುದಾಗಿ ತಿಳಿಸಿದ ಮುಖ್ಯಮಂತ್ರಿಗಳು, ಸಾಹಿತಿಗಳ ಅನಿಸಿಕೆಗಳನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳುವುದಾಗಿ ಹೇಳಿದರು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗ್ಡೆ ಕಾಗೇರಿ ಮಾತನಾಡಿ, ಹಾವೇರಿ ಜಿಲ್ಲೆಯು ಕನಕದಾಸರು, ಸರ್ವಜ್ಞಮೂರ್ತಿ, ಶರೀಫರ ನಾಡು, ದೊಡ್ಡರಂಗೇಗೌಡರ ನೇತೃತ್ವದಲ್ಲಿ ವಿವಾದ ರಹಿತ ಸಮ್ಮೇಳನವನ್ನು ಸುವರ್ಣಾಕ್ಷರದಲ್ಲಿ ಬರೆದಿಡುವಂತೆ ಮಾಡಿದ್ದಾರೆ. ಸೂರ್ಯ–ಚಂದ್ರ ಇರುವವರೆಗೂ ಸಾಹಿತ್ಯ ಇರುತ್ತದೆ. ಸಾಹಿತಿಗಳು ನಾಡಿನ ವಿಶೇಷತೆಯನ್ನು ಜಗತ್ತಿಗೇ ತೋರಿಸಿದ್ದಾರೆ ಎಂದು ಹೇಳಿದರು.

ಸಾಹಿತಿ ದೊಡ್ಡರಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನದ ಬಹಿರಂಗ ಅಧಿವೇಶನದ ಸಭೆಯಲ್ಲಿ ಕಸಾಪ ಗೌರವ ಕೋಶಾಧ್ಯಕ್ಷ ಬಿ.ಎಂ.ಪಾಟೀಲ್ ಪಾಂಡು ಮಂಡಿಸಿದ 6 ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ವಲ್ಲಭಬಾಯಿ ಪಟೇಲರು ಕಾರಣ

ಮತ್ತು ಭಾಷೆಗೆ ಅನುಗುಣವಾಗಿ ವರ್ಗೀಕರಣವಾಗಲಿಲ್ಲ. ಭಾಷಾವಾರು ಪ್ರಾಂತ ವಿಂಗಡಣೆ ಪುನರ್ ಹೊಂದಾಣಿಕೆ ಮಾಡಬೇಕು ಎನ್ನುವುದನ್ನು ಇದು ಸೂಚಿಸುತ್ತದೆ ಎಂದರು.

ಕಾಸರಗೋಡು ಮತ್ತು ಬೆಳಗಾವಿಯ ಗಡಿ ಸಮಸ್ಯೆ ಸದಾ ಕಾಡುತ್ತಿವೆ. ಸೊಲ್ಲಾಪುರ, ಅಕ್ಕಲಕೋಟೆ, ಜತ್ತ್ ಪ್ರದೇಶಗಳಲ್ಲಿ ಕನ್ನಡ ವಿಜೃಂಭಿಸಿದೆ. ಶೇ.90ರಷ್ಟು ಕನ್ನಡ ಭಾಷಿಗರು ಅಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಆ ಭಾಗವು ಕರ್ನಾಟಕಕ್ಕೆ ಸೇರಬೇಕು ಎಂದು ಪ್ರತಿಪಾದಿಸಿದರು. ಚೆನ್ನೈ, ಮುಂಬೈ ನಗರಗಳಲ್ಲಿ ಕನ್ನಡ ಸಂಘಟನೆಗಳು, ಕೆಲವು ಪತ್ರಿಕೆಗಳು ಸರಾಗವಾಗಿ ಕಾರ್ಯನಿರ್ವಹಿಸುತ್ತಿವೆ. ಆ ಭಾಗಗಳಲ್ಲಿ ಅವರು ಕನ್ನಡದ ಕಾರ್ಯಕ್ರಮವೇನಾದರೂ ನಡೆಸಿದರೆ, ಸಾವಿರಾರು ಮಂದಿ ಸೇರುತ್ತಾರೆ. ಹೊರ ರಾಜ್ಯದಲ್ಲಿ ಕನ್ನಡ ಕಟ್ಟುವ ಕೆಲಸ ಸಾಧ್ಯವಾಗುತ್ತದೆ ಎಂದಾದರೆ, ನಮ್ಮ ನಾಡಲ್ಲಿ ಯಾಕಾಗುತ್ತಿಲ್ಲ ಸರ್ಕಾರದಿಂದ ಅನುದಾನ ದೊರೆಯುತ್ತವೆಯಾದರೂ, ಹಣಕಾಸಿನ ಇಲಾಖೆ ಕೊಕ್ಕೆ ಹಾಕುತ್ತದೆ. ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಿಗಬೇಕಾದ ಅನುದಾನ ಸಿಗುತ್ತಿಲ್ಲ. ಕೆಲವು ಸಮಸ್ಯೆಗಳು ಹಾಗೆಯೇ ಉಳಿದಿವೆ ಎಂದು ಸರ್ಕಾರದ ನಡೆಯನ್ನು ಟೀಕಿಸಿದರು.

'ಆಕಾಶವಾಣಿ'ಯಲ್ಲಿ ಚಿರತೆ ಪ್ರತ್ಯಕ್ಷ



ಯಾವುದೋ ಒಂದು ಪ್ರಾಣಿ ಜನರೇಟರ್ ಸಮೀಪದಿಂದ ಹಾದು ಹೋಗಿರುವುದನ್ನು ಕಂಡ ಸಿಬ್ಬಂದಿ ಚಿರತೆಯೆಂದೇ ಭಾವಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ ಅರಣ್ಯ ಸಿಬ್ಬಂದಿ 4 ಕಡೆ ಕ್ಯಾಮರಾ ಟ್ರಾಪ್ ಅಳವಡಿಸಿ ಕಟ್ಟೆಚ್ಚರ ವಹಿಸಲಾಗಿದೆ. **ಮತ್ತೆ ಕಾಣಿಸಿಕೊಂಡ ಸಿವೆಟ್ ಕ್ಯಾಟ್ (ಪುನುಗು ಬೆಕ್ಕು):** ಸಿಎಫ್‌ಟಿಆರ್‌ಐ ಆವರಣದಲ್ಲಿ ಅಳವಡಿಸಿರುವ ಕ್ಯಾಮರಾ ಟ್ರಾಪ್‌ನಲ್ಲಿ ಪುನುಗು ಬೆಕ್ಕಿನ ಸಂಚಾರದ ದೃಶ್ಯ ಸೆರೆಯಾಗಿದೆ. ಆದರೆ ಎಲ್ಲಿಯೂ ಚಿರತೆ ಬಗ್ಗೆ ಸುಳಿವು ದೊರೆತಿಲ್ಲ. ಈ ನಡುವೆ ಸಿಬ್ಬಂದಿ ಸಂಜೆ ಕೆಲಸ ಮುಗಿಸಿ ವಾಪಸ್ಸಾಗುತ್ತಿದ್ದಾಗ ಸಿಎಫ್‌ಟಿಆರ್‌ಐನ ಕಟ್ಟಡದಿಂದ ಪುನುಗು ಬೆಕ್ಕೊಂದು ಮರದ ಕೊಂಬೆಗೆ ಹಾರುತ್ತಿರುವ ದೃಶ್ಯವನ್ನು ಸಿಬ್ಬಂದಿಯೊಬ್ಬರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಇದರಿಂದ ಪುನುಗು ಬೆಕ್ಕನ್ನು ಕಂಡು ಚಿರತೆಯೆಂದು ತಪ್ಪಾಗಿ ಅರ್ಥೈಸಿಕೊಂಡಿರಬೇಕು ಎಂದು ಅರಣ್ಯ ಸಿಬ್ಬಂದಿ ಅಭಿಪ್ರಾಯಪಟ್ಟಿದ್ದಾರೆ.

ಎತ್ತಿನಗಾಡಿ ಓಟದ ಸ್ಪರ್ಧೆ

ಜಿಲ್ಲಾಧಿಕಾರಿ ಅವರಿಗೂ ವರದಿ ನೀಡಿದ್ದರು. ಆದರೂ ಎತ್ತಿನಗಾಡಿ ಓಟದ ಸ್ಪರ್ಧೆ ಶನಿವಾರ ನಡೆದಿತ್ತು. ಭಾನುವಾರ ಅಂತಿಮ ಸ್ಪರ್ಧೆ ನಡೆಯಿತು. ಪರವಾನಗಿ ಇಲ್ಲದಿದ್ದರೂ ಆಯೋಜಕರಾದ ಕೀಲಾರ ಮಧು, ಚಿಕ್ಕಮಂಡ್ಯದ ನರಸಿಂಹ, ಆನಂದ ಹಾಗೂ ರಾಜಪ್ಪ ಎಂಬುವವರು ಸುಮಾರು 1 ಜೊತೆ ಎತ್ತಿಗೆ 4,000 ರೂ. ಶುಲ್ಕ ನಿಗದಿಪಡಿಸಿ ಸ್ಪರ್ಧೆ ಆಯೋಜಿಸಿದ್ದರು. ರಾಜ್ಯದ ನಾನಾ ಕಡೆಗಳಿಂದ 84 ಜೊತೆ ಎತ್ತುಗಳು ಬಂದಿದ್ದವು.

ಆಯೋಜಕರೇ ನಿರ್ಲಕ್ಷ್ಯವೇ ದುರ್ಘಟನೆಗೆ ಕಾರಣ: ರೈತಸಂಘದ ಕಾರ್ಯಕರ್ತ ನಾಗರಾಜು ಸಾವನ್ನಪ್ಪಲು ಹಾಗೂ ಪುಟ್ಟ ಬಾಲಕ ಹೃತಿಕ್ ತೀವ್ರವಾಗಿ ಗಾಯಗೊಳ್ಳಲು ಆಯೋಜಕರೇ ನೇರ ಕಾರಣವಾಗಿದ್ದಾರೆ. ಪರವಾನಗಿ ನೀಡದಿದ್ದರೂ ಅನಧಿಕೃತವಾಗಿ ಎತ್ತಿನಗಾಡಿ ಓಟದ ಸ್ಪರ್ಧೆ ಆಯೋಜಿಸಿದ್ದಲ್ಲದೆ, ಸ್ಪರ್ಧೆ ನಡೆಯುವ ಅಂಕಣದ ಸುತ್ತಲೂ ಬ್ಯಾರಿಕೇಡ್ ಹಾಕಿರಲಿಲ್ಲ. ಕನಿಷ್ಠ ಮರಗಳನ್ನು ಹಾಕಿ ಜನರು ಅದರ ಹಿಂದೆ ನಿಲ್ಲುವುದಕ್ಕೆ ಅವಕಾಶ ಮಾಡಿದ್ದರೆ, ಈ ದುರ್ಘಟನೆ ಸಂಭವಿಸುತ್ತಿರಲಿಲ್ಲ ಎಂಬುದು ಸ್ಥಳೀಯ ಸಾರ್ವಜನಿಕರ ಆರೋಪ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ತಮ್ಮ ಇಲಾಖೆಯ ಸಿಬ್ಬಂದಿಗಳ ಮೂಲಕ ಕೂಡಲೇ ಆಯೋಜಕರನ್ನು ಬಂಧಿಸಿ ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು. ರೈತ ನಾಗರಾಜು ಸಾವಿಗೆ ಕಾರಣರಾದ ಆಯೋಜಕರಿಂದಲೇ ಅವರ ಕುಟುಂಬಕ್ಕೆ ಪರಿಹಾರ ಕೊಡಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಆಯೋಜಕರು ಪರಾರಿ: ಈ ದುರ್ಘಟನೆ ನಡೆಯುತ್ತಿದ್ದಂತೆ ಆಯೋಜಕರು ಸ್ಪರ್ಧೆಯಲ್ಲಿ ವಿಜೇತರಾದವರಿಗೆ ವಿತರಿಸಲು ತಂದಿದ್ದ ಆರು ಬೈಕ್ ಗಳೊಂದಿಗೆ ಪರಾರಿಯಾಗಿದ್ದಾರೆ. ಮುಂಜಾಗ್ರತೆ ತೆಗೆದುಕೊಂಡು ಓಟದ ಸ್ಪರ್ಧೆ ನಡೆಸಿದ್ದರೆ, ಇಂತಹ ದುರ್ಘಟನೆ ನಡೆಯುತ್ತಿರಲಿಲ್ಲ, ಇದಕ್ಕೆ ಆಯೋಜಕರೇ ನೇರ ಹೊಣೆ, ಅವರನ್ನು ಬಂಧಿಸಬೇಕೆಂದು ಸ್ಥಳೀಯ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಹೃದಯಾಘಾತದಿಂದ ಸಾವು

ಸಾವಿನ ಕುರಿತಂತೆ ಇದ್ದ ಹಲವು ಅನುಮಾನಗಳಿಗೆ ತೆರೆ ಎಳೆದಂತಾಗಿದೆ ಎಂದರು. ವಿಷ ಪ್ರಾಶನ, ಹಲ್ಲೆಯಿಂದ ದಿನೇಶ್ ಕುಮಾರ್ ಸಾವನ್ನಪ್ಪಿರಬಹುದೆಂದು ಶಂಕಿಸಲಾಗಿತ್ತು. ಅವರು ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಾರೆ ಎಂದು 2022ರ ನವೆಂಬರ್ 29ರಂದು ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಸಿ.ಎಂ.ರವೀಂದ್ರ ಪ್ರಕರಣ ದಾಖಲಿಸಿಕೊಂಡಿದ್ದರು. ನವೆಂಬರ್ 27ರಂದು ಭಾನುವಾರ ರಾತ್ರಿ ಊಟ ಮಾಡಿ ಮಲಗಿದ್ದ ದಿನೇಶ್ ಕುಮಾರ್ ಮರು ದಿನ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದುದನ್ನು ನೋಡಿ ಮೂರ್ಛೆ ಹೋದೆವು. ನಂತರ ಆಸ್ಪತ್ರೆಗೆ ಕರೆದೊಯ್ದಾಗ ಪರೀಕ್ಷಿಸಿದ ವೈದ್ಯರು, ಮೃತಪಟ್ಟಿದ್ದಾರೆ ಎಂಬುದನ್ನು ದೃಢಪಡಿಸಿದರು ಎಂದು ಅವರ ಕುಟುಂಬಸ್ಥರು ಪೊಲೀಸರಿಗೆ ತಿಳಿಸಿದ್ದರು.

ಈ ನಡುವೆ ದಿನೇಶ್‌ಕುಮಾರ್ ಸಾವು ಅಸಹಜವಲ್ಲ. ಕೊಲೆ ಇರಬಹುದು ಎಂದು ಸೋದರಮಾವ ಹೆಚ್.ಎಂ.ನಾರಾಯಣ ಅವರು ಲಿಖಿತ ದೂರು ನೀಡಿ, ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದರು. ಪ್ರಕರಣ ಗಂಭೀರ ಸ್ವರೂಪ ತಾಳುತ್ತಿದ್ದಂತೆಯೇ ಕೆ.ಆರ್. ಉಪವಿಭಾಗದ ಎಸಿಪಿ ಎಸ್.ಇ.ಗಂಗಾಧರಸ್ವಾಮಿ ತನಿಖೆ ಕೈಗೊಂಡಿದ್ದರು. ಪತ್ನಿ, ಪುತ್ರನನ್ನು ವಿಚಾರಣೆಗೊಳಪಡಿಸಿದರೂ, ಸಮಂಜಸ ಮಾಹಿತಿ ಹೊರ ಬಾರದ ಕಾರಣ ಪೊಲೀಸರು ಮಾನಸಿಕ ವೈದ್ಯರು, ಜಿಲ್ಲಾ ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳ ಮೂಲಕವೂ ಆಪ್ತ ಸಮಾಲೋಚನೆ ನಡೆಸಿದರೂ ಪ್ರಯೋಜನವಾಗಿರಲಿಲ್ಲ. ಅದಕ್ಕಾಗಿ ತಾಂತ್ರಿಕ ಸಾಕ್ಷ್ಯಕ್ಕೆ ಮೊರೆ ಹೋಗಿದ್ದ ತನಿಖಾಧಿಕಾರಿಗಳಿಗೆ ಎಫ್‌ಎಸ್‌ಎಲ್ ವರದಿಯು ದಿನೇಶ್ ಕುಮಾರ್ ಸಾವಿನ ಶಂಕೆ ಬಗ್ಗೆ ಈಗ ಸ್ಪಷ್ಟ ನಿಲುವಿಗೆ ಬಂದಿದ್ದಾರೆ.

ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಮಾರೋಪ

ದಲಿತ ಸಮುದಾಯದ ಮತ ಸೆಳೆಯಲು ತಂತ್ರ ರೂಪಿಸಿ

ಲಾಲ್‌ಸಿಂಗ್ ಆರ್ಯ ಸಲಹೆ

ಮೈಸೂರು, ಜ.8(ಎಂಟಿವೈ)– ಉತ್ತರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಬಿಜೆಪಿಗೆ ದಲಿತ ಸಮುದಾಯದ ಮತಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಾಗಿದ್ದು, ಅದೇ ಮಾದರಿಯಲ್ಲಿ ಕರ್ನಾಟಕದಲ್ಲೂ ದಲಿತ ಸಮುದಾಯ ಮತದಾರರನ್ನು ಸೆಳೆಯಲು ಶ್ರಮಿಸಬೇಕು ಎಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್‌ಸಿಂಗ್ ಆರ್ಯ ಸಲಹೆ ನೀಡಿದ್ದಾರೆ.

ನಗರದ ಹೋಟೆಲ್ ಲಲಿತ್‌ಮಹಲ್ ಪ್ಯಾಲೆಸ್‌ನಲ್ಲಿ ಭಾನುವಾರ ನಡೆದ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ದಲಿತ ಸಮುದಾಯದ ಮತಗಳನ್ನು ಸೆಳೆಯುವಲ್ಲಿ ರೂಪಿಸಿದ ತಂತ್ರಗಾರಿಕೆ ಯಶಸ್ವಿಯಾಗಿದೆ. ದಲಿತ ಮತಗಳನ್ನು ಸೆಳೆಯುವ ಮೂಲಕ ಬಿಜೆಪಿ ಅಧಿಕಾರಕ್ಕೇರಿದೆ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ದಲಿತ ಮತಗಳನ್ನು ಸೆಳೆದು ಪಕ್ಷವನ್ನು ಅಧಿಕಾರಕ್ಕೆ ತರಬೇಕು. ದಲಿತ ಮತಗಳು ದೊರೆತರೆ, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ. ಉತ್ತರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರ ದಲಿತರ ಕಲ್ಯಾಣಕ್ಕೆ ಹಲವು ಯೋಜನೆಗಳನ್ನು ಜಾರಿಗೆ ತರುವ ಮೂಲಕ ಅವರಲ್ಲಿ ಹೊಸ ಭರವಸೆ ಮೂಡಿಸಿದೆ. ಇದರಿಂದ ಅಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸುವ ಮೂಲಕ



ಅವರ ಹಿತ ಕಾಯಲಾಗಿದೆ ಎಂದು ಹೇಳಿದರು.

ವಿಧಾನಸಭೆ ಚುನಾವಣೆಯೊಂದಿಗೆ 2024ಕ್ಕೆ ನಡೆಯುವ ಲೋಕಸಭೆ ಚುನಾವಣೆಗೂ ಸಿದ್ಧತೆ ಮಾಡಿಕೊಳ್ಳಬೇಕು. ಮುಂದಿನ ಒಂದು ವರ್ಷದ ಅವಧಿಯಲ್ಲಿ ಚುನಾವಣೆ ಎದುರಿಸಲು ಬೇಕಾದ ಎಲ್ಲಾ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಅದಕ್ಕಾಗಿ ಕಾರ್ಯಯೋಜನೆ ರೂಪಿಸಿಕೊಂಡು ಪ್ರಚಾರದಲ್ಲಿ ತೊಡಗಬೇಕು. ದಲಿತ ಕೇರಿಗಳಿಗೆ ಸತತ ಭೇಟಿ ನೀಡಬೇಕು. ಅಲ್ಲಿಯೇ ಭೋಜನ ಸ್ವೀಕರಿಸಿ, ಚರ್ಚೆ ನಡೆಸಿ ಓಲೈಸಿಕೊಳ್ಳಬೇಕು. ದಲಿತರು ಹಾಗೂ ಬಡ ವರ್ಗದವರಿಗೆ ಸರ್ಕಾರದ ಸವಲತ್ತುಗಳನ್ನು ತಲುಪಿಸಲು ಶ್ರಮಿಸಬೇಕು ಎಂದು ಸೂಚಿಸಿದರು.

ಬಿಜೆಪಿ ಸರ್ಕಾರ ದಲಿತ, ಶೋಷಿತ ಹಾಗೂ ಅವಕಾಶ ವಂಚಿತರ ಪರವಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ, ಕಾಂಗ್ರೆಸ್ ಏಳು ದಶಕದ ಅವಧಿಯಲ್ಲಿ ಕೇವಲ ಸುಳ್ಳು ಭರವಸೆಗಳನ್ನೇ ನೀಡಿದೆ. ಆ ಸಮುದಾಯದ ಏಳಿಗೆಗೆ ಯಾವುದೇ ಕಾರ್ಯಕ್ರಮ ರೂಪಿಸಲಿಲ್ಲ. ಆದರೆ, ಕೇಂದ್ರದಲ್ಲಿ ಮೋದಿ ಸರ್ಕಾರ ಬಂದ ಬಳಿಕ ಆರ್ಥಿಕವಾಗಿ ದುರ್ಬಲರಾಗಿರುವವರಿಗಾಗಿ ಜನ್‌ಧನ್ ಖಾತೆ ಯೋಜನೆ ಜಾರಿಗೊಳಿಸಲಾಯಿತು. ಕಿಸಾನ್ ಸಮ್ಮಾನ್ ಯೋಜನೆಯಡಿ ಸಣ್ಣ ಹಿಡುವಳಿದಾರರ ಖಾತೆಗೆ ನೇರವಾಗಿ ಸಹಾಯಧನದ ಹಣ ತಲುಪಿಸಲಾಯಿತು. ಆರ್ಥಿಕ ಸಬಲೀಕರಣ ಮತ್ತು ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಪವರ್ ಕಳೆದುಕೊಂಡಿರುವ ಖರ್ಗೆ: ಕಾಂಗ್ರೆಸ್(ಎಐಸಿಸಿ) ರಾಷ್ಟ್ರೀಯ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪವರ್‌ಫುಲ್ ಅಧ್ಯಕ್ಷರಲ್ಲ, ಅವರೊಬ್ಬ ಪವರ್‌ಲೆಸ್ ಅಧ್ಯಕ್ಷರಾಗಿದ್ದಾರೆ. ನಾನು ಅಂಬೇಡ್ಕರ್ ವಾದಿ, ದಲಿತ ನಾಯಕ ಎಂದು ಖರ್ಗೆ ಅವರು ಹೇಳಿಕೊಳ್ಳುತ್ತಾರೆ. ಆದರೆ, ಅಂದಿನ ಪ್ರಧಾನಿ ಡಾ.ಮನ್‌ಮೋಹನ್ ಸಿಂಗ್, ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಬಳಿ ಮಾತುಕತೆ ನಡೆಸಿ ಡಾ.ಅಂಬೇಡ್ಕರ್ ಜಯಂತಿಗೆ ರಜೆ ಘೋಷಿಸಲು ಸಾಧ್ಯವಾಗಲಿಲ್ಲ. ಬಡವರು, ದಲಿತರ ಕಲ್ಯಾಣಕ್ಕೆ ಯೋಜನೆ ರೂಪಿಸುವಂತೆ ಕಾಂಗ್ರೆಸ್ ಅಧಿನಾಯಕರಿಗೆ ಸಲಹೆ ನೀಡಲು ಖರ್ಗೆ ಅವರಿಗೆ ಸಾಧ್ಯವಾಗುವುದಿಲ್ಲ ಎಂದು ಟೀಕಿಸಿದರು.

ದೇಶದ್ರೋಹಿಗಳಿಂದ ಯಾತ್ರೆ: ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಸುತ್ತಿರುವ ಭಾರತ್ ಜೋಡೋ ಯಾತ್ರೆಯಲ್ಲಿ ಪಾಲ್ಗೊಂಡಿರುವವರು ದೇಶ ವಿಭಜನೆಗೆ ಕಾರಣರಾದವರು ಭಾರತ್ ಜೋಡೋ ಯಾತ್ರೆ ಹಮ್ಮಿಕೊಂಡಿರುವುದು ಹಾಸ್ಯಾಸ್ಪದ ಎಂದು ಕಿಡಿಕಾರಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ, ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ದುಷ್ಯಂತ ಕುಮಾರ್ ಗೌತಮ್, ಕೇಂದ್ರ ಸಚಿವರಾದ ವೀರೇಂದ್ರ ಕುಮಾರ್, ಕೌಶಲ್ ಕಿಶೋರ್, ಭಾನುಪ್ರತಾಪ್ ವರ್ಮ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಎಸ್‌ಸಿ ಮೋರ್ಚಾ ರಾಷ್ಟ್ರೀಯ ಮಾಜಿ ಅಧ್ಯಕ್ಷ ಡಾ.ಸಂಜಯ್ ಪಾಸ್ವಾನ್, ಮಾಜಿ ಸಂಸದ ನಾರಾಯಣ್ ಕೇಸರಿ, ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಇನ್ನಿತರರು ಉಪಸ್ಥಿತರಿದ್ದರು.

ಪರಿಶಿಷ್ಟ ಜಾತಿ ಸಮುದಾಯದ ಅಭಿವೃದ್ಧಿ ಬಗ್ಗೆ ಚರ್ಚಿಸಲು ಸಿಎಂ ಬಳಿಗೆ ದಲಿತ ಶಾಸಕರ ನಿಯೋಗ

ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ



ಮೈಸೂರು, ಜ.8(ಎಂಕೆ)– ಪರಿಶಿಷ್ಟ ಜಾತಿ ಸಮುದಾಯಗಳ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾಗಿರುವ ಕಾರ್ಯಕ್ರಮಗಳು ಹಾಗೂ ಅಭಿವೃದ್ಧಿ ಯೋಜನೆಗಳ ಕುರಿತು ಚರ್ಚಿಸಲು ದಲಿತ ಶಾಸಕರ ನಿಯೋಗದೊಂದಿಗೆ ಸದ್ಯದಲ್ಲಿಯೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲಾಗುವುದು ಎಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಮೈಸೂರಿನ ಲಲಿತಮಹಲ್ ಹೋಟೆಲ್‌ನಲ್ಲಿ ಆಯೋಜಿಸಿದ್ದ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಮುಕ್ತಾಯದ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು, ಎಸ್‌ಸಿ ಸಮುದಾಯಗಳ ಅಭಿವೃದ್ಧಿಗೆ ಕೈಗೊಳ್ಳುವ ನಿರ್ಣಯ ಮತ್ತು ಆಗಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲು ಯಾವಾಗ ಬೇಕಾದರೂ ಬಂದು ಭೇಟಿ ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಎಸ್‌ಸಿ ಸಮುದಾಯದ ಅಭಿವೃದ್ಧಿಗಾಗಿ ಇರುವ ಯೋಜನೆಗಳ ಜೊತೆಗೆ ಹೊಸದಾಗಿ ಏನೆಲ್ಲ ಯೋಜನೆ ಸೇರಿಸಬೇಕು ಎಂಬ ಕುರಿತು ಶಾಸಕರೊಡನೆ ಚರ್ಚಿಸಿ, ಬಳಿಕ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವುದಾಗಿ ಹೇಳಿದರು.

ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಕೈಗೊಂಡ ರಾಜಕೀಯ ನಿರ್ಣಯಗಳು ರಾಷ್ಟ್ರಮಟ್ಟದಲ್ಲಿ ಜಾರಿಗೊಳಿಸಲಿದ್ದು, ರಾಜ್ಯದಲ್ಲಿ ಕೈಗೊಳ್ಳಬೇಕಾದ ತೀರ್ಮಾನವನ್ನು ಮುಖ್ಯಮಂತ್ರಿಗಳೊಡನೆ ಚರ್ಚಿಸಲಾಗುವುದು. ಸಭೆಯಲ್ಲಿ ದಲಿತರ ಅಭಿವೃದ್ಧಿಪರ ರಾಜ್ಯ ಸರ್ಕಾರ ಕೈಗೊಂಡಿರುವ ಯೋಜನೆಗಳನ್ನು ಮುಕ್ತಕಂಠದಿಂದ ಸ್ವಾಗತಿಸಿ, ಅಭಿನಂದಿಸುವ ನಿರ್ಣಯ ಕೈಗೊಳ್ಳಲಾಯಿತು. ಪ.ಜಾತಿ ಮತ್ತು ಪ.ಪಂಗಡ ಸಮುದಾಯದ ಮೀಸಲಾತಿ ಹೆಚ್ಚಳ, ಕೇಂದ್ರ ಸರ್ಕಾರ ಅಂಬೇಡ್ಕರ್ ಜನ್ಮಸ್ಥಳ, ಬೌದ್ಧ ಧರ್ಮ ಸ್ವೀಕರಿಸಿದ ಸ್ಥಳ ಅಭಿವೃದ್ಧಿಪಡಿಸಿದಂತೆ ರಾಜ್ಯದಲ್ಲಿ ಅಂಬೇಡ್ಕರ್ ಭೇಟಿ ನೀಡಿದ ಏಳು ಸ್ಥಳಗಳಾದ ಬೆಂಗಳೂರು, ಕೆಜಿಎಫ್, ಧಾರವಾಡ, ಹಾಸನ, ವಿಜಯಪುರ, ಬೆಳಗಾವಿ ಮತ್ತು ಗುಲ್ಬರ್ಗಾ ನಗರಗಳಲ್ಲಿ ಸ್ಮಾರಕ ನಿರ್ಮಾಣಕ್ಕೆ ಪ್ರಾರಂಭಿಕ ಅನುದಾನವಾಗಿ 20 ಕೋಟಿ ನೀಡಿರುವುದು, ಬಡವರಿಗೆ 75 ಯೂನಿಟ್‌ವರೆಗೆ ಉಚಿತ ವಿದ್ಯುತ್ ಬಳಕೆಗೆ ಅವಕಾಶ, ರಾಜ್ಯದಲ್ಲಿ ಎಸ್‌ಸಿ ಸಮುದಾಯದ ವಿದ್ಯಾರ್ಥಿಗಳಿಗಾಗಿ ಹೊಸದಾಗಿ 100 ಹಾಸ್ಟೆಲ್ ತೆರೆಯಲು ನಿರ್ಧರಿಸುವುದನ್ನು ಸ್ವಾಗತಿಸಲಾಗಿದೆ ಎಂದರು.

ಬಿಜೆಪಿಯತ್ತ ದಲಿತರು: ಬಿಜೆಪಿಯನ್ನು ದಲಿತ ವಿರೋಧಿ ಎಂದು ಮೊದಲಿನಿಂದಲೂ ಬಿಂಬಿಸಿಕೊಂಡು ಬರಲಾಯಿತು. ಆದರೆ ಇತ್ತೀಚೆಗೆ ದಲಿತರು ಬಿಜೆಪಿಯತ್ತ ಧಾವಿಸಿ ಬರುತ್ತಿದ್ದಾರೆ. ಸಂವಿಧಾನದ ಕುರಿತು ಸದನದಲ್ಲಿ ಎಂದೂ ಕೂಡ ಚರ್ಚೆ ಆಗಿರಲಿಲ್ಲ. ಆದರೆ ಮೋದಿ ಅವರು ಪ್ರಧಾನಿಯಾದ ಬಳಿಕ ಮೊದಲ ಬಾರಿಗೆ ಸಂಸತ್‌ನಲ್ಲಿ ಚರ್ಚೆ ಆಯಿತು ಎಂದು ಅವರು ಹೇಳಿದರು.

ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿ ಕುರಿತು ನಾವು ಯಾವುದೇ ರೀತಿಯ ಚರ್ಚೆ ಮಾಡಿಲ್ಲ. ಇಂತಹ ವಿಷಯಗಳನ್ನು ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಪ್ರಸ್ತಾಪಿಸಲಾಗುವುದು. ಇದು ರಾಷ್ಟ್ರೀಯ ಕಾರ್ಯಕಾರಿಣಿಯಾದ್ದರಿಂದ ಈ ವಿಷಯ ಚರ್ಚೆಗೆ ಬಂದಿಲ್ಲ. ಆದರೆ ದೇಶದಲ್ಲಿ 75 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ದಲಿತರ ಮತವನ್ನು ಪಡೆದುಕೊಂಡರೆ ಹೊರತು ಒಬ್ಬರನ್ನು ಸಿಎಂ ಮಾಡಲಿಲ್ಲ. ಆದರೆ ಬಿಜೆಪಿ ಸರ್ಕಾರ ಗೋವಿಂದ ಕಾರಜೋಳ ಅವರನ್ನು ಉಪ ಮುಖ್ಯಮಂತ್ರಿಯನ್ನಾಗಿ ಮಾಡಿತು. ಇದರಿಂದಲೇ ದಲಿತರ ಪರ ಯಾರು ಇದ್ದಾರೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ ವಿವರಿಸಿದರು.

ಯಶಸ್ವಿ: ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಯಶಸ್ವಿಯಾಗಿದ್ದು, ದೇಶದ ವಿವಿಧೆಡೆಯಿಂದ 139 ಮಂದಿ ರಾಷ್ಟ್ರಮಟ್ಟದ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಅಲ್ಲದೆ ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿಯ ಸಂಘಟನಾತ್ಮಕ 39 ಜಿಲ್ಲೆಗಳ ಪೈಕಿ 35 ಜಿಲ್ಲೆಯಿಂದ ಜಿಲ್ಲಾಧ್ಯಕ್ಷರು ಪಾಲ್ಗೊಂಡಿದ್ದರು. ಎಲ್ಲರೂ ಕೂಡ ಈ ಕಾರ್ಯಕಾರಿಣಿ ಆಯೋಜನೆಯ ಶಿಸ್ತು ಬದ್ಧತೆಯನ್ನು ಮೆಚ್ಚಿದ್ದಾರೆ. ನಮ್ಮ ಆತಿಥ್ಯಕ್ಕೆ ಧನ್ಯವಾದ ಅರ್ಪಿಸಿದ್ದಾರೆ ಎಂದರು.

ಮೇಯರ್ ಶಿವಕುಮಾರ್, ನಗರ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ವಕ್ತಾರ ಮಹೇಶರಾಜೇ ಅರಸ್, ಜಿಲ್ಲಾ ವಕ್ತಾರ ವಸಂತಕುಮಾರ್ ಉಪಸ್ಥಿತರಿದ್ದರು.

ಅಂಬೇಡ್ಕರ್ ಆಶಯದಂತೆ ಮೋದಿ ಸರ್ಕಾರದ ಆಡಳಿತ

ಮೈಸೂರು,ಜ.8(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಶೋಷಿತರ ಏಳಿಗೆಗೆ ಶ್ರಮಿಸುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅಭಿಪ್ರಾಯಪಟ್ಟಿದ್ದಾರೆ.




ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಭಾನುವಾರ ನಡೆದ ದಲಿತ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಮಾರೋಪದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವೇ ವಂಶಪಾರಂಪರ್ಯ ಪಕ್ಷ. ಒಂದೇ ಕುಟುಂಬಕ್ಕೆ ಕೇಂದ್ರೀಕೃತವಾದ ಪಕ್ಷವು ದೇಶದ ಹಿತ ಕಾಯುವಲ್ಲಿ ವಿಫಲವಾಗಿದೆ. ಆದರೆ ಬಿಜೆಪಿ ಸರ್ಕಾರ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಆಶಯದಂತೆ ಕೆಲಸ ಮಾಡುತ್ತಿದೆ. ಗ್ರಾಮೀಣ ಪ್ರದೇಶದಿಂದ ಬಂದ ನಾನೂ ಒಳಗೊಂಡಂತೆ ನಗರಪಾಲಿಕೆ ಸದಸ್ಯರಾಗಿದ್ದ ಮುನಿಸ್ವಾಮಿ ಇಂದು ಸಂಸದರಾಗಲು ಸಂವಿಧಾನವೇ ಕಾರಣ. ಚಹಾ ಮಾರುತ್ತಿದ್ದವರು ದೇಶದ ಪ್ರಧಾನಮಂತ್ರಿಯಾಗಿ ಕೆಲಸ ಮಾಡಲು ಸಂವಿಧಾನದಲ್ಲಿ ಕೊಟ್ಟ ಕೊಡುಗೆಯಿಂದ ಸಾಧ್ಯವಾಗಿದೆ. ಬಿಜೆಪಿ ಸರ್ಕಾರದಿಂದ ಸಂವಿಧಾನದ ಆಶಯಕ್ಕೆ ತಕ್ಕಂತೆ ಆಡಳಿತ ನಡೆಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅಭಿವೃದ್ಧಿಯನ್ನು ಮಾಡುತ್ತಿದ್ದಾರೆ. ದೇಶ ಎಲ್ಲ ರಂಗಗಳಲ್ಲೂ ಪ್ರಗತಿ ಹೊಂದುತ್ತಿದೆ ಎಂದರು.

ಕಾಂಗ್ರೆಸ್‌ನಿಂದ ದಲಿತರ ಏಳಿಗೆ ಸಾಧ್ಯವಿಲ್ಲ. ಡಾ.ಅಂಬೇಡ್ಕರ್ ಅವರನ್ನು 1952 ಮತ್ತು 1954ರ ಲೋಕಸಭಾ ಚುನಾವಣೆಯಲ್ಲಿ ಸೋಲಿಸಿದ ಕೀರ್ತಿಗೆ ಕಾಂಗ್ರೆಸ್‌ಗೆ ದೊರೆತಿದೆ. ಕಾಂಗ್ರೆಸ್ ಕೇವಲ ಡಾ.ಅಂಬೇಡ್ಕರ್ ಅವರ ಫೋಟೋ ಇಟ್ಟುಕೊಂಡು ರಾಜಕಾರಣ ಮಾಡುತ್ತಿದ್ದರೆ, ಮೋದಿ ಸರ್ಕಾರ ಅವರ ಪಂಚ ಸ್ಥಳಗಳನ್ನು ಅಭಿವೃದ್ಧಿಪಡಿಸಲು ತೀರ್ಮಾನ ಮಾಡಿ ಗೌರವ ಕೊಡುವ ಕೆಲಸ ಮಾಡುತ್ತಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾಗಿ ಹೆಚ್ಚಳ ಮಾಡುವ ಮೂಲಕ ದಲಿತರ ಬಗ್ಗೆ ಬಿಜೆಪಿಗೆ ಇರುವ ಬದ್ಧತೆ ಪ್ರದರ್ಶಿಸಲಾಗಿದೆ. ಹಲವು ವರ್ಷಗಳಿಂದ ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಇಟ್ಟಿದ್ದ ಬೇಡಿಕೆಯನ್ನು ಸರ್ಕಾರ ಈಡೇರಿಸಿರುವುದನ್ನು ಜನರಿಗೆ ಮನವರಿಕೆ ಮಾಡಬೇಕು. ದಲಿತರ ಪರವಾಗಿ ಸರ್ಕಾರ ಹಲವಾರು ಯೋಜನೆ ರೂಪಿಸಿ ಅನುಷ್ಠಾನಕ್ಕೆ ತರಲಾಗಿದೆ. ಅವುಗಳನ್ನು ಮತದಾರರಿಗೆ ಮನವರಿಕೆ ಮಾಡಿಕೊಡಬೇಕು ಎಂದು ತಿಳಿಸಿದರು.

ಖ್ಯಾತ ಹಿರಿಯ ಪತ್ರಕರ್ತ ಕೆ.ಸತ್ಯನಾರಾಯಣ ನಿಧನ

ಬೆಂಗಳೂರು, ಜ.8– ಹಿರಿಯ ಪತ್ರಕರ್ತ ಮತ್ತು ಕನ್ನಡಪ್ರಭ ಪತ್ರಿಕೆಯ ಮಾಜಿ ಸಂಪಾದಕರಾದ ಕೆ. ಸತ್ಯನಾರಾಯಣ ಭಾನುವಾರ ನಿಧನರಾಗಿದ್ದಾರೆ.



ತಾಯ್ನಾಡು ಪತ್ರಿಕೆಯ ಮೂಲಕ ಪತ್ರಿಕೋದ್ಯಮಕ್ಕೆ ಕಾಲಿರಿಸಿದ್ದ ಸತ್ಯನಾರಾಯಣ ಅವರು, ಕನ್ನಡಪ್ರಭ ಪತ್ರಿಕೆಯಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಕಾರ್ಯ ನಿರ್ವಹಿಸಿದ್ದರು. ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದರು. ಸತ್ಯನಾರಾಯಣ ಅವರು ತಮ್ಮ ಅಂಕಣಗಳ ಮೂಲಕ ಸಮಕಾಲೀನ ರಾಜಕೀಯ, ವಾಣಿಜ್ಯ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಿದ್ದರು. ಇಳಿವಯಸ್ಸಿನಲ್ಲೂ ಅಂಕಣ ಬರೆಯುತ್ತಿದ್ದ ಅವರು, ತಮ್ಮೊಳಗಿನ ಪತ್ರಕರ್ತನನ್ನು ಜಾಗೃತವಾಗಿಟ್ಟುಕೊಂಡಿದ್ದರು. ಬೆಂಗಳೂರಿನ ಜಯನಗರದ ಎಲ್‌ಐಸಿ ಕಾಲೋನಿಯಲ್ಲಿನ ತಮ್ಮ ನಿವಾಸದಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ. ಕನ್ನಡದ ಜೊತೆಗೆ ಇಂಗ್ಲಿಷ್‌ನಲ್ಲಿ ಸರಳ ಶೈಲಿಯಲ್ಲಿ ಬರೆಯುತ್ತಿದ್ದರು. ಅವರು ಹಣಕಾಸು, ವ್ಯವಹಾರ ಮತ್ತು ಬಜೆಟ್ ವರದಿಗಾರಿಕೆಯಲ್ಲಿ ಪರಿಣತರಾಗಿದ್ದರು. ಮೃತರು ಪತ್ನಿ ವೆಂಕಮ್ಮ ಹಾಗೂ ಪುತ್ರಿ ಅಪೂರ್ವ ಅವರನ್ನು ಅಗಲಿದ್ದಾರೆ. ಅವರಿಗೆ 82 ವರ್ಷ ವಯಸ್ಸಾಗಿತ್ತು.

ರಾಜರ ಆಳ್ವಿಕೆ ಕಾಲದಿಂದಲೂ ಹಾಸನ ಜಿಲ್ಲೆ ತನ್ನದೇ ಮಹತ್ವ ಹೊಂದಿದೆ

ಶಾಸಕ ಎಸ್.ಎ.ರಾಮದಾಸ್ ಅಭಿಮತ

ಮೈಸೂರು,ಜ.8(ಎಂಟಿವೈ)– ಇಸ್ರೋದ ಕಚೇರಿಯನ್ನು ಹೊಂದಿರುವ ಹಾಸನ ಜಿಲ್ಲೆ ರಾಜರ ಆಳ್ವಿಕೆ ಕಾಲದಿಂದಲೂ ತನ್ನದೇ ಮಹತ್ವವಿದೆ ಹೊಂದಿದೆ ಎಂದು ಶಾಸಕ ಎಸ್.ಎ.ರಾಮದಾಸ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಹಾಸನ ಜಿಲ್ಲಾ ಬಳಗವು ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ 2023ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ರಾಜ್ಯದಲ್ಲಿ ಹಾಸನ ಜಿಲ್ಲೆಗೆ ತನ್ನದೇ ಆದ ಮಹತ್ವವಿದೆ. ರಾಜರ ಆಳ್ವಿಕೆ ಕಾಲದಿಂದ ಪ್ರಸ್ತುತ ಸಂದರ್ಭದವರೆಗೂ ಹಾಸನ ಜಿಲ್ಲೆ ಗಮನಾರ್ಹ ಸನ್ನಿವೇಶಕ್ಕೆ ಕಾರಣವಾಗಿದೆ. ಹಾಸನ ಜಿಲ್ಲೆಯವರನ್ನು ಜೋರು ಎನ್ನುತ್ತಾರೆ. ಅದರ ಜೊತೆಗೆ ಶಾಂತ ಸ್ವಭಾವಿಗಳು ಎಂತಲೂ ಹೆಸರು ಗಳಿಸಿದ್ದಾರೆ. ಅಶೋಕ ಚಕ್ರವರ್ತಿಯ ಆಳ್ವಿಕೆಯಲ್ಲಿ ಶಾಂತಿ ಸಂದೇಶ ಸಾರುವ ಮೂಲಕ ಹಾಸನ ಜಿಲ್ಲೆಯವರಲ್ಲಿ ಶಾಂತ ಸ್ವಭಾವ ನೆಲೆಯೂರಲು ಕಾರಣರಾದರು. ಹೊಯ್ಸಳರ ಆಳ್ವಿಕೆ ಕಾಲದಲ್ಲಿ ತನ್ನ ಆಡಳಿತ ವ್ಯವಸ್ಥೆಯಲ್ಲಿ ಹಾಸನವನ್ನು ಮಾದರಿಯಾಗಿಸಿದರು. ಹಾಸನ ಜಿಲ್ಲೆಯನ್ನು ಶಿಲ್ಪಕಲೆಗೆ ಹೆಸರುವಾಸಿಗೊಳಿಸಿದರು. ಬೇಲೂರು, ಹಳೇಬೀಡಿನಲ್ಲಿರುವ ದೇವಾಲಯಗಳು ಶಿಲ್ಪಕಲೆಗೆ ಪ್ರಸಿದ್ಧಿಯಾಗಿವೆ. ಧಾರ್ಮಿಕವಾಗಿ ಶಕ್ತಿಕೇಂದ್ರೀಕೃತ ದೇವಾಲಯಗಳು ಹಾಸನದಲ್ಲಿವೆ ಎಂದರು.



ರಾಜಕೀಯ ಪಕ್ಷಗಳ ಭೇದಭಾವವನ್ನು ಹೊರತುಪಡಿಸಿ ನೋಡಿದಾಗ ಕನ್ನಡಿಗರೊಬ್ಬರು ದೇಶದ ಪ್ರಧಾನಿಯಾಗಿದ್ದು ಹೆಮ್ಮೆ ಪಡುವ ಸಂಗತಿ. ಆಡಳಿತದ ವ್ಯವಸ್ಥೆಯಲ್ಲಿ ಉತ್ತರ ಕರ್ನಾಟಕದವರೇ ಮುಖ್ಯಮಂತ್ರಿಯಾಗುತ್ತಿದ್ದ ಸಂದರ್ಭದಲ್ಲಿ ದಕ್ಷಿಣ ಕರ್ನಾಟಕದಿಂದ ಮುಖ್ಯಮಂತ್ರಿಯಾದದ್ದು ಹೆಚ್.ಡಿ.ದೇವೇಗೌಡರು. ಮುಖ್ಯಮಂತ್ರಿಯಾಗಿ, ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ ದೇವೇಗೌಡರನ್ನು ಪಕ್ಷಾತೀತವಾಗಿ ಸಂಭ್ರಮಿಸಿದ್ದೇವೆ ಎಂದು ಹೇಳಿದ ಅವರು, ನಾನು 30 ವರ್ಷಗಳ ರಾಜಕೀಯ ಅನುಭವದಲ್ಲಿ ಹಾಸನ ಮೂಲದ ಹಲವು ಅಧಿಕಾರಿಗಳು ದಕ್ಷತೆಯಿಂದ ಕೆಲಸ ನಿರ್ವಹಿಸಿದ್ದನ್ನು ಗಮನಿಸಿದ್ದೇನೆ. ಮೈಸೂರಲ್ಲಿ ನೆಲೆಸಿರುವ ಹಾಸನ ಮೂಲದವರು ನಗರದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಸಲಹೆ ನೀಡಿದರು.

ಹೆಚ್.ಡಿ.ದೇವೇಗೌಡರ ಕೊಡುಗೆ ಅಪಾರ: ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಿದ ಬಳಿಕ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಶಾಸಕರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಪ್ರಧಾನಮಂತ್ರಿಯಾಗಿ ಒಕ್ಕಲಿಗ ಸಮಾಜಕ್ಕೆ, ರಾಜ್ಯ ಹಾಗೂ ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಹಾಸನ ಜಿಲ್ಲೆಯನ್ನು ಪ್ರತಿನಿಧಿಸಿದ ದೇವೇಗೌಡರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದರು. 10 ತಿಂಗಳು ಪ್ರಧಾನಿಯಾಗಿದ್ದರೂ ಮಾಡಿದ ಕೆಲಸ ಅಪಾರ. ಎಲ್ಲಾ ವರ್ಗದವರಿಗೆ ಅಧಿಕಾರ ಸಿಗಬೇಕೆಂದು ಸ್ಥಳೀಯ ಸಂಸ್ಥೆಗಳಿಗೆ ಮೀಸಲಾತಿ ಹಾಗೂ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸಿದರು. ಹೆದ್ದಾರಿ ನಿರ್ಮಾಣ ಮಾಡಿದರು. ಬೆಂಗಳೂರಿನಲ್ಲಿ ಮೆಟ್ರೋ ರೈಲು, ನೀರಾವರಿ ಯೋಜನೆ, ಸಾಲಮನ್ನಾ ಯೋಜನೆಯನ್ನು ಜಾರಿಗೊಳಿಸಿ ಲಕ್ಷಾಂತರ ಮಂದಿಗೆ ನೆರವಾದರು.

ರೈತರಿಗೆ ನೀಡಿದ ಕೊಡುಗೆ ಹಿನ್ನೆಲೆಯಲ್ಲಿ ಪಂಜಾಬಿನಲ್ಲಿ ಭತ್ತದ ತಳಿಯೊಂದಕ್ಕೆ ಹೆಚ್.ಡಿ.ದೇವೇಗೌಡರ ಹೆಸರನ್ನು ಇಟ್ಟಿದ್ದಾರೆ. ಪ್ರಧಾನ ಮಂತ್ರಿಯಾದ ಬಳಿಕ ರಾಗಿ ಮುದ್ದೆಯನ್ನು ದೇಶಕ್ಕೆ ಪರಿಚಯಿಸಿದ್ದಾರೆ. ಮೈಸೂರಿನ ಬಗ್ಗೆ ಅಪಾರ ಪ್ರೀತಿ ಇಟ್ಟುಕೊಂಡಿರುವ ದೇವೇಗೌಡರು ಒಕ್ಕಲಿಗ ಸಮಾಜಕ್ಕೆ ಶಕ್ತಿ ತುಂಬಿದ್ದಾರೆ. ಇದಲ್ಲದೆ ಹೆಚ್.ಸಿ. ಶ್ರೀಕಂಠಯ್ಯರವರು, ಪುಟ್ಟಸ್ವಾಮಿಗೌಡರು ಸಹ ಒಕ್ಕಲಿಗ ಸಮಾಜಕ್ಕೆ ಕೆಲಸ ಮಾಡಿದ್ದಾರೆ. ಒಕ್ಕಲಿಗ ಸಮಾಜದ ನಾಯಕರಾದ ಹೆಚ್.ಡಿ. ದೇವೇಗೌಡರು, ಎಸ್.ಎಂ. ಕೃಷ್ಣ, ಡಿ.ಬಿ. ಸದಾನಂದಗೌಡ, ಹೆಚ್.ಡಿ.ಕುಮಾರಸ್ವಾಮಿ ಕಪ್ಪುಚುಕ್ಕೆ ಇಲ್ಲದೆ ಆಡಳಿತ ನಡೆಸಿದ್ದಾರೆ. ಅಧಿಕಾರ, ಐಶ್ವರ್ಯ ಯಾವುದೂ ಶಾಶ್ವತವಲ್ಲ. ಜಾತಿ ಹಿಂದೆ ಹೋದವರು ಯಾರೂ ಬೆಳೆದಿಲ್ಲ ಆದ್ದರಿಂದ ಎಲ್ಲಾ ಸಮಾಜದವರನ್ನು ಪ್ರೀತಿಸಿದಾಗ ಮಾತ್ರ ಬೆಳೆಯಲು ಸಾಧ್ಯ. ಹಾಸನ ಬಳಗಕ್ಕೆ ಮುಡಾದಿಂದ ನಿವೇಶನ ಮಾಡಿಸಿ ಕೊಡುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ. ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಮೈಸೂರಲ್ಲಿ ನೆಲೆಸಿರುವ ಹಾಸನ ಮೂಲದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮದಲ್ಲಿ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಗಂಗಾಧರ್, ಡಾ.ಎಂ.ಬಿ. ಮಂಜೇಗೌಡ, ಉದ್ಯಮಿ ಬಾಲಾಜಿ ಶೇಖರ್, ಹಾಸನ ಜಿಲ್ಲಾ ಬಳಗದ ಅಧ್ಯಕ್ಷೆ ಪಿ. ಶಾರದಮ್ಮ, ಗೌರವಾಧ್ಯಕ್ಷ ಬಿ.ಬಿ. ರಾಮಕೃಷ್ಣ, ಉಪಾಧ್ಯಕ್ಷರಾದ ಪುಟ್ಟಸ್ವಾಮಿಗೌಡ, ಯಧುನಾಥ್, ರಾಮಚಂದ್ರ, ಪ್ರಧಾನ ಕಾರ್ಯದರ್ಶಿ, ಬಿ.ಬಿ. ರಂಗೇಗೌಡ, ಕೆ.ಎನ್. ಅಣ್ಣೇಗೌಡ, ಡಿ.ಎಂ. ಸುಬ್ಬೇಗೌಡ, ಬಿ.ಜೆ. ರೇವಣ್ಣ ಹಾಗೂ ಇನ್ನಿತರರು ಹಾಜರಿದ್ದರು.

ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ 150ಕ್ಕೂ ಹೆಚ್ಚು ಸ್ಥಾನ

ಜಿಲ್ಲಾ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷ ವೆಂಕಟರಮಣಶೆಟ್ಟಿ ವಿಶ್ವಾಸ

ತಿ.ನರಸೀಪುರ, ಜ.8– ಮುಂಬರುವ ಚುನಾವಣೆಯಲ್ಲಿ ಬಿಜೆಪಿ 150ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ಮೂಲಕ 2ನೇ ಬಾರಿಗೆ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷ ವೆಂಕಟರಮಣಶೆಟ್ಟಿ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಆಲಗೂಡು ಗ್ರಾಮದಲ್ಲಿ (ಬೈರಾಪುರ ಶಕ್ತಿ ಕೇಂದ್ರದ ಬೂತ್ ಸಂಖ್ಯೆ 140) ನಡೆದ ಬೂತ್ ವಿಜಯ ಅಭಿಯಾನದಲ್ಲಿ ಬೂತ್ ಅಧ್ಯಕ್ಷ ಮಂಟಪ್ಪ ನಾಯಕರ ನಿವಾಸಕ್ಕೆ ಪಕ್ಷದ ಬಾವುಟ ಕಟ್ಟಿ ಮಾತನಾಡಿದ ಅವರು, ಬೂತ್ ವಿಜಯ ಸಂಕಲ್ಪ ಯಾತ್ರೆ ಮಾಡಿದ್ದ ಹಿನ್ನೆಲೆಯಲ್ಲಿ ಪಕ್ಷ ತ್ರಿಪುರಾ, ಉತ್ತರ ಪ್ರದೇಶ, ಗುಜರಾತ್ ಚುನಾವಣೆಯಲ್ಲಿ ದೊಡ್ಡ ಯಶಸ್ಸು ಗಳಿಸಿದೆ. ಹಾಗಾಗಿ ಕರ್ನಾಟಕದಲ್ಲೂ ಯಶಸ್ಸು ಗಳಿಸಿ ಮತ್ತೊಮ್ಮೆ ಅಧಿಕಾರ ಹಿಡಿಯಬೇಕೆಂಬ ನಿಟ್ಟಿನಲ್ಲಿ ಪಕ್ಷದ ಹಿರಿಯರ ನಿರ್ದೇಶನದಂತೆ ರಾಜ್ಯದ 58,150 ಬೂತ್‌ಗಳಲ್ಲಿ ಏಕ ಕಾಲದಲ್ಲಿ ಬೂತ್ ವಿಜಯ ಸಂಕಲ್ಪ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದರು.



ವರುಣಾ ಕ್ಷೇತ್ರದ ಬೂತ್ ಅಧ್ಯಕ್ಷರ ಮನೆ ಮೇಲೆ ಪಕ್ಷದ ಧ್ವಜ ಹಾರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಪ್ರತಿ ಬೂತ್‌ನಲ್ಲಿ ಕನಿಷ್ಠ 25 ಮನೆ ಮೇಲೆ ಬಾವುಟ ಹಾರಿಸುವ ಕಾರ್ಯಕ್ರಮ ನಡೆಯಲಿದೆ. ವರುಣಾದಲ್ಲಿ ಪಕ್ಷ ಗೆಲುವಿಗೆ ಬೇಕಾದ ಉತ್ತಮ ವಾತಾವರಣ ನಿರ್ಮಾಣ ಮಾಡಲು ಕಾರ್ಯಕರ್ತರು ಸಿದ್ಧರಾಗಿದ್ದೇವೆ ಎಂದರು.

ಜಿಲ್ಲಾ ಕಾರ್ಯದರ್ಶಿ ಎ.ಎನ್.ರಂಗೂ ನಾಯಕ್ ಮಾತನಾಡಿ, ರಾಜ್ಯದಲ್ಲಿ ಮೇ ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಬೂತ್ ವಿಜಯ ಅಭಿಯಾನಕ್ಕೆ ಕರೆ ಕೊಟ್ಟಿದ್ದಾರೆ. ಪ್ರತಿ ಬೂತ್‌ನಲ್ಲಿ ಪಕ್ಷದ ಸದಸ್ಯರ ವ್ಯಾಟ್ಸಪ್ ಗ್ರೂಪ್ ರಚಿಸಿ, ಪೇಜ್ ಪ್ರಮುಖ್ ಹಾಗೂ ಬೂತ್ ಸಮಿತಿ ಸದಸ್ಯರು, ಬಿಎಲ್‌ಎ2 ಕಾರ್ಯದರ್ಶಿಗಳನ್ನೊಳಗೊಂಡಂತೆ ಪ್ರತಿ ಬೂತ್ ನಲ್ಲಿ ಸಮಿತಿ ಪರಿಶೀಲಿಸುವಂತೆ ಸೂಚಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳ ವಿವರವುಳ್ಳ ಕರಪತ್ರವನ್ನು ಪ್ರತಿ ಮನೆ ಮನೆಗೆ ತಲುಪಿಸುವಂತೆ ಪಕ್ಷ ಕರೆಕೊಟ್ಟ ಹಿನ್ನೆಲೆಯಲ್ಲಿ ಕಾರ್ಯಕರ್ತರು, ಅಧ್ಯಕ್ಷರು ಬೂತ್ ವಿಜಯ ಅಭಿಯಾನದ ಮೂಲಕ ಕಾರ್ಯ ಪ್ರವೃತ್ತರಾಗಿದ್ದಾರೆ. ಈಗಾಗಲೇ 100ಕ್ಕೂ ಹೆಚ್ಚು ಬೂತ್‌ಗಳಲ್ಲಿ ಅಭಿಯಾನ ಮುಗಿದಿದ್ದು, ಜ.12ರವರೆಗೆ 261 ಬೂತ್‌ಗಳಲ್ಲಿ ಅಭಿಯಾನ ನಡೆಯಲಿದೆ. ಹಾಗೆಯೇ ವರುಣಾದಲ್ಲಿ ಬಿಜೆಪಿ ಜಯ ಗಳಿಸಲಿದೆ ಎಂದರು.

ಈ ವೇಳೆ ಪುರಸಭಾ ಸದಸ್ಯ ಚಿಕ್ಕಮಹದೇವ, ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಮಂಜು, ಮುಖಂಡರಾದ ಶ್ರೀಕಂಠಸ್ವಾಮಿ, ಕುಮಾರ, ಮಂಜುನಾಥ್, ರಮೇಶ್, ರಾಜು, ಸೋಮಣ್ಣ ಹಾಜರಿದ್ದರು.

ಸಮಾಜ ಸೇವೆಯಿಂದ ಉನ್ನತ ಬೆಳವಣಿಗೆ ಸಾಧ್ಯ



ಹೆಚ್.ಡಿ.ಕೋಟೆ, ಜ.8– ಸಮಾಜ ಸೇವೆಯಿಂದ ಉನ್ನತ ಬೆಳವಣಿಗೆ ಸಾಧ್ಯ ಎಂದು ಮೈಸೂರಿನ ರಕ್ತನಿಧಿ ಹಿರಿಯ ತಜ್ಞ ಡಾ.ಮಂಜುನಾಥ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಯುರ್ವೇದಿಕ್ ಆಸ್ಪತ್ರೆ ಆವರಣದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 125ನೇ ಜನ್ಮ ದಿನಾಚರಣೆ ಅಂಗವಾಗಿ ನಡೆದ ರಕ್ತದಾನ ಶಿಬಿರ ಹಾಗೂ ನೇತ್ರದಾನ ನೋಂದಣಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯೆ ಇದ್ದಷ್ಟು ವ್ಯಕ್ತಿ ಮೌಲ್ಯ ಹೆಚ್ಚಾಗುತ್ತದೆ. ಅದೇ ರೀತಿ ಸಮಾಜ ಸೇವೆ ಮಾಡಿದಷ್ಟು ಉನ್ನತವಾಗಿ ಬೆಳೆಯಬಹುದು. ಹಾಗಾಗಿ ಯುವಕರು ಹೆಚ್ಚು ಸಮಾಜ ಸೇವೆಯಲ್ಲಿ ತೊಡಗುವಂತೆ ಕರೆ ನೀಡಿದರು. ತಾಲೂಕಿನಲ್ಲಿರುವ ಸಿರಿ ಸಂಪತ್ತು ಬೇರೆಲ್ಲೂ ಇಲ್ಲ. ಅದೇ ರೀತಿ ಇಲ್ಲಿನ ಮುಗ್ಧ ಜನರು ಕೂಡ ಬೇರೆಲ್ಲೂ ಇಲ್ಲ. ತಾಲೂಕಿನ ಜನರ ಮಾತು ಮತ್ತು ನಡೆನುಡಿ ಒರಟಾಗಿರಬಹುದು. ಆದರೆ ಹೃದಯವಂತಿಕೆ ಉಳ್ಳವರು. ಸಹಾಯಕ್ಕೆ ನಿಂತರೆ ಪ್ರಾಣ ತ್ಯಾಗಕ್ಕೂ ಸಿದ್ಧ ಎಂದರು.

ಎಐಡಿವೈಓ ಸಂಘಟನೆ ಅಧ್ಯಕ್ಷ ಟಿ.ಆರ್.ಸುನೀಲ್ ಮಾತನಾಡಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಕಂಡ ಸಮ ಸಮಾಜ ನಿರ್ಮಾಣಕ್ಕೆ ಯುವಕರು ಅನ್ಯಾಯದ ವಿರುದ್ಧ ಹೋರಾಡಬೇಕಿದೆ. ಜನರ ಸಂಕಷ್ಟಗಳಿಗೆ ಸ್ಪಂದಿಸಬೇಕು. ಜೊತೆಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಪಡಿಸಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲ ಸೌಕರ್ಯ ಒದಗಿಸಬೇಕು. ಆರೋಗ್ಯದ ವ್ಯಾಪಾರೀಕರಣ ತಡೆಗಟ್ಟುವ ನಿಟ್ಟಿನಲ್ಲಿ ಯುವಜನರು ಮುಂದಾಗಬೇಕು ಎಂದರು.

ಈ ವೇಳೆ 30 ವಿದ್ಯಾರ್ಥಿಗಳು ರಕ್ತದಾನ ಹಾಗೂ 16 ವಿದ್ಯಾರ್ಥಿಗಳು ನೇತ್ರದಾನ ಮಾಡಲು ನೋಂದಣಿ ಮಾಡಿಸಿದರು. ಈ ವೇಳೆ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಸೋಮಣ್ಣ, ಎಐಡಿವೈಓ ಜಿಲ್ಲಾ ಕಾರ್ಯದರ್ಶಿ ಸುಮಾ, ಸದಸ್ಯರಾದ ಅಭಿನಂದನ್, ನೀತುಶ್ರೀ, ಸುಭಾನ್, ವೈದ್ಯರು ಇತರರಿದ್ದರು.

ವಿಜೃಂಭಣೆಯ ಶ್ರೀತ್ರಿಪುರ ಸುಂದರಿ ಅಮ್ಮನವರ ರಥೋತ್ಸವ

ಮೂಗೂರು, ಜ.8– ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರ ಮಹಾ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಾನುವಾರ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವದ ಅಂಗವಾಗಿ ದೇವಾಲಯದಲ್ಲಿ ಮುಂಜಾನೆಯೇ ದೇವಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯ ನಡೆಸಿ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು. ಮಧ್ಯಾಹ್ನ 3.30ಕ್ಕೆ ದೇವಾಲಯದ ಆವರಣದಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್, ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ತಹಸೀಲ್ದಾರ್ ಸಿ.ಜಿ.ಗೀತಾ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಬಳಿಕ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿಸಿ ನಂತರ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ತ್ರಿಪುರದೇವಿಗೆ ಜೈ, ತ್ರಿಪುರ ಸುಂದರಿ ಅಮ್ಮನವರಿಗೆ ಜೈ ಎಂದು ಜೈಕಾರ ಹಾಕುವ ಮೂಲಕ ರಥ ಎಳೆದು ಭಕ್ತಿಭಾವ ಮೆರೆದರು. ದೇವಾಲಯದ ಆವರಣದಿಂದ ಹೊರಟ ರಥ ಮೊದಲಿಗೆ ಅಂಗಡಿ ಬೀದಿ ತೆರಳಿ ಅಲ್ಲಿಂದ ರಥದ ಬೀದಿ ನಂತರ ಬಂಡಿ ಬೀದಿ ಮಾರ್ಗವಾಗಿ ಸಂಚರಿಸಿ ಸ್ವಸ್ಥಾನ ತಲುಪಿತು.

ಪ್ರತಿ ವರ್ಷದಂತೆ ಈ ಬಾರಿಯೂ ಮೂಗೂರು ಗೆಳೆಯರ ಬಳಗ ರಥಕ್ಕೆ ಬೃಹತ್ ಹೂವಿನ ಹಾರ ಅರ್ಪಿಸಿದರು. ರಥೋತ್ಸವದ ವೇಳೆ ಮುತ್ತೈದೆಯರು, ನೂತನ ದಂಪತಿಗಳು ಹಾಗೂ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಹಣ್ಣು–ಜವನ ಎಸೆದು ಪ್ರಾರ್ಥಿಸಿದರು. ಅಲ್ಲದೇ ಭಕ್ತರಿಗೆ ಸೇವಾರ್ಥದಾರರು ಪ್ರಸಾದ ವಿನಿಯೋಗ ಮಾಡಿದರು. ಕಳೆದ 2 ವರ್ಷಗಳಿಂದ ಕೊರೊನಾ ಹಿನ್ನಲೆಯಲ್ಲಿ ಸರಳವಾಗಿ ನಡೆದಿದ್ದ ರಥೋತ್ಸವ ಈ ಬಾರಿ ಅದ್ದೂರಿಯಾಗಿ ನಡೆಯಿತು. ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಭಕ್ತರು ರಥೋತ್ಸವವನ್ನು ಕಣ್ತುಂಬಿಕೊಂಡರು.

ಈ ವೇಳೆ ಉಪ ತಹಸೀಲ್ದಾರ್ ಲಕ್ಷ್ಮಿ, ತಾ.ಪಂ ಮಾಜಿ



ಸದಸ್ಯ ಚಂದ್ರಶೇಖರ್, ಗೌಡರ ನಾಗರಾಜು, ಮುಖಂಡರಾದ ಎಂ.ಡಿ.ಬಸವರಾಜು, ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಪಾರುಪತ್ತೇದಾರ ಸಾಗರ್, ಮಾಜಿ ಅಧ್ಯಕ್ಷ ಜಗದೀಶ ಮೂರ್ತಿ, ಎಂ.ಕೆ.ಸಿದ್ದರಾಜು, ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಡಾ.ಶಿವಕುಮಾರ್, ಎಂ.ನಾಗೇಂದ್ರ, ಕುಮಾರಸ್ವಾಮಿ, ಸಮುದಾಯದ ಮುಖಂಡರು, ಅರ್ಚಕ ಸಮೂಹ, ಗ್ರಾಮಸ್ಥರು ಉಪಸ್ಥಿತರಿದ್ದರು.

ಉಕ್ಕಲಗೆರೆ ಗ್ರಾಪಂಗೆ ನಾಗಲಾಂಬಿಕೆ ಉಪಾಧ್ಯಕ್ಷೆ



ತಿ.ನರಸೀಪುರ, ಜ.8– ತಾಲೂಕಿನ ಉಕ್ಕಲಗೆರೆ ಗ್ರಾಪಂ ಉಪಾಧ್ಯಕ್ಷೆಯಾಗಿ ನಾಗಲಾಂಬಿಕೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷೆ ಮಂಜುಳಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ನಾಗಲಾಂಬಿಕಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಿಡಿಪಿಓ ಭವ್ಯ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಈ ವೇಳೆ ಅಧ್ಯಕ್ಷೆ ಶಿವಮ್ಮ ಸೇರಿದಂತೆ ನಿಕಟಪೂರ್ವ ಉಪಾಧ್ಯಕ್ಷೆ ಮಂಜುಳಾ, ಸದಸ್ಯರಾದ ಲತಾ, ನಿಂಗರಾಜು, ಆರ್.ರವಿಶಂಕರ್, ಮಹದೇವಮ್ಮ, ಮಹದೇವ ಚುನಾವಣೆ ಪ್ರಕ್ರಿಯೆಯಲ್ಲಿ ಉಪಸ್ಥಿತರಿದ್ದು, ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ಸದಸ್ಯರಾದ ಪುಟ್ಟಮ್ಮ, ಶಿವಪ್ರಸಾದ್, ಎಂ.ಕುಮಾರ್, ರಾಜಮ್ಮ, ಸಿದ್ದರಾಜು, ಮಲ್ಲೇಶಪ್ಪ ಗೈರಾಗಿದ್ದರು.

ನೂತನ ಉಪಾಧ್ಯಕ್ಷೆ ನಾಗಲಾಂಬಿಕಾ ಅವರನ್ನು ಅಭಿನಂದಿಸಿ ಮಾತನಾಡಿದ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್, ರಾಜ್ಯ ಮಟ್ಟದ ಆಡಳಿತವನ್ನು ಸ್ಥಳೀಯವಾಗಿ ನಡೆಸುವ ಸಲುವಾಗಿ ರಾಜೀವ್ ಗಾಂಧಿಯವರು ಪಂಚಾಯತ್ ರಾಜ್ ಕಾಯ್ದೆ ಜಾರಿಗೊಳಿಸಿ ಸ್ಥಳೀಯರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದರು. ಈ ಹಿಂದೆ ಗ್ರಾಪಂಗೆ ಸರ್ಕಾರದಿಂದ ಬರುತ್ತಿದ್ದ ಅನುದಾನ ಪಂಚಾಯ್ತಿಗೆ ಬರುವಷ್ಟರಲ್ಲೇ ಮಧ್ಯವರ್ತಿಗಳ ಪಾಲಾಗುತ್ತಿದ್ದನ್ನು ತಪ್ಪಿಸಲು ಕಾಯ್ದೆ ಜಾರಿ ಮಾಡಲಾಗಿತ್ತು. ಆದರೆ ಈಗಿನ ಬಿಜೆಪಿ ಸರ್ಕಾರ ಗ್ರಾಪಂ ಅಧ್ಯಕ್ಷರ ಅಧಿಕಾರ ಮೊಟಕು ಗೊಳಿಸಿ ಎಲ್ಲ ಅಧಿಕಾರವನ್ನು ಅಧಿಕಾರಿ ವರ್ಗಕ್ಕೆ ಕೊಡಲು ಹುನ್ನಾರ ನಡೆಸಿದೆ ಎಂದು ಆರೋಪಿಸಿದರು.

ಸ್ಥಳೀಯ ಆಡಳಿತಕ್ಕೆ ಸಂಚಕಾರ ತಂದು ಹಣಕಾಸಿನ ವ್ಯವಹಾರಕ್ಕೆ ಕಡಿವಾಣ ಹಾಕಿರುವ ಸರ್ಕಾರದ ನಡೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡಿದ ಅವಮಾನವಾಗಿದೆ. ಪಂಚಾಯ್ತಿಗೆ ಕೊಟ್ಟಿರುವ ಅಧಿಕಾರ ಯಾವುದೇ ಕಾರಣಕ್ಕೂ ಮೊಟಕಾಗಬಾರದೆಂಬ ಉದ್ದೇಶ ನನ್ನದಾಗಿದ್ದು ಸರ್ಕಾರದ ನಡೆಯನ್ನು ಖಂಡಿಸುತ್ತೇನೆ ಎಂದರು.

ಕೇರಳ ಮಾದರಿ ವೇತನ ಜಾರಿಯಾಗಲಿ: ರಾಜ್ಯ ಸರ್ಕಾರ ಇತ್ತೀಚೆಗೆ ಗ್ರಾಪಂ ಆಡಳಿತ ಹಾಗೂ ಸದಸ್ಯರು ಮತ್ತು ಅಧ್ಯಕ್ಷರ ಗೌರವ ಧನವನ್ನು ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಳ ಮಾಡಿದೆಯಾದರೂ, ಕೇರಳ ಮಾದರಿ ಕಾಯ್ದೆ ಜಾರಿಗೆ ತಂದು ಗೌರವಧನ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಎಪಿಎಂಸಿ ಮಾಜಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಪಿಡಿಓ ಕೃಷ್ಣಪ್ಪ, ಕಾರ್ಯದರ್ಶಿ ಮಹೇಶ್, ಗ್ರಾಪಂ ಮಾಜಿ ಸದಸ್ಯ ಎಂ.ರಾಜು, ಮುಖಂಡರಾದ ಮಹದೇವಸ್ವಾಮಿ, ನಾಗೇಂದ್ರ, ನಾಗರಾಜು, ಅಪ್ಪು ಪಾಪಣ್ಣಿ, ಸಿದ್ದರಾಮ, ರಾಜು, ಸಿದ್ದರಾಮ, ನಂಜುಂಡಯ್ಯ, ನಾಗರಾಜು, ನಾರಾಯಣ, ಶಿವರುದ್ರಪ್ಪ, ಪಟೇಲ್ ಮಹದೇವಯ್ಯ, ನಾಗಣ್ಣ, ಮಾಜಿ ಅಧ್ಯಕ್ಷ ದೇವರಾಜು, ಶಿವಕುಮಾರ್, ವಿಷಕಂಠ ಇತರರಿದ್ದರು.

ಗಾವಡಗೆರೆಯಲ್ಲಿ ಸಿದ್ದೇಶ್ವರ ಶ್ರೀಗೆ ಶ್ರದ್ಧಾಂಜಲಿ




ಹಿರೀಕ್ಯಾತನಹಳ್ಳಿ, ಜ.8– ಸಿದ್ದೇಶ್ವರ ಸ್ವಾಮಿಗಳು ಜಗತ್ತಿಗೆ ಜ್ಞಾನ ಕೊಟ್ಟ ಮಹಾನ್ ಪುರುಷ ಎಂದು ಗಾವಡಗೆರೆ ಗುರುಲಿಂಗ ಜಂಗಮ ಮಠದ ನಟರಾಜಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ಗಾವಡಗೆರೆ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಇತ್ತೀಚೆಗೆ ಲಿಂಗೈಕ್ಯರಾದ ವಿಜಯಪುರದ ಜ್ಞಾನ ಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ಶ್ರದ್ಧಾಂಜಲಿ ಹಾಗೂ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡ ಭಕ್ತರಿಗೆ ಯದುಪರಸೆ ಏರ್ಪಡಿಸಿ ಮಾತನಾಡಿದ ಅವರು, ಸಿದ್ದೇಶ್ವರ ಸ್ವಾಮೀಜಿಗಳು ಜಗತ್ತಿಗೆ ಜ್ಞಾನದ ದರ್ಶನ ಮಾಡಿಸಿ, ತಾವು ತೊಡುವ ಶರ್ಟ್‌ನಲ್ಲಿ ಕಿಸೆ ಬೇಡವೆಂದು ಹೇಳಿದ ಮಹಾಪುರುಷರು ಎಂದರು.

ಇದೇ ವೇಳೆ ಸದಾನಂದ ವಿದ್ಯಾರ್ಥಿಗಳ ವಿಜ್ಞಾನ ಕಲಿಕೆಗೆ ಮಠಕ್ಕೆ ಟಿವಿ ಕೊಡುಗೆ ನೀಡಿದರು. ಈ ವೇಳೆ ಹೂಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಮಠದ ಆಡಳಿತ ಅಧಿಕಾರಿ ಶಿವರಾಜ್, ಮಠದ ಭಕ್ತರಾದ ಶಿಲ್ಪಾಮಂಜುನಾಥ್, ವೆಂಕಟರಮಣ, ಶಿವು, ವಿಜಯಣ್ಣ, ನಾಗರಾಜಪ್ಪ, ಪುಟ್ಟಲಿಂಗಪ್ಪ, ಭರತ್, ಮಲ್ಲೇಶ್, ಮಂಜುನಾಥ್, ನೂರಾರು ಭಕ್ತರಿದ್ದರು.

ರಸ್ತೆಯಲ್ಲಿ ಹುಲಿ ಪ್ರತ್ಯಕ್ಷ: ಗ್ರಾಮಸ್ಥರು ಆತಂಕ

ಮಲ್ಕುಂಡಿ, ಜ.8– ಇಲ್ಲಿಗೆ ಸಮೀಪದ ದುಗ್ಗಹಳ್ಳಿಯಿಂದ ಶೆಟ್ಟಹಳ್ಳಿ ಗ್ರಾಮಕ್ಕೆ



ತೆರಳುವ ರಸ್ತೆಯಲ್ಲಿ ಶನಿವಾರ ರಾತ್ರಿ ಹುಲಿ ಪ್ರತ್ಯಕ್ಷವಾಗಿದ್ದು, ಈ ಭಾಗದ ಸಾರ್ವಜನಿಕರು ಆತಂಕಗೊಂಡಿದ್ದಾರೆ.

ಆಟೋ ಚಾಲಕರೊಬ್ಬರು ಪ್ರಯಾಣಿಕರನ್ನು ಹುಲ್ಲಹಳ್ಳಿಯಿಂದ ಶೆಟ್ಟಹಳ್ಳಿ ಗ್ರಾಮಕ್ಕೆ ಕರೆದೊಯ್ಯುತ್ತಿದ್ದ ವೇಳೆ ರಸ್ತೆ ಮಧ್ಯ ಹುಲಿ ಪ್ರತ್ಯಕ್ಷವಾಗಿದೆ. ಇದನ್ನು ಕಂಡ ಆಟೋದಲ್ಲಿದ್ದ ಪ್ರಯಾಣಿಕರು ಭಯಗೊಂಡಿದ್ದು, ಆಟೋ ಚಾಲಕ ತನ್ನ ಮೊಬೈಲ್‌ನಲ್ಲಿ ಹುಲಿ ಫೋಟೋವನ್ನು ಸೆರೆ ಹಿಡಿದಿದ್ದಾರೆ.

ಜಯ ಕರ್ನಾಟಕ ಹೋಬಳಿ ಅಧ್ಯಕ್ಷ ಕಾಶಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹುಲಿ, ಚಿರತೆ ಹಾವಳಿ ಹೆಚ್ಚಾಗಿದ್ದು, ಸಾರ್ವಜನಿಕರು ಆತಂಕಗೊಂಡಿದ್ದಾರೆ. ಈಚೆಗೆ ಬಳ್ಳೂರು ಹುಂಡಿ ಗ್ರಾಮದ ರೈತರೊಬ್ಬರ ಮೇಲೆ ಹುಲಿ ದಾಳಿ ಮಾಡಿತ್ತು. ಅರಣ್ಯಾಧಿಕಾರಿಗಳು ಹುಲಿ ಸೆರೆಗೆ ನಿರ್ಲಕ್ಷ ವಹಿಸಿದ್ದಾರೆ. ಈ ಬಗ್ಗೆ ಅರಣ್ಯ ಇಲಾಖೆಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಹುಲಿ, ಚಿರತೆ ಹಾಗೂ ಕಾಡಾನೆಗಳ ಹಾವಳಿಯಿಂದ ರೈತರು ಕಂಗಾಲಾಗಿದ್ದಾರೆ. ಹೀಗಾಗಿ ಅರಣ್ಯಾಧಿಕಾರಿಗಳು ಹುಲಿ ಸೆರೆಗೆ ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

ರಸ್ತೆ, ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ

ಬೈಲಕುಪ್ಪೆ ಜ.8– ಇಲ್ಲಿಗೆ ಸಮೀಪದ ಸುಂಕದಹಳ್ಳಿ ಹಾಗೂ ದಿಂಡಿಗಾಡು ಗ್ರಾಮಗಳಲ್ಲಿ 45 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಗುದ್ದಲಿ ಪೂಜೆ ನೆರವೇರಿಸಿದರು.

ದಿಂಡಿಗಾಡು ಗ್ರಾಮದಲ್ಲಿ ಪಡಿತರ ಉಪಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಾಕಷ್ಟು ಜನರು ಆಹಾರ ಪದಾರ್ಥ ಪಡೆಯಲು 4 ರಿಂದ 5 ಕಿಮೀ ಓಡಾಡುವ ಪರಿಸ್ಥಿತಿ ಇದ್ದಿದ್ದನ್ನು ಗಮನಿಸಿ ಅಧಿಕಾರಿಗಳೊಡನೆ ಚರ್ಚಿಸಿ ಜನರ ಸಮಸ್ಯೆಗೆ ಕೂಡಲೇ ಪಡಿತರ ಉಪಕೇಂದ್ರವನ್ನು ನೀಡಿದ್ದೇವೆ. ಪ್ರತಿಯೊಬ್ಬರು ಈ ಸೌಲಭ್ಯ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಪರಶಿವಮೂರ್ತಿ, ಚಂದ್ರಶೇಖರ್, ಸೋಮಶೇಖರ್, ಗ್ರಾಪಂ ಸದಸ್ಯರಾದ ಮಂಜು, ಮೋಹನ್



ಕುಮಾರ್, ಗುರುಪಾದ, ರಾಜಣ್ಣ, ರಂಗನಾಥ, ಎಇಇ ನವೀನ್, ಪಿಡಿಓ ಅಭಿ ಮೊಹಮ್ಮದ್, ಆಹಾರ ಇಲಾಖೆ ಅಧಿಕಾರಿ ಸಣ್ಣಸ್ವಾಮಿ, ಪಿಎಸ್ಐ ಬಸವರಾಜ್ ಸೇರಿದಂತೆ ಇತರರಿದ್ದರು.

ವ್ಯಕ್ತಿ ನಾಪತ್ತೆ

ತಿ.ನರಸೀಪುರ, ಜ.8– ಮಹದೇಶ್ವರ



ಬೆಟ್ಟಕ್ಕೆ ಹೋಗಿ ಬರುವುದಾಗಿ ಹೇಳಿ ಹೋದ ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತಾಲೂಕಿನ ಮಾದಿಗಹಳ್ಳಿ ಗ್ರಾಮದ ಪಾಪಣ್ಣ(55) ನಾಪತ್ತೆಯಾಗಿದ್ದು, ಪತಿ ಹುಡುಕಿಕೊಡುವಂತೆ ಪತ್ನಿ ಲಕ್ಷ್ಮಮ್ಮ ದೂರು ನೀಡಿದ್ದಾರೆ. ಜ.1 ರಂದು ಮಹದೇಶ್ವರ ಬೆಟ್ಟಕ್ಕೆ ಹೋಗಿ ಬರುವುದಾಗಿ ಮನೆಯಿಂದ ಹೋದ ಪಾಪಣ್ಣ ಬೆಟ್ಟಕ್ಕೆ ಹೋಗಿ ದೇವರ ದರ್ಶನ ಪಡೆದು ಮರುದಿನ 3.30ಕ್ಕೆ ತಿ.ನರಸೀಪುರ ಸಾರಿಗೆ ಬಸ್ ನಿಲ್ದಾಣದಲ್ಲಿ ಇಳಿದು, ಜೊತೆಯಲ್ಲಿದ್ದವರಿಗೆ ಸ್ವಲ್ಪ ತಡವಾಗಿ ಬರುತ್ತೇನೆ ನೀವು ಹೋಗಿ ಎಂದು ಹೇಳಿ ಅಲ್ಲೇ ಉಳಿದುಕೊಂಡವರು ಈವರೆಗೂ ಮನೆಗೆ ಬಂದಿಲ್ಲ ಎಂದು ಪಾಪಣ್ಣ ಅವರ ಪತ್ನಿ ಲಕ್ಷ್ಮಮ್ಮ ಪೊಲೀಸರಿಗೆ ದೂರು ನೀಡಿದ್ದಾರೆ.

ಜ್ಞಾನ, ವೈರಾಗ್ಯಗಳ ಬಯಲ ಬೆಳಕು ಸಿದ್ದೇಶ್ವರ ಶ್ರೀಗಳು

ಆಧ್ಯಾತ್ಮ ಚಿಂತಕ ಶಂಕರ್ ದೇವನೂರು ಬಣ್ಣನೆ

ನಂಜನಗೂಡು, ಜ.8– ಸಂತಶ್ರೇಷ್ಠ ಶ್ರೀಸಿದ್ದೇಶ್ವರ ಸ್ವಾಮೀಜಿ ಜ್ಞಾನ, ವೈರಾಗ್ಯಗಳ ಬಯಲ ಬೆಳಕು ಎಂದು ಆಧ್ಯಾತ್ಮ ಚಿಂತಕ ಶಂಕರ್ ದೇವನೂರು ಬಣ್ಣಿಸಿದರು.

ನಗರದ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಯೋಗ ಮಹಾಮನೆಯಲ್ಲಿ 14ನೇ ವಾರ್ಷಿಕೋತ್ಸವದ ಅಂಗವಾಗಿ ಶನಿವಾರ ಸಂಜೆ ನಡೆದ ಶ್ರೀಸಿದ್ದೇಶ್ವರ ಸ್ವಾಮೀಜಿ ಅವರಿಗೆ ಧ್ಯಾನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಿದ್ದೇಶ್ವರ ಶ್ರೀಗಳ ಮಾತುಗಳು ಜ್ಯೋತಿರ್ಲಿಂಗ ಸ್ವರೂಪ. ಅವರ ಮಾತುಗಳು ಯಾರಿಗೆ ಸ್ಪರ್ಶ ಮಾಡುತ್ತವೆಯೋ ಅವರ ಬದುಕಲ್ಲಿ ಬೆಳಕು ಮೂಡಿದೆ. ಸಿದ್ದೇಶ್ವರ ಶ್ರೀಗಳು ತಮ್ಮ ವೈಯಕ್ತಿಕ ಬದುಕನ್ನು ಪರರ ಮನೋ ವಿಕಾಸಕ್ಕಾಗಿ ಸಮರ್ಪಿಸಿಕೊಂಡ ಮಹಾತ್ಮರು. ಅವರದ್ದು ಕೊರಳ ಧ್ವನಿಯಾಗಿರಲಿಲ್ಲ. ಕರುಳ ಧ್ವನಿಯಾಗಿತ್ತು. ಹೂವಿನಂತೆ ಜಗತ್ತಿಗೆ ಪರಿಮಳ ಹರಿಡಿದ್ದಾರೆ. ಕರ್ಪೂರದಂತೆ, ಕಂದಲಿನಂತೆ ಅವರ ದೇಹ ಕರಗಿದೆ.



ಅವರ ದಾರ್ಶನಿಕ ಚಿಂತನೆಯ ಬೆಣ್ಣೆ ನಾಡಿನೆಲ್ಲೆಡೆ ಪಸರಿಸಿದೆ. ಹಾಗಾಗಿಯೇ ಅವರ ಜೀವನ ಪ್ರದರ್ಶನವಾಗದೇ ನಿದರ್ಶನವಾಗಿದೆ. ಸತ್ತು ಬದುಕುವವರ ಸಾಲಿನಲ್ಲಿ ಸಿದ್ದೇಶ್ವರರಿದ್ದಾರೆ ಎಂದು ಸ್ಮರಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ವಲಯ ಪ್ರಮುಖ ಡಾ.ವಿ.ರಂಗನಾಥ್ ಮಾತನಾಡಿ, ಸಿದ್ದೇಶ್ವರರು ಇಚ್ಛಾಮರಣಿಯಾಗಿದ್ದರು. ಹಾಗಾಗಿಯೇ ಅವರು ಆಸ್ಪತ್ರೆಗೆ ಹೋಗಲಿಲ್ಲ. ನಮ್ಮ ನಡುವಳಿಕೆಯಲ್ಲಿ ಸಾತ್ವಿಕ ಹಾಗೂ ಸಮಾಜಮುಖಿ ಚಿಂತನೆ ಅಳವಡಿಸಿಕೊಳ್ಳುವ ಮೂಲಕ ಅವರಿಗೆ ನಮನ ಸಲ್ಲಿಸಲು ನಾವೆಲ್ಲರೂ ಸಂಕಲ್ಪ ಮಾಡೋಣ ಎಂದು ಆಶಿಸಿದರು.

ಚುಂಚನಹಳ್ಳಿ ಹಾಗೂ ನವಿಲೂರು ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಮಾತನಾಡಿ, ಪ್ರಕೃತಿ ಆರಾಧಿಸುತ್ತಿದ್ದ ಸಿದ್ದೇಶ್ವರರು ನಿಸರ್ಗದೊಂದಿಗೆ ಮೌನ ಮಾತುಕತೆ ನಡೆಸುತ್ತಿದ್ದನ್ನು ಅವರ ಒಡನಾಟದಲ್ಲಿ ಕಂಡಿದ್ದೇನೆ. ಯಾರಿಗೂ ನೋವುಂಟು ಮಾಡದ ಸರಳ ಹಾಗೂ ಸಹಜ ಜೀವನ ಕಂಡು ನಮ್ಮೆಲ್ಲರಿಗೂ ಆದರ್ಶ ಬಿಟ್ಟು ಹೋಗಿದ್ದಾರೆ. ಕೈ, ಬಾಯಿ, ಮನಸ್ಸು ಶುದ್ಧವಾಗಿದ್ದರೆ ಜಗತ್ತೇ ಸುಂದರಮಯವಾಗಿರುತ್ತದೆ ಎಂಬ ಸರಳ ತತ್ವವನ್ನು ಜಗತ್ತಿಗೆ ಸಾರಿದ ಮಹಾನ್ ಸಂತರು ಎಂದರು.

ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಮಾರ್ಗದರ್ಶನದಲ್ಲಿ ಸಾಮೂಹಿಕವಾಗಿ ಓಂಕಾರ ಧ್ಯಾನ, ಜ್ಯೋತಿರ್ ಧ್ಯಾನ ಮಾಡುವ ಮೂಲಕ ಸಿದ್ದೇಶ್ವರ ಶ್ರೀಗಳಿಗೆ ಧ್ಯಾನಾರ್ಪಣೆ ಮಾಡಲಾಯಿತು. ಯೋಗ ಬಂಧುಗಳು ಗೀತಾರ್ಪಣೆ ಮೂಲಕ ಸ್ಮರಿಸಿದರು. ಕಾರ್ಯಕ್ರಮದಲ್ಲಿ 50 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ಕಾರ್ಯದರ್ಶಿ ಎನ್.ಆರ್.ಗಣೇಶ್ ಮೂರ್ತಿ, ನಂಜನಗೂಡು ಯೋಗ ಫೌಂಡೇಶನ್ ಅಧ್ಯಕ್ಷ ಪ್ರಕಾಶ್ ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಸ್ಪೂಕಿ ಕಾಲೇಜ್ (ಕ): ಬೆ.10.25ಕ್ಕೆ, ವೇದ (ಕ): ಮ.1ಕ್ಕೆ, ಸಂ.6.55ಕ್ಕೆ, ರಾ.9.55ಕ್ಕೆ, ಕಾಂತಾರ (ಕ): ಸಂ.4ಕ್ಕೆ.
ಸ್ಕ್ರೀನ್ 2	ಶ್ರೀ ಬಾಲಾಜಿ ಫೋಟೋ ಸ್ಟುಡಿಯೋ (ಕ): ಬೆ.10.50ಕ್ಕೆ, ಮಿಸ್ ನಂದಿನಿ (ಕ): ಮ.1.45ಕ್ಕೆ, ವಿ3 (ತ): ಸಂ.4.35ಕ್ಕೆ, ಸ್ಪೂಕಿ ಕಾಲೇಜ್ (ಕ): ರಾ.7.15ಕ್ಕೆ, ಮಲ್ಲಿಕಾಪುರಂ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಮಿಸ್ಟರ್ ಬ್ಯಾಚುಲರ್ (ಕ): ಬೆ.10.50ಕ್ಕೆ, ರಾ.7ಕ್ಕೆ, ರಾ.9.50ಕ್ಕೆ, ಥಗ್ ಆಫ್ ರಾಮಘಡ (ಕ): ಮ.1.45ಕ್ಕೆ, ಕಾಕ್ಟೇಲ್ (ಕ): ಸಂ.4.15ಕ್ಕೆ.
ಸ್ಕ್ರೀನ್ 4	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.50ಕ್ಕೆ, ಮ.2.30ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಮ.1.40ಕ್ಕೆ, ಸಂ.5.35ಕ್ಕೆ, ರಾ.9.30ಕ್ಕೆ,
ಸ್ಕ್ರೀನ್ 2	ವೇದ (ಕ): ಬೆ.10ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ಮರೆಯದೇ ಕ್ಷಮಿಸು ನೆನಪಾದರೆ (ಕ): ಮ.1.10ಕ್ಕೆ, ಮಲ್ಲಿಕಾಪುರಂ (ಮ): ರಾ.10.20ಕ್ಕೆ
ಸ್ಕ್ರೀನ್ 3	ಮಿಸ್ಟರ್ ಬ್ಯಾಚುಲರ್ (ಕ): ಬೆ.9.55ಕ್ಕೆ, ಸಂ.6.50ಕ್ಕೆ, ವೇದ (ಕ): ಮ.12.50ಕ್ಕೆ, ಸ್ಪೂಕಿ ಕಾಲೇಜ್ (ಕ): ಸಂ.4ಕ್ಕೆ, ರಾ.9.50ಕ್ಕೆ,
ಸ್ಕ್ರೀನ್ 4	ಬೇಡಿಯಾ (ಹಿಂ): ಬೆ.11.40ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಮ.2.50ಕ್ಕೆ, ಸಂ.6.40ಕ್ಕೆ, ವಿ3 (ತ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವೇದ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲಡ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೇದ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಿಸ್ಟರ್ ಬ್ಯಾಚುಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಾಂತಾರ (ಕ)	4 ಪ್ರದರ್ಶನಗಳು
ಸಂಗಂ	
ಸ್ಪೂಕಿ ಕಾಲೇಜ್ (ಕ)	4 ಪ್ರದರ್ಶನಗಳು
ಲಿಡೋ	
ಥಗ್ ಆಫ್ ರಾಮಘಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇದ (ಕ)	4 ಪ್ರದರ್ಶನಗಳು
ಪ್ರಭಾ	
ಲವ್ ಸ್ಟೋರಿ (ಕ) ಕಾಕ್ಟೇಲ್ (ಕ)	2 ಪ್ರದರ್ಶನಗಳು

ಮನೆ–ಮನೆಗೆ ಎಸ್‌ಬಿಐ ಸೇವೆ ಯೋಜನೆ ಜಾರಿ

ಎಸ್‌ಬಿಐ ಪ್ರಾದೇಶಿಕ ಕಚೇರಿ ವ್ಯವಸ್ಥಾಪಕ ಅಭಿಷೇಕ್ ಪಾಂಡೆ



ಹುಣಸೂರು, ಜ.8– ಸಾಮಾಜಿಕ ಭದ್ರತೆ ಹಿತದೃಷ್ಟಿಯಿಂದ ಮನೆ ಮನೆಗೆ ಎಸ್‌ಬಿಐ ಸೇವೆ ಯೋಜನೆಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಜಾರಿಗೊಳಿಸಿದೆ. ಇದರಲ್ಲಿ ಅಪಘಾತ ವಿಮೆ, ಸ್ವಾಭಾವಿಕ ವಿಮೆ ಸೇರಿದಂತೆ ಇನ್ನಿತರ ಸೌಲಭ್ಯಗಳಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕು ಎಂದು ಎಸ್‌ಬಿಐ ಪ್ರಾದೇಶಿಕ ಕಚೇರಿ ವ್ಯವಸ್ಥಾಪಕ ಅಭಿಷೇಕ್ ಪಾಂಡೆ ತಿಳಿಸಿದರು.

ನಗರದ ಎಸ್‌ಬಿಐ ಶಾಖೆಯಲ್ಲಿ ನಡೆದ ಮನೆ ಮನೆಗೆ ಎಸ್‌ಬಿಐ ಸೇವಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿ ಸುರಕ್ಷಾ ಬೀಮಾ ಯೋಜನೆಗೆ ಪ್ರತಿ ವರ್ಷ 20 ರೂ. ಕಟ್ಟಿದರೇ, 65 ವರ್ಷದವರೆಗೆ ಅಪಘಾತ ವಿಮೆ 2 ಲಕ್ಷ ರೂ. ದೊರೆಯುತ್ತದೆ. ಅದೇ ರೀತಿ ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬೀಮಾ ಯೋಜನೆಗೆ ಪ್ರತಿ ವರ್ಷ 430 ರೂ. ಕಟ್ಟಿದರೇ 50 ವರ್ಷದವರೆಗೆ ಸ್ವಾಭಾವಿಕ ಮರಣ ಹೊಂದಿದರೆ 2 ಲಕ್ಷ ವಿಮೆ ಹಣ ಸಿಗಲಿದೆ. ಸಾರ್ವಜನಿಕರು ಈ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಶಾಖಾ ವ್ಯವಸ್ಥಾಪಕ ಪ್ರಮೋದ್ ಮಾತನಾಡಿ, ಮನೆ ಮನೆಗೆ ಎಸ್‌ಬಿಐ. ಸೇವೆ ಯೋಜನೆಯಡಿ ಪ್ರಧಾನ ಮಂತ್ರಿ ಸುರಕ್ಷಾ ಮತ್ತು ಜೀವನ ಜ್ಯೋತಿ ಬೀಮಾ ಯೋಜನೆಗಳು ಉಪಯುಕ್ತವಾಗಿದ್ದು, ಕಷ್ಟ ಕಾಲದಲ್ಲಿ ನೆರವಿಗೆ ಬರುವ ಹಾಗೂ ಜೀವನ ಭದ್ರತೆ ಒದಗಿಸುವ ಯೋಜನೆಗಳಾಗಿವೆ ಎಂದರು.

ಎಸ್‌ಬಿಐನಿಂದ ಚಿನ್ನದ ಒಡವೆಗಳ ಮೇಲೆ ವಾರ್ಷಿಕ ಶೇ.8ರ ಅತೀ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತಿದ್ದು, ಅದರಲ್ಲೂ ರೈತರಿಗೆ ಇನ್ನೂ ಕಡಿಮೆ ದರದಲ್ಲಿ ಸಾಲ ಸೌಲಭ್ಯಗಳು ಸಿಗುತ್ತಿವೆ. ತಾಲೂಕಿನ ರೈತರು ಮತ್ತು ಸಾರ್ವಜನಿಕರು ನಮ್ಮ ಬ್ಯಾಂಕ್ ಸೇವೆ ಪಡೆಯಬೇಕು ಎಂದರು. ಕಾರ್ಯಕ್ರಮದಲ್ಲಿ ಕ್ಯಾಶಿಯರ್ ರಾಮ್‌ಬಾಬು, ಸಿಬ್ಬಂದಿಗಳಾದ ಪೂಜಾಶ್ರೀ, ವೆನಿಲ್ಲಾ, ನಿವೃತ್ತ ಶಾಲಾ ಶಿಕ್ಷಕ ಶಿವಣ್ಣ, ಶಿಕ್ಷಕ ನರಸಿಂಹ, ಖಾಸಗಿ ಉದ್ಯೋಗಿ ಶಿಲ್ಪ ಸೇರಿದಂತೆ ಇನ್ನಿತರರಿದ್ದರು.

ಕೆ.ಎಂ.ರಾಮಪ್ಪ ನಿಧನ



ಕಂಪಲಾಪುರ, ಜ.8– ಗ್ರಾಮದ ಕುರುಬ ಸಮಾಜದ ಹಿರಿಯ ಮುಖಂಡ ಕೆ.ಎಂ.ರಾಮಪ್ಪ (85) ಭಾನುವಾರ ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಗೀತ ಆಲಿಸುವುದರಿಂದ ಆರೋಗ್ಯದಲ್ಲಿ ಸುಧಾರಣೆ ಸಾಧ್ಯ

ಸ್ತ್ರೀ ರೋಗ ತಜ್ಞೆ ಡಾ. ಶಿಲ್ಪ ಅಭಿಮತ



ಮೈಸೂರಿನ ಶ್ರೀಕಾಂತ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ಸಿ.ವಿ. ಶಿಲ್ಪ ಅವರನ್ನು ಸಂಸ್ಥೆ ವತಿಯಿಂದ ಗೌರವಿಸಲಾಯಿತು.

ಮೈಸೂರು,ಜ.8-ಅಗ್ರಹಾರದಲ್ಲಿರುವ ಶ್ರೀಕಾಂತ ಮಹಿಳಾ ಪದವಿ ಪೂರ್ವ ಕಾಲೇಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸುವಿಧಾತ್ರಿ ಕಲಾ ಪ್ರತಿಷ್ಠಾನದ ಸಹ ಯೋಗದೊಂದಿಗೆ 'ಶ್ರೀಕಾಂತ ರಾಗಲಹರಿ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿ, ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಸಿ.ವಿ.ಶಿಲ್ಪ ಮಾತನಾಡುತ್ತಾ, ಸಂಗೀತದ ಆಲಾಪನೆಯಿಂದ ರೋಗ ಮಾಯವಾಗಿ, ಆರೋಗ್ಯ ವೃದ್ಧಿಯಾಗುತ್ತದೆ. ಸಂಗೀತ ಮನಸ್ಸಿಗೆ ಮುದ ನೀಡುವುದರ ಜೊತೆಗೆ, ಆನಂದವನ್ನು ಉಂಟು ಮಾಡುತ್ತದೆ. ಸಂಗೀತವು ಕೇಳುವುದರಿಂದ, ಭಾವನಾತ್ಮಕ ಸಂಬಂಧಗಳು ಸುಧಾರಿಸಿ, ರೋಗವನ್ನು ದೂರವಿಡಬಹುದೆಂದು ಅಭಿಪ್ರಾಯಪಟ್ಟರು. ಹೆಣ್ಣು ಮಕ್ಕಳು ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ, ಭಾವಗೀತೆ, ಹಿಂದೂಸ್ತಾನಿ ಮತ್ತು ಜಾನಪದ ಪ್ರಕಾರಗಳನ್ನು ಅಭ್ಯಾಸ ಮಾಡಬೇಕೆಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಮಹಿಳೆಯರು ಹೆಚ್ಚು ವಿದ್ಯಾವಂತರಾದರೆ ಸಮಾಜ ಹಾಗೂ ಕುಟುಂಬ ಸುಧಾರಣೆ ಸಾಧ್ಯ. ಪ್ರಸ್ತುತ ದಿನಗಳಲ್ಲಿ ಮೊಬೈಲ್ ಹಾವಳಿಯಿಂದ ಸಂಸ್ಕೃತಿ, ಆಚಾರ-ವಿಚಾರ, ಚಿಂತನೆಗಳನ್ನು ಮರೆಯುತ್ತಿರುವುದು ವಿಷಾದನೀಯ. ಹೆಣ್ಣು ಮಕ್ಕಳು ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಐಎಎಸ್, ಕೆಎಎಸ್ ಅಧಿಕಾರಿಗಳಾಗಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಲಯನ್ಸ್‌ನ ಮಾಜಿ ರಾಜ್ಯಪಾಲ ಡಾ.ನಾಗರಾಜ್ ಭೈರಿ, ಕೆ.ಎನ್. ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್‌ನ ಖಜಾಂಚಿ ಎನ್.ಎಸ್.ರಂಗರಾಜನ್, ಲಯನ್ ಹೆಚ್.ಅಶ್ವತ್ ನಾರಾಯಣ್, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಣಾಳ ಶಿಶು ತಜ್ಞರಾದ ಹಾಗೂ ಹಿನ್ನೆಲೆ ಗಾಯಕ ಡಾ.ಸುಮಂತ್ ವಸಿಷ್ಟ, ಕಾಲೇಜಿನ ಪ್ರಾಂಶುಪಾಲರಾದ ಸುಬ್ಬಲಕ್ಷ್ಮಿ ಮತ್ತಿತರರಿದ್ದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು